
ಸಾಹಿತ್ಯ ದಾಸೋಹ – ೨೨೦

ಸಂಚಿಕೆ 44 – ಜನವರಿ 2024

16.12.2023ರ ದಾಸೋಹದ ಬರಹಗಳ ಸಂಕಲನ







ಮೂರು ಕೃತಿಗಳ ಲೋಕಾರ್ಪಣೆ



ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ವೇದಿಕೆ

ಪುಟ ತೆರೆಯುವ ಮುನ್ನ . . .

ಆತ್ಮೀಯರೆ,

16, ಡಿಸೆಂಬರ್ 2023ರಂದು ನಡೆದ ಈ ವರ್ಷದ ಕೊನೆಯ ಹಾಗೂ 220ನೆಯ ಸಾಹಿತ್ಯ ದಾಸೋಹದ ಸಂಚಿಕೆಯನ್ನು ತಮ್ಮ ಮುಂದಿಡುತ್ತಿದ್ದೇವೆ.

ಈ ಸಾಹಿತ್ಯ ದಾಸೋಹದ ಅಧ್ಯಕ್ಷತೆಯನ್ನು ವಹಿಸಿ, ಎಲ್ಲರ ಪ್ರಸ್ತುತಿಗಳನ್ನು ವಿಶ್ಲೇಷಿಸಿದ ಶ್ರೀ ವೆಂಕಟೇಶ ಕಾಮತ್ ಅವರಿಗೆ ಹಾಗೂ ತಮ್ಮ ಬರಹಗಳನ್ನು ಪ್ರಸ್ತುತಪಡಿಸಿದ ಎಲ್ಲರಿಗೂ ವಂದನೆಗಳು.

ನಮ್ಮ ಪ್ರತಿಷ್ಠಾನದ ಆಶ್ರಯದಲ್ಲಿ ಡಿಸೆಂಬರ್ 31, 2023ರಂದು ನಮ್ಮ ಸದಸ್ಯರಾದ ಶ್ರೀಮತಿ ಶ್ರವಣಕುಮಾರಿಯವರ 'ಬೆಳಕು ಹರಿವ ಮುನ್ನ' ಸಣ್ಣ ಕಥಾ ಸಂಕಲನ ಹಾಗೂ ಶ್ರೀ ಗುರುರಾಜ ಶಾಸ್ತ್ರಿಯವರ 'ಬಾ ಗುರು ಪ್ರವಾಸ ಹೋಗೋಣ' ಎಂಬ ಪ್ರವಾಸ ಕಥನ ಮತ್ತು 'ಕತೆ ಕೋಸಂಬರಿ' ಎಂಬ ಕಥಾ ಸಂಕಲನದ ಬಿಡುಗಡೆ ಆಯಿತು. ಈ ಕುರಿತ ವರದಿಯೂ ಈ ಸಂಚಿಕೆಯಲ್ಲಿದೆ.

2023 – ನಮ್ಮ ವೇದಿಕೆಯನ್ನು ಸದಾ ಚಟುವಟಿಕೆಯಿಂದಿರಿಸಿದ ವರ್ಷ. 12 ಸಾಹಿತ್ಯ ದಾಸೋಹಗಳು ನಡೆದುದಲ್ಲದೆ, 12 ಪುಸ್ತಕಗಳ ಬಿಡುಗಡೆ, ಉಪನ್ಯಾಸ, ಸಂವಾದ, ಗಮಕ ವಾಚನ-ವ್ಯಾಖ್ಯಾನ, ಪುಸ್ತಕಾವಲೋಕನ ಮುಂತಾದ ಕಾರ್ಯಕ್ರಮಗಳು ಜರುಗಿದುವು. ಸದಸ್ಯರಿಗಾಗಿ ಸಣ್ಣ ಕಥಾ ಶಿಬಿರವನ್ನು ಆಯೋಜಿಸಿ, ನಂತರ ನಡೆಸಿದ 'ಸಣ್ಣ ಕಥಾ ಶ್ರಾವಣ' ಅಭಿಯಾನದಲ್ಲಿ ನಮ್ಮ ಸದಸ್ಯರಿಂದ 158 ಹೊಸ ಸಣ್ಣ ಕತೆಗಳು ರೂಪುಗೊಂಡದ್ದು ಮತ್ತೊಂದು ವಿಶೇಷ ಸಂಗತಿ. ಎಲ್ಲಕ್ಕಿಂತ ಮುಖ್ಯವಾಗಿ ಈ ವರ್ಷ 'ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ'ವನ್ನೂ ಸ್ಥಾಪಿಸಲಾಯಿತು. ಈ ಎಲ್ಲವನ್ನೂ ದಾಖಲಿಸಿದ '2023-ಸಿಂಹಾವಲೋಕನ' ಎಂಬ ವರದಿಯೂ ಇದರೊಂದಿಗಿದೆ.

ಈ ಸಂಚಿಕೆಯನ್ನು ರೂಪಿಸುವಲ್ಲಿ ಸಹಕರಿಸಿದ ಎಲ್ಲರಿಗೂ ವಂದನೆಗಳು.

2023ಕ್ಕೆ ವಿದಾಯ ಹೇಳುತ್ತಾ, 2024ನ್ನು ಸಂಭ್ರಮದಿಂದ ಸ್ವಾಗತಿಸೋಣ. ಹೊಸ ವರ್ಷದಲ್ಲಿ ವೇದಿಕೆಯ ಚಟುವಟಿಕೆಗಳು ಇನ್ನಷ್ಟು ವಿಸ್ತಾರಗೊಳ್ಳಲಿ ಎಂದು ಆಶಿಸೋಣ.

ಎಲ್ಲರಿಗೂ ಹೊಸ ವರ್ಷದ ಶುಭಾಶಯಗಳೊಂದಿಗೆ,

ಸಂಚಾಲಕ ಸಮಿತಿ
ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ, ಬೆಂಗಳೂರು 13.01.2024

ದಾಸೋಹದ ಪುಟಗಳಲ್ಲಿ

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ವೇದಿಕೆ


ಸಾಹಿತ್ಯ ದಾಸೋಹ – 220

ಕಾರ್ಯಕ್ರಮ ವರದಿ: ಶ್ರೀಮತಿ ರಾಧಿಕಾ ವಿ. ಗುಜ್ಜರ್

16ನೆಯ ಡಿಸೆಂಬರ್ 2023ರಂದು ಜರುಗಿದ 220ನೆಯ ನೋಡಿಯೋ ಸಾಹಿತ್ಯ ದಾಸೋಹವು, 2023ರ ಸಾಲಿನ ಕೊನೆಯ ದಾಸೋಹವಾಗಿದೆ. ಈ ಹಿನ್ನೆಲೆಯಲ್ಲಿ, ಈ ಸಾಲಿನಲ್ಲಿ ಜರುಗಿದ ಎಲ್ಲ 12 ಮಾಸಿಕ ನೋಡಿಯೋ ಸಾಹಿತ್ಯ ದಾಸೋಹಗಳ ಹಿನ್ನೋಟ ಇಲ್ಲಿದೆ.

ಶ್ರೀಮತಿ ಸುಜಾತ ರವೀಶ್ ಅವರ ಅಧ್ಯಕ್ಷತೆಯಲ್ಲಿ 28.01.2023 ರಂದು, 2023ನೆಯ ಸಾಲಿನ ಮೊದಲ ನೋಡಿಯೋ ಸಾಹಿತ್ಯ ದಾಸೋಹ ಜರುಗಿತು.

220ನೆಯ ನೋಡಿಯೋ ಸಾಹಿತ್ಯ ದಾಸೋಹದ ಅಧ್ಯಕ್ಷತೆ ವಹಿಸಿದವರು ಶ್ರೀ ವೆಂಕಟೇಶ ಕಾಮತ್. ಕಾರ್ಯಕ್ರಮವು ಇಳಿ ಮಧ್ಯಾಹ್ನ 3.35ಕ್ಕೆ ಆರಂಭವಾಯಿತು. ಮೊದಲಿಗೆ ಕಾರ್ಯಕ್ರಮದ ಸೂತ್ರಧಾರರಾದ ಶ್ರೀ ಕೆ.ಎನ್.ಮಹಾಬಲ ಅವರು ಎಲ್ಲರನ್ನೂ ಸ್ವಾಗತಿಸಿ, ಅಧ್ಯಕ್ಷರಾದ ಶ್ರೀ ವೆಂಕಟೇಶ ಕಾಮತ್ ಅವರನ್ನು ಪರಿಚಯಿಸಿದರು. ಚಿಕ್ಕಮಗಳೂರಿನಲ್ಲಿ ಜನಿಸಿದ ಶ್ರೀ ವೆಂಕಟೇಶ ಕಾಮತ್ ಅವರು, ಬೆಂಗಳೂರಿನಲ್ಲಿ ತಮ್ಮ ವಿದ್ಯಾಭ್ಯಾಸ ಪಡೆದು ನಂತರ ಭಾರತೀಯ ಸ್ಟೇಟ್ ಬ್ಯಾಂಕಿನಲ್ಲಿ ಉದ್ಯೋಗಿಯಾಗಿ ಹಲವು ವರ್ಷಕಾಲ ವಿವಿಧ ಶಾಖೆ/ಕಛೇರಿಗಳ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿ ಈಗ ನಿವೃತ್ತರಾಗಿ ಉಡುಪಿಯಲ್ಲಿ ವಾಸವಾಗಿದ್ದಾರೆ. ನಿರಂತರ ಕಲಿಕೆಗೆ ಆದ್ಯತೆ ನೀಡಿದ ಇವರು ತಮ್ಮ ನಲವತ್ತನೆಯ ವಯಸ್ಸಿನಲ್ಲಿ ಕಾನೂನು ಪದವಿ ಪಡೆದರೆ, ಇಂಗ್ಲಿಷ್ ಭಾಷೆ ಮತ್ತು ತತ್ವಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಗಳಿಸಿದಾಗ ಇವರ ವಯಸ್ಸು ಐವತ್ತು. ಬ್ಯಾಂಕಿನ ಸೇವೆಯಲ್ಲಿದ್ದಾಗಲೇ ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಯ ಬಗ್ಗೆ ಆಸಕ್ತಿ ಬೆಳೆಸಿಕೊಂಡ ಶ್ರೀ ವೆಂಕಟೇಶ ಕಾಮತರು, ಹಲವು ಕತೆ, ಕವನ, ಲೇಖನಗಳನ್ನು ಹಾಗೂ ಸುಮಾರು 100ಕ್ಕೂ ಹೆಚ್ಚು ಚಲನಚಿತ್ರ ವಿಮರ್ಶೆಗಳನ್ನು ಬರೆದಿದ್ದಾರಲ್ಲದೆ ಕೆಲವು ಕನ್ನಡ ಹಾಗೂ ತುಳು ಭಾಷೆಯ ಚಲನಚಿತ್ರ ತಂಡಗಳೊಂದಿಗೆ ಕಾರ್ಯನಿರ್ವಹಿಸಿದ ವಿಶೇಷ ಅನುಭವ ಹೊಂದಿದ್ದಾರೆಂದು ದಾಸೋಹದ ಅಧ್ಯಕ್ಷರನ್ನು ಶ್ರೀ ಮಹಾಬಲ ಅವರು ಪರಿಚಯಿಸಿ ಸ್ವಾಗತಿಸಿದರು.



ಸಾಹಿತ್ಯ ದಾಸೋಹ – 2023

2023ರ ವಿವಿಧ ದಾಸೋಹಗಳ ಅಧ್ಯಕ್ಷರ ಪಟ್ಟಿ

01. 28.02.2023 – ಶ್ರೀಮತಿ ಸುಜಾತ ರವೀಶ್ (ಸಾಹಿತ್ಯ ದಾಸೋಹ 209)
02. 11.02.2023 – ಶ್ರೀ ಪೋಲೇನಹಳ್ಳಿ ರಮೇಶ್ (210)
03. 25.03.2023 – ಶ್ರೀ ಕೆ.ಎನ್. ಭಗವಾನ್ (211)
04. 08.04.2023 – ಶ್ರೀ ರವಿ ಕುಸಬಿ (212)
05. 27.05.2023 – ಶ್ರೀ ಶ್ರೀಧರ ಬಾಣಾವರ (213)
06. 24.06,2023 – ಶ್ರೀಮತಿ ಸುವರ್ಣಲಕ್ಷ್ಮಿ (214)
07. 22.07.2023 – ಶ್ರೀಮತಿ ಸಿ.ಆರ್. ಕಮಲಾಕ್ಷಿ (215)
08. 26.08.2023 – ಶ್ರೀ ಕೆ.ಎನ್. ಮಹಾಬಲ (216)
09. 23.09.2023 – ಶ್ರೀಮತಿ ಮಾಧುರಿ ಕೃಷ್ಣ (217)
10. 22.10.2023 – ಶ್ರೀಮತಿ ಮಾಲತಿ ಶ್ರೀನಿವಾಸನ್(218)
11. 11.11.2023 – ಡಾ.ಶುಭಶ್ರೀ ಪ್ರಸಾದ್ (219)
12. 16.12.2023 – ಶ್ರೀ ವೆಂಕಟೇಶ ಕಾಮತ್ (220)

ನಂತರ ಸಂಚಾಲಕ ಮಂಡಳಿಯ ಪರವಾಗಿ ಶ್ರೀ ಬೆಂ.ಶ್ರೀ. ರವೀಂದ್ರ ಅವರು ತಮ್ಮ ಪಾಸ್ತಾವಿಕ ಮಾತುಗಳಲ್ಲಿ ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನದ ವೇದಿಕೆ ಹಮ್ಮಿಕೊಂಡಿರುವ ವಿವಿಧ ಸಾಹಿತ್ಯಕ ಚಟುವಟಿಕೆಗಳ ರೂಪುರೇಷೆ ನೀಡಿದರು.

ಆ ನಂತರ ಸಾಹಿತ್ಯ ದಾಸೋಹದ ನಿಮಿತ್ತ, ಪ್ರಸ್ತುತಕರ್ತರು ಹೆಸರು ನೋಂದಾಯಿಸಿದ ಪಟ್ಟಿಯ ಅನ್ವಯ ಲೇಖನಗಳು ಪ್ರಸ್ತುತವಾದವು. ಎಲ್ಲ ಸದಸ್ಯರ ಪ್ರಸ್ತುತಿಗಳು ಮುಗಿದ ನಂತರ ಅಧ್ಯಕ್ಷರಾದ ಶ್ರೀ ವೆಂಕಟೇಶ ಕಾಮತ್ ಅವರು ತಮ್ಮ ಸ್ವರಚಿತ ಕವನಗಳನ್ನು ವಾಚಿಸಿದರು. ಅಧ್ಯಕ್ಷರು ತಮ್ಮದೇ ಆದ ವಿಶಿಷ್ಟ ಶೈಲಿಯಲ್ಲಿ ಎಲ್ಲರ ಪ್ರಸ್ತುತಿಗಳನ್ನು ಉಲ್ಲೇಖಿಸಿ ಸರಳ ಮುಖಾಮುಖಿ ಸಂವಾದದಂತೆ ಅವಲೋಕನದ ನುಡಿಗಳನ್ನು ದಾಖಲಿಸಿದರು.

ಶ್ರೀ ಶೃಂಗೇಶ್ವರ ಶರ್ಮ ಅವರಿಂದ ಸಂಕಲಿಸಲ್ಪಟ್ಟ, ನವೆಂಬರ್ ತಿಂಗಳ ಸಾಹಿತ್ಯ ದಾಸೋಹದ ಪಿಡಿಎಫ್ ಪತ್ರಿಕೆ ತಾಂತ್ರಿಕ ದೋಷದಿಂದ ಬಿಡುಗಡೆಯಾಗಲಿಲ್ಲ. ಈ ಸಂಚಿಕೆಯ ಬಗ್ಗೆ ಶ್ರೀ ಕೆ.ಎನ್. ಮಹಾಬಲ ಅವರು ಕೆಲವು ಮಾತುಗಳನ್ನಾಡಿ, ಈ ಬಾರಿಯ ಸಂಚಿಕೆಯು 09.12.2023ರಂದು ಜರುಗಿದ "ಗ್ರಂಥಾಲಯದಲ್ಲಿ ಗಮಕ ಸಪರ್ಯೆ" ಕಾರ್ಯಕ್ರಮದ ವಿಶೇಷ ವಿವರಗಳನ್ನು ಒಳಗೊಂಡಿರುವ ಬಗ್ಗೆ ತಿಳಿಸಿದರು.

ಶ್ರೀ ಗುರುಪ್ರಸಾದ ಹಾಲ್ಕುರಿಕೆ ಅವರು ತಾಂತ್ರಿಕ ನಿರ್ವಹಣೆ ಮಾಡಿದರು. ಕೊನೆಯಲ್ಲಿ ಶ್ರೀಮತಿ ರಾಧಿಕಾ ವಿ.ಗುಜ್ಜರ್ ಅವರು ಅಧ್ಯಕ್ಷರಿಗೂ ಮತ್ತು ಎಲ್ಲ ಸಭಾಸದರಿಗೂ ವಂದನೆಗಳನ್ನು ಅರ್ಪಿಸಿದರು.

ಈ ಬಾರಿಯ ದಾಸೋಹವು ಬಹಳ ಸುದೀರ್ಘವಾಗಿ ನಾಲ್ಕು ಗಂಟೆಗಳಿಗೂ ಹೆಚ್ಚು ಕಾಲ ನಡೆಯಿತು. ಇಳಿ ಮಧ್ಯಾಹ್ನ 3.35ಕ್ಕೆ ಆರಂಭವಾಗಿದ್ದ ಸಾಹಿತ್ಯ ದಾಸೋಹ ಕಾರ್ಯಕ್ರಮವು ಇಳಿ ಸಂಜೆ 7.50ಕ್ಕೆ ಮುಕ್ತಾಯವಾಯಿತು.

((ಸಾಹಿತ್ಯ ದಾಸೋಹ-220 ಕಾರ್ಯಕ್ರಮವನ್ನು ಸಮನ್ವಯ ಸಮಿತಿ ಕನ್ನಡವೇ ಸತ್ಯ ವೇದಿಕೆಯ ಯುಟ್ಯೂಬ್‌ನಲ್ಲಿಯೂ ವೀಕ್ಷಿಸಬಹುದು)


***

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ವೇದಿಕೆ

ಸದಸ್ಯರ ಮೂರು ಕೃತಿಗಳ ಲೋಕಾರ್ಪಣೆ

ಕಾರ್ಯಕ್ರಮ ವರದಿ – ಟಿ.ಕೆ. ರಂಗನಾಥ್







ಬೆಂಗಳೂರಿನ ಬಸವನಗುಡಿಯ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್'ನ ಬಿಪಿ ವಾಡಿಯಾ ಸಭಾಂಗಣದಲ್ಲಿ 31, ಡಿಸೆಂಬರ್ 2023ರಂದು ಕಿಕ್ಕಿರಿದ ಸಭಿಕರು ಅಪರೂಪದ ಎರಡು ಸಣ್ಣ ಕಥಾಸಂಕಲನ ಹಾಗೂ ಒಂದು ಪ್ರವಾಸ ಕಥನ ಕೃತಿಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಭಾಗಿಯಾದರು.

ಭಾರತೀಯ ಸ್ಟೇಟ್ ಬ್ಯಾಂಕಿನ ನಿವೃತ್ತ ಉದ್ಯೋಗಿಗಳಾದ ಶ್ರೀಮತಿ ಟಿ.ಎಸ್. ಶ್ರವಣಕುಮಾರಿ ಅವರ ಸಣ್ಣ ಕಥಾಸಂಕಲನ "ಬೆಳಕು ಹರಿಯುವ ಮುನ್ನ" ಮತ್ತು ಶ್ರೀ ಗುರುರಾಜ ಶಾಸ್ತ್ರಿಯವರ "ಕತೆ–ಕೋಸಂಬರಿ" ಸಣ್ಣ ಕಥಾಸಂಕಲನ ಹಾಗೂ "ಬಾ ಗುರು ಪ್ರವಾಸ ಹೋಗೋಣ" ಪ್ರವಾಸ ಕಥನ ಕೃತಿಗಳನ್ನು. ಖ್ಯಾತ



ಕಾದಂಬರಿಕಾರರಾದ ಶ್ರೀ ಗಜಾನನ ಶರ್ಮ ಅವರು ಲೋಕಾರ್ಪಣೆ ಮಾಡಿ, ಕೃತಿಕಾರ ತನ್ನ ಅನುಭವವನ್ನು ಓದುಗನಿಗೆ ದಾಟಿಸಲು ಸಮರ್ಥನಾದರೆ ಅದೇ ಕೃತಿಯ ಯಶಸ್ಸು ಎಂದರು.



ಆಹ್ವಾನ ಗೀತೆ

ನೀವು ಬನ್ನಿರಿ ಕೂಡಿ ಬನ್ನಿರಿ

– ಬೆಂಶ್ರೀ ರವೀಂದ್ರ

ನೀವು ಬನ್ನಿರಿ ಕೂಡಿ ಬನ್ನಿರಿ ಹಬ್ಬಕೆ
ಹೊತ್ತಿಗೆ ಹೊರಡಿಸುವ ಸಂಭ್ರಮಕೆ
ಗೆಳೆಯರೊಡೆ ಹರಟೆಯ ಸಂತಸಕೆ
ಅಕ್ಷರ ಪ್ರೋತ್ಸಾಹಿಸುವ ಸಂಸ್ಕೃತಿಗೆ

ದೂರ ಬಹಳಿಲ್ಲ ಮನಕೆ ಹತ್ತಿರವು
ಹಗಲು ಹತ್ತು ಮೂವತ್ತು ಸಮಯವು
ರವಿವಾರವೆಂದು ರಜೆಯಿಲ್ಲ ನಿಮಗೆ
ನಿಮ್ಮ ಆಗಮನ ಆನಂದ ನಮಗೆ

ಸಾಹಿತ್ಯರಂಗ ಪ್ರವೇಶ ಗುರುವಿನದು
ಬರೆದಿಹ ಎರಡು ಕೃತಿಗಳನು ಒಮ್ಮೆಗೆ
ಶ್ರವಣಕುಮಾರಿಯ ಪಳಗಿದ ಬರೆಹವದು
ನಿಮ್ಮ ಸಮ್ಮುಖದಿ ಬಿಡುಗಡೆಯ ಹೆಮ್ಮೆಗೆ

ನಾಳೆ ಬನ್ನಿರಿ ಹಗಲು ಹತ್ತೂವರೆಗೆ
ಬಸವನಗುಡಿ ವಾಡಿಯಾ ಅಂಗಳಕೆ
ಬರುವರು ಕೋವಿದರು ಹರಸಲಿಕೆ
ಸಮನ್ವಯ ಸಮಿತಿಯ ಹೊಸಹೆಜ್ಜೆಗೆ

***

ಮುಕ್ತಕಗಳು

ಪುಸ್ತಕ ಬಿಡುಗಡೆ

ಹರುಷದಲಿ ಪುಸ್ತಕದ ಬಿಡುಗಡೆಯ ಮಾಡಿದರು
ಪರಿಷೆಯಲಿ ಕರತಾಡನದ ಪುಷ್ಪವೃಷ್ಟಿ
ವರುಷದಾ ಕೊನೆಯದುವೆ ಸಂತಸದ ಸುದಿನವದು
ನೆರೆದಿದ್ದವರಿಗೆಲ್ಲ ನೇತ್ರತನಯೆ.

ಅಭಿಮಾನಿಗಳ ಬಳಗ ಕಿಕ್ಕಿರಿದು ಸೇರಿದರು
ಅಭಿನಂದನೆಯ ಮಹಾಪೂರ ಹರಿಸುತಲಿ
ಸಭಿಕರಿಗೆ ಸಸಕಸದ ಸಾಹಿತ್ಯ ಸಂಭ್ರಮವು
ಉಭಯಕುಶಲೋಪರಿಯು ನೇತ್ರತನಯೆ.

– ಪೂರ್ಣಿಮ ಭಗವಾನ್

"ಬೆಳಕು ಹರಿಯುವ ಮುನ್ನ" ಕಥಾಸಂಕಲನದ ಪರಿಚಯವನ್ನು ಕತೆಗಾರ ಶ್ರೀ ಜಿ.ವಿ.ಅರುಣ ಅವರೂ, "ಕತೆ–ಕೋಸಂಬರಿ" ಕಥಾ ಸಂಕಲನದ ಪರಿಚಯವನ್ನು ವಿಶ್ವವಾಣಿ ಪತ್ರಿಕೆಯ ಸಾಹಿತ್ಯ ಪುರವಣಿ "ಆರಾಮ/ ವಿರಾಮ"ದ ಸಂಪಾದಕ ಶ್ರೀ ಶಶಿಧರ ಹಾಲಾಡಿಯವರೂ ಮಾಡಿಕೊಟ್ಟರು. "ಬಾ ಗುರು ಪ್ರವಾಸ ಹೋಗೋಣ" ಪ್ರವಾಸ ಕಥನವನ್ನು ಖ್ಯಾತ ನಾಟಕಕಾರ, ಕಾದಂಬರಿಕಾರ, ಹಾಸ್ಯ ಸಾಹಿತಿ ಶ್ರೀ ಎಂ.ಎಸ್. ನರಸಿಂಹಮೂರ್ತಿಯವರು ತಮ್ಮದೇ ಆದ ವಿಶಿಷ್ಟ ಶೈಲಿಯಲ್ಲಿ ಪರಿಚಯಿಸಿದರು.

ಕೃತಿಗಳ ಲೇಖಕರಾದ ಶ್ರೀಮತಿ ಶ್ರವಣಕುಮಾರಿ ಮತ್ತು ಶ್ರೀ. ಗುರುರಾಜ ಶಾಸ್ತ್ರಿಯವರು ತಮ್ಮ ಈ ಕೃತಿಗಳ ರಚನೆಯ ಹಿನ್ನೆಲೆಯನ್ನು ವಿವರಿಸಿ, ತಮ್ಮ ಸಾಹಿತ್ಯ ಸಾಧನೆಗೆ ಹಾಗೂ ಕೃತಿಗಳ ಬಿಡುಗಡೆಗೆ ನೆರವಾದವರಿಗೆ ಕೃತಜ್ಞತೆ ಸಲ್ಲಿಸಿದರು. ಈ ಎರಡೂ ಪುಸ್ತಕಗಳನ್ನು ಪ್ರಕಟಿಸಿರುವ ಸ್ನೇಹಾ ಪ್ರಕಾಶನದ ಶ್ರೀ ಪರಶಿವಪ್ಪನವರು ಮಾತನಾಡಿ, ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನದ ಜೊತೆಗಿನ ತಮ್ಮ ಸಂಸ್ಥೆಯ ಉತ್ತಮ ಬಾಂಧವ್ಯ ಇದೇ ರೀತಿ ಮುಂದುವರೆಯಲಿ ಎಂದು ಆಶಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಪ್ರತಿಷ್ಠಾನದ ಅಧ್ಯಕ್ಷರಾದ ಶ್ರೀ ಬೆಂ.ಶ್ರೀ. ರವೀಂದ್ರ ಅವರು ಯಾವುದೇ ಕೃತಿಯ ಯಶಸ್ಸಿಗೆ ಕೃತಿಕಾರರು ವಹಿಸಬೇಕಾದ ನಿರಂತರ ಪರಿಶ್ರಮದ ಅಗತ್ಯತೆಯನ್ನು ವಿವರಿಸಿ, ಈ ಕೃತಿಗಳ ಬಿಡುಗಡೆಯ ಸಮಾರಂಭದ ಯಶಸ್ಸಿಗಾಗಿ ಸಹಕರಿಸಿದ ಎಲ್ಲರಿಗೂ ತಮ್ಮ ಕೃತಜ್ಞತೆಗಳನ್ನು ಸಮರ್ಪಿಸಿದರು.

ಕಾರ್ಯಕ್ರಮವು ಶ್ರೀ ದತ್ತಾತ್ರೇಯ ಮತ್ತು ಶ್ರೀ ಶ್ರೀಪಾದ ವಲ್ಲಭ ಅವರಿಂದ "ಇನ್ನಷ್ಟು ಬೇಕೆನ್ನ ಹೃದಯಕ್ಕೆ ರಾಮ" ಎಂಬ ಪ್ರಾರ್ಥನಾ ಗೀತೆಯೊಂದಿಗೆ ಆರಂಭ ವಾಯಿತು. ಸಮಾರಂಭಕ್ಕೆ ಆಗಮಿಸಿದ ಅತಿಥಿಗಳು ಹಾಗೂ ಸಭಿಕರನ್ನು ಶ್ರೀ ರವಿ ಕುಸಬಿ ಅವರು ಸ್ವಾಗತಿಸಿದರು. ಕಾರ್ಯಕ್ರಮದ ಯಶಸ್ಸಿಗೆ ಕಾರಣರಾದ ಎಲ್ಲರಿಗೂ ಶ್ರೀ ಹು.ವಾ.ಶ್ರೀಪ್ರಕಾಶ್ ಅವರು ವಂದನೆಗಳನ್ನು ಸಲ್ಲಿಸಿದರು. ಕಾರ್ಯಕ್ರಮದ ನಿರೂಪಣೆಯನ್ನು ಶ್ರೀಮತಿ ಡಾ. ಶುಭಶ್ರೀ ಪ್ರಸಾದ್ ನಿರ್ವಹಿಸಿದರು.

***

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ವೇದಿಕೆ

2023 - ಸಿಂಹಾವಲೋಕನ

– ಹು.ವಾ. ಶ್ರೀಪ್ರಕಾಶ್

ಶ್ರೀ ಬೆಂ.ಶ್ರೀ. ರವೀಂದ್ರರವರ ಪ್ರಧಾನ ಸಂಚಾಲಕತ್ವದಲ್ಲಿ 2014ರಲ್ಲಿ ಆರಂಭವಾದ ಸಮನ್ವಯ ಸಮಿತಿ ಕನ್ನಡವೇ ಸತ್ಯ ವಾಟ್ಸಾಪ್ ವೇದಿಕೆಯು ಯಾವುದೇ ರಾಜಕೀಯ, ಧಾರ್ಮಿಕ ತತ್ವಗಳಿಗೆ ಬದ್ಧವಾಗದೆ, ರಾಜಕೀಯದ ಪರ ವಿರೋಧಗಳಿಂದ ದೂರವಾದ ಶುದ್ಧ ಕನ್ನಡಪರ ಸಾಹಿತ್ಯ ಸಂಸ್ಕೃತಿಗೆ ಸಂಬಂಧಿಸಿದ ವೇದಿಕೆಯಾಗಿ ವೈವಿಧ್ಯಮಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಸಾಹಿತ್ಯ ಕ್ಷೇತ್ರದಲ್ಲಿ ಗುರುತರ ಸಾಧನೆಗಳನ್ನು ಮಾಡುತ್ತ ಸಾಗಿದೆ.

ಭಾರತೀಯ ಸ್ಟೇಟ್ ಬ್ಯಾಂಕ್ ಕನ್ನಡ ಸಂಘಗಳ ಸಮನ್ವಯ ಸಮಿತಿಯು 1999ರಲ್ಲಿ ಆರಂಭಿಸಿದ 'ಸಾಹಿತ್ಯ ದಾಸೋಹ' ಕಾರ್ಯಕ್ರಮವನ್ನು ಪ್ರತಿ ತಿಂಗಳೂ ತಪ್ಪದೇ ಮುನ್ನಡೆಸುತ್ತಾ ಬಂದಿದ್ದು, ಡಿಸೆಂಬರ್ 2023ರಲ್ಲಿ ನಡೆದದ್ದು 220ನೆಯ ಸಾಹಿತ್ಯ ದಾಸೋಹ. ಸಾಹಿತ್ಯ ದಾಸೋಹ ಎಂದರೆ ಸಾಹಿತ್ಯಾಸಕ್ತರೆಲ್ಲ ಒಂದೆಡೆ ಸೇರಿ, ತಾವು ಕನ್ನಡದಲ್ಲಿ ರಚಿಸಿದಂತಹ ಲೇಖನ, ಕತೆ, ಕವನ ಮುಂತಾದುವುಗಳನ್ನು ಪ್ರಸ್ತುತಿಪಡಿಸುತ್ತಾರೆ. ಪ್ರತಿ ತಿಂಗಳೂ ದಾಸೋಹದಲ್ಲಿ ಸುಮಾರು 25ರಿಂದ 30 ಜನ ಸದಸ್ಯರು ತಮ್ಮ ಪ್ರಸ್ತುತಿಗಳನ್ನು ಆರು ನಿಮಿಷಗಳ ಸಮಯ ಮಿತಿಯಲ್ಲಿ ಮಂಡಿಸುತ್ತಿದ್ದು ಸುಮಾರು 3 ಗಂಟೆಗಳ ಕಾಲ ಈ ಕಾರ್ಯಕ್ರಮ ನಡೆಯುತ್ತದೆ. ದಾಸೋಹದ ಅಧ್ಯಕ್ಷರು ಎಲ್ಲ ಪ್ರಸ್ತುತಿಗಳನ್ನು ಅವಲೋಕಿಸಿ ತಮ್ಮ ಅಭಿಪ್ರಾಯವನ್ನು ಕೊನೆಯಲ್ಲಿ ನೀಡುತ್ತಾರೆ. ಆರಂಭದಲ್ಲಿ ತಿಂಗಳಿಗೊಮ್ಮೆ ಸಾಹಿತ್ಯಾಸಕ್ತರೋರ್ವರ ಮನೆಯಲ್ಲಿ ಅವರ ಆತಿಥ್ಯದೊಂದಿಗೆ ನಡೆಯುತ್ತಿದ್ದ ಸಾಹಿತ್ಯ ದಾಸೋಹವು ಕ್ರಮೇಣ ಕಿರು ಸಭಾಂಗಣಗಳಲ್ಲಿ ಮುಂದುವರೆಯಿತು. ಕೊರೊನಾ ಪಿಡುಗು ಜಗತ್ತನ್ನು ಆವರಿಸಿದಾಗ 'ನೋಡಿಯೋ ಸಾಹಿತ್ಯ ದಾಸೋಹ' ಎಂಬ ಉಪವೇದಿಕೆಯನ್ನು ಆರಂಭಿಸಿ, ಈ ವೇದಿಕೆಯಲ್ಲಿ ಜಿ-ಮೀಟ್ ತಂತ್ರಜ್ಞಾನವನ್ನು ಬಳಸಿಕೊಂಡು ಅಂತರ್ಜಾಲ ಮುಖೇನ ಪ್ರತಿ ತಿಂಗಳ ಸಾಹಿತ್ಯ ದಾಸೋಹ ಮಾತ್ರವಲ್ಲದೆ ಹಲವಾರು ಉಪನ್ಯಾಸ, ಸಂವಾದ, ಗಮಕ ವಾಚನ-ವ್ಯಾಖ್ಯಾನ, ಗಾಯನ, ನಾಟಕ, ಕೃತಿ ಬಿಡುಗಡೆ, ಇನ್ನೂ ಮೊದಲಾದ ಕಾರ್ಯಕ್ರಮ ಗಳನ್ನು ನಡೆಸಿಕೊಂಡು ಬರಲಾಗುತ್ತಿದೆ.

ಇಲ್ಲಿಯವರೆಗೆ ವೇದಿಕೆಯ ಸದಸ್ಯರು ರಚಿಸಿದ ಸದಸ್ಯರ ಐದು ಸಾಹಿತ್ಯ ಗುಚ್ಛಗಳು ಪ್ರಕಟವಾಗಿವೆ. ಅವುಗಳೆಂದರೆ, ಸಾಹಿತ್ಯ ಸಂಚಿಕೆ (2003), ಸಾಹಿತ್ಯಧಾರೆ (2012), ಸಾಹಿತ್ಯ ಮಕರಂದ (2013), ಸಾಹಿತ್ಯ ಮಂದಾರ (2016), ಸಾಹಿತ್ಯ ಸಿರಿ(2019) ಮತ್ತು ವೇದಿಕೆಯ ಸುಮಾರು 88 ಸದಸ್ಯರು ಭಾಗವಹಿಸಿ ಯಶಸ್ವಿಯಾಗಿ ನಡೆಸಿದ ಕವನ ಸರಪಳಿ 'ಸರಸಮ್ಮನ ಸತ್ಕಾರ ಸರಪಳಿಗೆ ನಮಸ್ಕಾರ' (2021) ಎಂಬ ಕೃತಿಗಳು.

ಈ ವರ್ಷ ಹೊರತಂದ 'ಪಲ್ಲಟ' ಎಂಬ ವಿನೂತನ ಖೋ ಕಾದಂಬರಿಯು ವೇದಿಕೆಗೆ ಮತ್ತೊಂದು ಹೆಮ್ಮೆಯ ಗರಿ. ವೇದಿಕೆಯ 27 ಸದಸ್ಯರು ಒಬ್ಬರಿಗೊಬ್ಬರು ಖೋ ಕೊಡುವುದರ ಮೂಲಕ ರಚಿಸಿದ 27 ಅಧ್ಯಾಯ ಗಳನ್ನೊಳಗೊಂಡ ಈ ಕಾದಂಬರಿ ರಚನಾ ಪ್ರಕ್ರಿಯೆ ಕನ್ನಡ ಸಾಹಿತ್ಯ ಲೋಕದಲ್ಲೊಂದು ಅಪರೂಪದ ಪ್ರಯತ್ನ.
ವೇದಿಕೆಯ ಸ್ಥಾಪನೆ ಹಾಗೂ ವಿವಿಧ ಚಟುವಟಿಕೆಗಳಿಗೆ ಮೂಲತಃ ಸ್ಫೂರ್ತಿದಾಯಕರಾಗಿದ್ದ ಪ್ರಾ. ಎಚ್.ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್ (ಎಚ್ಚೆಸ್ಕೆ) ಅವರನ್ನು ಕುರಿತಂತೆ ಡಾ. ಪ್ರಧಾನ್ ಗುರುದತ್ತರು ರಚಿಸಿದ 'ಎಚ್ಚೆಸ್ಕೆ ಬದುಕು

ಬರಹ ಸಂದರ್ಶನ' ಎಂಬ ಮಹತ್ಕೃತಿ ವೇದಿಕೆಯ ಹೆಮ್ಮೆಯ ಪ್ರಕಟಣೆಯಾಗಿದೆ. ಅಲ್ಲದೆ, ಈ ಕೃತಿಯ ಬಗ್ಗೆ ವೇದಿಕೆಯ ಸದಸ್ಯರ ಅನಿಸಿಕೆ ಗಳನ್ನೊಳಗೊಂಡ 'ಎಚ್ಚೆಸ್ಕೆ ಬದುಕು ಬರಹ ಸಂದರ್ಶನ– ಪುಸ್ತಕಾವಲೋಕನ' ಎಂಬ ಕೃತಿಯೂ ಸೇರಿದಂತೆ ಒಟ್ಟು ಮೂರು ಕೃತಿಗಳು ವೇದಿಕೆಯ ಈ ವರ್ಷದ ಹೆಮ್ಮೆಯ ಪ್ರಕಟಣೆಗಳು.

ವೇದಿಕೆಗೆ ಕಾನೂನಾತ್ಮಕ ಸ್ವರೂಪವನ್ನು ನೀಡುವ ದೃಷ್ಟಿಯಿಂದ ಈ ವರ್ಷ 'ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ' ಎಂಬ ಟ್ರಸ್ಟನ್ನು ಕೂಡ ಆರಂಭಿಸಲಾಗಿದೆ.

ಇವಿಷ್ಟೇ ಅಲ್ಲದೆ, ವೇದಿಕೆಯ ಇನ್ನೂ ಹಲವಾರು ಯೋಜನೆಗಳು – ಅಭಿಯಾನಗಳು ಚಾಲನೆಯಲ್ಲಿವೆ. ವೇದಿಕೆಯ ಕಾರ್ಯಕ್ರಮಗಳನ್ನು ಸಮನ್ವಯ ಸಮಿತಿಯ ಯುಟ್ಯೂಬ್ ವಾಹಿನಿಯಲ್ಲೂ ನೋಡಬಹುದು.

2023ನೆಯ ವರ್ಷದಲ್ಲಿ ಸಮನ್ವಯ ಸಮಿತಿ ಕನ್ನಡವೇ ಸತ್ಯ ವೇದಿಕೆಯು ನಡೆಸಿದ ವಿವಿಧ ಚಟುವಟಿಕೆಗಳ ಪಕ್ಷಿ ನೋಟ ಇಲ್ಲಿದೆ:

ಸಾಹಿತ್ಯ ದಾಸೋಹ:

'ಸಾಹಿತ್ಯ ದಾಸೋಹ'ವು ವೇದಿಕೆಯ ಪ್ರಮುಖ ಚಟುವಟಿಕೆಗಳಲ್ಲೊಂದು. ಶ್ರೀ ಕೆ.ಎನ್. ಮಹಾಬಲ ಅವರು ದಾಸೋಹದ ಸಂಚಾಲಕರಾಗಿದ್ದು, ಈ ಕಾರ್ಯಕ್ರಮವು ಪ್ರತಿ ತಿಂಗಳೂ ತಪ್ಪದೇ ನಡೆಯುತ್ತ ಬಂದಿದ್ದು ಇದುವರೆಗೆ 220 ದಾಸೋಹಗಳು ನಡೆದಿವೆ. ಈ ವರ್ಷ ನಡೆದ 12 ನೋಡಿಯೋ ಸಾಹಿತ್ಯ ದಾಸೋಹದ ಮಾಹಿತಿ ಕೆಳಕಂಡಂತಿದೆ.

ದಾಸೋಹದ ಕ್ರಮ ಸಂಖ್ಯೆ	ದಾಸೋಹ ನಡೆದ ದಿನಾಂಕ	ದಾಸೋಹದ ಅಧ್ಯಕ್ಷತೆ ವಹಿಸಿದವರ ಹೆಸರು
209	08.01.2023	ಶ್ರೀಮತಿ ಸುಜಾತಾ ರವೀಶ್
210	11.02.2023	ಶ್ರೀ ಪೋಲೇನಹಳ್ಳಿ ರಮೇಶ್ (ಪೋರ)
211	25.03.2023	ಶ್ರೀ ಕೆ.ಎನ್. ಭಗವಾನ್
212	08.04.2023	ಶ್ರೀ ರವಿ ಕುಸಬಿ
213	27.05.2023	ಶ್ರೀ ಶ್ರೀಧರ ಬಾಣಾವರ
214	26.06.2023	ಶ್ರೀಮತಿ ಸುವರ್ಣಲಕ್ಷ್ಮಿ
215	22.07.2023	ಶ್ರೀಮತಿ ಸಿ.ಆರ್. ಕಮಲಾಕ್ಷಿ
216	26.08.2023	ಶ್ರೀ ಕೆ.ಎನ್. ಮಹಾಬಲ
217	23.09.2023	ಶ್ರೀಮತಿ ಮಾಧುರಿ ಕೃಷ್ಣ
218	22.10.2023	ಶ್ರೀಮತಿ ಮಾಲತಿ ಶ್ರೀನಿವಾಸನ್
219	11.11.2023	ಶ್ರೀಮತಿ ಶುಭಶ್ರೀ ಪ್ರಸಾದ್
220	16.12.2023	ಶ್ರೀ ವೆಂಕಟೇಶ ಕಾಮತ್

ಪ್ರತಿ ತಿಂಗಳು ದಾಸೋಹದ ಜಿ ಮೀಟ್ ಕೊಂಡಿಯನ್ನು ಶ್ರೀಮತಿ ರಾಧಿಕಾ ಗುಜ್ಜರ್‌ರವರು ಕಳಿಸುತ್ತಿದ್ದು ಶ್ರೀಮತಿ ರೇಣುಕಾ ದೇಸಾಯಿ, ಗುರುರಾಜ ಶಾಸ್ತ್ರಿ ಹಾಗೂ ರವಿಕುಸುಬಿಯವರು ತಾಂತ್ರಿಕ ನಿರ್ವಹಣೆ ಮಾಡುತ್ತಿದ್ದಾರೆ. ಎಲ್ಲ ದಾಸೋಹದ ಕಾರ್ಯಕ್ರಮಗಳೂ ಸಾಹಿತ್ಯ ದಾಸೋಹ ಎಂಬ ಯೂಟ್ಯೂಬ್ ನಲ್ಲಿ ನೋಡಲು ಲಭ್ಯವಿದೆ.

ಸಾಹಿತ್ಯ ದಾಸೋಹದಲ್ಲಿ ಪ್ರಸ್ತುತವಾದ ಲೇಖನಗಳು ಮತ್ತು ತಿಂಗಳಲ್ಲಿ ನಡೆದ ಇತರ ಕಾರ್ಯಕ್ರಮದ ವರದಿಗಳನ್ನು ಸಾಹಿತ್ಯ ದಾಸೋಹ ಸಚಿತ್ರ ಸಂಚಿಕೆಯ ಮೃದುಪ್ರತಿಯನ್ನು ಶ್ರೀ ಶೃಂಗೇಶ್ವರ ಶರ್ಮ ರವರು ಆಸಕ್ತಿವಹಿಸಿ ಹೊರತರುತ್ತಿದ್ದು ಇದು ವೇದಿಕೆಯ ಕಾರ್ಯಕ್ರಮಗಳ ಉತ್ತಮ ದಾಖಲೆಯಾಗಿದೆ. ಈ ಹಿಂದೆ ಶ್ರೀ ಹೆಚ್.ಎಲ್. ಗುರುಪ್ರಸಾದ್ ಮತ್ತು ಶ್ರೀ ಗುರುರಾಜ ಶಾಸ್ತ್ರಿಯವರು ಸಾಹಿತ್ಯ ದಾಸೋಹದ ಸಂಚಿಕೆಯನ್ನು ರೂಪಿಸುತ್ತಿದ್ದರು. ಈವರೆವಿಗೂ ಒಟ್ಟು ಸಾಹಿತ್ಯ ದಾಸೋಹದ 44 ಸಂಚಿಕೆಗಳು ಪ್ರಕಟವಾಗಿವೆ.

ಪುಸ್ತಕ ಬಿಡುಗಡೆ ಕಾರ್ಯಕ್ರಮಗಳು:

ಫೆಬ್ರವರಿ 19

ನೋಡಿಯೋ ಸಾಹಿತ್ಯ ದಾಸೋಹ ವೇದಿಕೆಯಲ್ಲಿ ಶ್ರೀಮತಿ ಸರಸ್ವತಿ ನಟರಾಜ್ ಅವರ 'ಸೊನ್ನೆ ಮತ್ತು ಒಂದು' ಕೃತಿ ಬಿಡುಗಡೆಯಾಯಿತು. ಶ್ರೀ ಶಶಿಧರ ಹಾಲಾಡಿಯವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಕೃತಿಯನ್ನು ಬಿಡುಗಡೆ ಮಾಡಿದರು. ಶ್ರೀ ಮಹಾಬಲ ಅವರು ಕೃತಿಯ ಬಗ್ಗೆ ಮಾತನಾಡಿದರು

ಫೆಬ್ರವರಿ 16

'ಪಲ್ಲಟ. ಖೋ ಕಾದಂಬರಿಯ ಮುಖಪುಟದ ಬಿಡುಗಡೆ ಖ್ಯಾತ ಕವಿ, ಹಿರಿಯ ಸಾಹಿತಿ ಶ್ರೀ ಎಚ್.ಎಸ್. ವೆಂಕಟೇಶ ಮೂರ್ತಿಯವರ ಮನೆಯಲ್ಲಿ ನಡೆಯಿತು.

ಫೆಬ್ರವರಿ 26

ಇಂಡಿಯನ್ ಇನ್ಸಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ ಸಭಾಂಗಣದಲ್ಲಿ ವೇದಿಕೆಯ ವಿಶಿಷ್ಟ ವಿನೂತನ ಖೋ ಕಾದಂಬರಿ 'ಪಲ್ಲಟ' ಲೋಕಾರ್ಪಣೆಗೊಂಡಿತು. ಲೇಖಕಿ ಶ್ರೀಮತಿ ಜಯಶ್ರೀ ದೇಶಪಾಂಡೆ ಯವರು ಕೃತಿಯ ಬಿಡುಗಡೆ ಮಾಡಿದರು. ಕಾದಂಬರಿಗೆ ಮುನ್ನುಡಿ ಬರೆದಿರುವ ಶ್ರೀ ಎನ್.ಎಸ್.ಶ್ರೀಧರ ಮೂರ್ತಿಯವರು ಕೃತಿಯ ಕುರಿತು ಮಾತಾಡಿದರು.

ಮಾರ್ಚ್ 11

2023ರ 'ಎಚ್ಚೆಸ್ಕೆ ಬೆಳಕು-8' ಕಾರ್ಯಕ್ರಮದ ಅಂಗವಾಗಿ ಡಾ. ಪ್ರಧಾನ್ ಗುರುದತ್ತ ಅವರು ರಚಿಸಿರುವ ಮಹತ್ಕೃತಿ 'ಎಚ್ಚೆಸ್ಕೆ ಬದುಕು ಬರಹ ಸಂದರ್ಶನ (ಅಕ್ಷರ ಸಂತನ ಬಗೆಗಿನ ಅಪೂರ್ವ ಅಕ್ಷರಧಾರೆ)' ಎಂಬ ಕೃತಿಯು ಸಮನ್ವಯ ಸಮಿತಿ ಕನ್ನಡವೇ ಸತ್ಯ ವೇದಿಕೆ ಹಾಗೂ ಮೈಸೂರು ಬ್ಯಾಂಕ್ ಕನ್ನಡ ಬಳಗದ ಸಹಯೋಗದೊಂದಿಗೆ ಲೋಕಾರ್ಪಣೆಗೊಂಡಿತು.

ಪ್ರಜಾವಾಣಿ ದಿನಪತ್ರಿಕೆಯ ಕಾರ್ಯನಿರ್ವಾಹಕ ಸಂಪಾದಕರಾದ ಶ್ರೀ ರವೀಂದ್ರ ಭಟ್ ಅವರು ಪುಸ್ತಕವನ್ನು ಬಿಡುಗಡೆ ಮಾಡಿದರು. ಮಾಜಿ ಶಾಸಕ ಶ್ರೀ ಪಿ.ಜಿ.ಆರ್. ಸಿಂಧ್ಯಾ ಅವರು ಅಧ್ಯಕ್ಷತೆ ವಹಿಸಿದ್ದರು .ಶ್ರೀ ಕೆ.ಎನ್.

ಮಹಾಬಲರವರು ಪುಸ್ತಕ ಪರಿಚಯ ಮಾಡಿಕೊಟ್ಟರು. ಶ್ರೀಮತಿ ವೆಂಕಟಲಕ್ಷ್ಮೀ ಶ್ರೀಧರ್ ಅವರ ವೀಣಾ ವಾದನದೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಪ್ರಾಚಾರ್ಯ ಎಚ್ಚೆಸ್ಕೆ ಅವರ ಮಕ್ಕಳಾದ ಶ್ರೀ ಎಚ್ಚ್.ಕೆ. ಪಾರ್ಥಸಾರಥಿ ಹಾಗೂ ಶ್ರೀಮತಿ ಗೀತಾರವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಅಪಾರ ಸಂಖ್ಯೆಯಲ್ಲಿ ಜನರು ಆಗಮಿಸಿದ್ದು ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಿ ನಡೆಯಿತು.

ಜೂನ್ 10

ಡಾ ಶುಭಶ್ರೀ ಪ್ರಸಾದ್‌ರವರ 'ಶುಭನುಡಿ' ಹಾಗೂ ಶ್ರೀ ಬೆಂ.ಶ್ರೀ.ರವೀಂದ್ರರ 'ರವಿತೇಜನ ಮುಕ್ತಕಗಳು' ಕೃತಿಗಳನ್ನು ಖ್ಯಾತ ಕವಿ ಡುಂಡಿರಾಜ್‌ರವರು ಬಿಎಂ ಶ್ರೀ ಕಲಾಭವನದಲ್ಲಿ ಬಿಡುಗಡೆ ಮಾಡಿದರು. ಡಾ ಎಂ.ಎಸ್.ಅನಿತಾರವರು ಕೃತಿಗಳ ಕುರಿತು ಮಾತನಾಡಿದರು. ಶ್ರೀ ಎಂ.ಎಸ್. ನರಸಿಂಹ ಮೂರ್ತಿಯವರು ಅಧ್ಯಕ್ಷತೆ ವಹಿಸಿದ್ದರು.

ಅಗಸ್ಟ್ 26

ಶ್ರೀ ಎನ್.ಶಂಕರ್ ರಾವ್ ರವರ "ಸರೂ" ಕಥಾಸಂಕಲನವನ್ನು ಶ್ರೀ ಜಿ.ವಿ ಅರುಣ ಅವರು ನೋಡಿಯೋ ಸಾಹಿತ್ಯ ದಾಸೋಹ ವೇದಿಕೆಯಲ್ಲಿ ಬಿಡುಗಡೆ ಮಾಡಿದರು. ಶ್ರೀ ಬೆಂ ಶ್ರೀ ರವೀಂದ್ರರವರು ಕೃತಿಯ ಕುರಿತು ಮಾತನಾಡಿದರು

ಸೆಪ್ಟೆಂಬರ್ 9

'ಎಚ್ಚೆಸ್ಕೆ ಬದುಕು ಬರಹ ಸಂದರ್ಶನ – ಅವಲೋಕನ' ಕೃತಿಯನ್ನು ಮೈಸೂರಿನಲ್ಲಿ ಪ್ರಾಚಾರ್ಯ ಎಚ್ಚೆಸ್ಕೆಯವರ ಮನೆಯಲ್ಲಿ ಶ್ರೀ ಪ್ರಧಾನ್ ಗುರುದತ್ತರವರು ಬಿಡುಗಡೆ ಮಾಡಿದರು. 'ಎಚ್ಚೆಸ್ಕೆ ಬದುಕು–ಬರ–ಸಂದರ್ಶನ' ಕೃತಿಯ ಬಗ್ಗೆ ವೇದಿಕೆಯ 22 ಸದಸ್ಯರು ವೇದಿಕೆಯಲ್ಲಿ ಪ್ರಸ್ತುತಪಡಿಸಿದ ಅವಲೋಕನ ಲೇಖನಗಳ ಸಂಗ್ರಹ ಇದಾಗಿದೆ

ಅಕ್ಟೋಬರ್ 08

ಶ್ರೀಮತಿ ಗಿರಿಜಾ ರಾಜ್‌ರವರ 'ನೀಲಾಂಜನೆ ಮತ್ತು ಇತರ ಕಥೆಗಳು' ಕೃತಿ ನೋಡಿಯೋ ಸಾಹಿತ್ಯ ದಾಸೋಹ ವೇದಿಕೆಯಲ್ಲಿ ಬಿಡುಗಡೆಯಾಯಿತು ಶ್ರೀ ಶಶಿಧರ ಹಾಲಾಡಿಯವರು ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಪುಸ್ತಕ ಬಿಡುಗಡೆ ಮಾಡಿದರು. ಶ್ರೀ ಗುರುರಾಜ ಶಾಸ್ತ್ರಿಯವರು ಕೃತಿಯ ಪರಿಚಯ ಮಾಡಿಕೊಟ್ಟರು.

ಅಕ್ಟೋಬರ್ 29

ವೇದಿಕೆಯ ಸದಸ್ಯ ಶ್ರೀ ಎಸ್. ಧೀರೇಂದ್ರ ಅವರು ರಚಿಸಿದ 'ಹವ್ಯಾಸಿರಂಗದ ಮುತ್ತುರತ್ನಗಳು' ಕೃತಿಯ ಬಿಡುಗಡೆ ಸಮಾರಂಭವು ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನದ ಆಶ್ರಯದಲ್ಲಿ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ ಸಭಾಂಗಣದಲ್ಲಿ ನಡೆಯಿತು. ಖ್ಯಾತ ಚಿತ್ರನಟ ಪ್ರಣಯರಾಜ ಶ್ರೀನಾಥ್‌ರವರು ಕೃತಿಯ ಲೋಕಾರ್ಪಣೆ ಮಾಡಿದರು. ಶ್ರೀಮತಿ ಗಿರಿಜಾ ಲೋಕೇಶ್ ಅವರು ಮುಖ್ಯ ಅತಿಥಿಯಾಗಿ ಆಗಮಿಸಿದ್ದರು. .ಶ್ರೀ ಬೆಂ.ಶ್ರೀ. ರವೀಂದ್ರರವರ ಅಧ್ಯಕ್ಷತೆಯಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಶ್ರೀ ಜಿ.ಎನ್.ನರಸಿಂಹ ಮೂರ್ತಿಯವರು ಕೃತಿ ಪರಿಚಯ ಮಾಡಿದರು. ಹಿರಿಯ ರಂಗಭೂಮಿ ನಟರಾದ ಶ್ರೀ ಬಿ.ಆರ್. ಜಯರಾಂ, ಶ್ರೀ ವೆಂಕಟರಾವ್, ಶ್ರೀ ಟಿ.ಎಸ್.ಶಿವಶಂಕರ್ ಅವರನ್ನು ಸನ್ಮಾನಿಸಲಾಯಿತು. ರಂಗಭೂಮಿ ಕಲಾವಿದರಾದ ಶ್ರೀ ಸುಂದರರಾಜ್ ಸಂಗಡಿಗರು ಹಾಡಿದ ರಂಗಗೀತೆಗಳು ಕಾರ್ಯಕ್ರಮದ ವಿಶೇಷ ಆಕರ್ಷಣೆಯಾಗಿತ್ತು..

ಡಿಸೆಂಬರ್ 31

ಶ್ರೀಮತಿ ಟಿ.ಎಸ್. ಶ್ರವಣಕುಮಾರಿಯವರ 'ಬೆಳಕು ಹರಿವ ಮುನ್ನ' ಸಣ್ಣ ಕಥಾ ಸಂಕಲನ ಹಾಗೂ ಶ್ರೀ ಗುರುರಾಜ ಶಾಸ್ತ್ರಿಯವರ 'ಬಾ ಗುರು ಪ್ರವಾಸ ಹೋಗೋಣ' ಎಂಬ ಪ್ರವಾಸ ಕಥನ ಮತ್ತು 'ಕತೆ ಕೋಸಂಬರಿ' ಎಂಬ ಕಥಾ ಸಂಕಲನವನ್ನು ಇಂಡಿಯನ್ ಇನ್ಸಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ ಸಭಾಂಗಣದಲ್ಲಿ ಬಿಡುಗಡೆಯಾದವು. ಖ್ಯಾತ ಲೇಖಕರಾದ ಶ್ರೀ ಗಜಾನನ ಶರ್ಮ ಅವರು ಈ ಮೂರೂ ಪುಸ್ತಕಗಳನ್ನು ಬಿಡುಗಡೆ ಮಾಡಿದರು. ಕೃತಿಗಳ ಬಗ್ಗೆ ಕ್ರಮವಾಗಿ ಶ್ರೀ ಜಿ.ವಿ. ಅರುಣ, ಶ್ರೀ ಎಂ.ಎಸ್. ನರಸಿಂಹ ಮೂರ್ತಿ ಹಾಗೂ ಶ್ರೀ ಶಶಿಧರ ಹಾಲಾಡಿಯವರು ಮಾತನಾಡಿದರು. ಶ್ರೀ ಬೆಂ.ಶ್ರೀ. ರವೀಂದ್ರರವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಉಪನ್ಯಾಸ, ಸಂವಾದ ಹಾಗೂ ಗಮಕ ಕಾರ್ಯಕ್ರಮಗಳು:

ಜನವರಿ 28

'ಶ್ರೀ ಶಶಿಧರ ಹಾಲಾಡಿಯವರ ಬರಹಗಳು–ಒಂದು ಅವಲೋಕನ' ಎಂಬ ಉಪನ್ಯಾಸ ಸಂವಾದ ಕಾರ್ಯಕ್ರಮವನ್ನು ನೋಡಿಯೋ ಸಾಹಿತ್ಯ ದಾಸೋಹ ವೇದಿಕೆಯಲ್ಲಿ ಟಿ.ಎಸ್. ಶ್ರೀಮತಿ ಶ್ರವಣಕುಮಾರಿಯವರು ನಡೆಸಿಕೊಟ್ಟರು.

ಮೇ 20

'ಕವಿ ಶ್ರೀ ಕೆ.ವಿ. ತಿರುಮಲೇಶರ ಕಾವ್ಯದ ಹಾದಿ ಮತ್ತು ಕನ್ನಡ ಕವಿತೆ' ಎಂಬ ಕುರಿತಾಗಿ ಶ್ರೀ ಗೋನವಾರ ಕಿಶನ್ ರಾವ್‌ರವರು ನೋಡಿಯೋ ಸಾಹಿತ್ಯ ದಾಸೋಹ ವೇದಿಕೆಯಲ್ಲಿ ಉಪನ್ಯಾಸ ಕಾರ್ಯಕ್ರಮವನ್ನು ನಡೆಸಿಕೊಟ್ಟರು.

ಅಗಸ್ಟ್ 7

ಪ್ರತಿ ವರ್ಷದಂತೆ ಈ ಬಾರಿಯ 'ಪ್ರಾಚಾರ್ಯ ಎಚ್ಚೆಸ್ಕೆಯವರ ದತ್ತಿ ಉಪನ್ಯಾಸ–5' ಕಾರ್ಯಕ್ರಮವನ್ನು ಗೋಖಲೆ ಇನ್ಸಿಟ್ಯೂಟ್‌ನಲ್ಲಿ ನಡೆಯಿತು. 'ಕರ್ನಾಟಕದಲ್ಲಿ ಸೌಹಾರ್ದ ಸಹಕಾರ' ಎಂಬ ವಿಷಯದ ಬಗ್ಗೆ ಶ್ರೀ ಬಿ.ಎಸ್. ಚಂದ್ರಶೇಖರ್‌ರವರು ಉಪನ್ಯಾಸ ನೀಡಿದರು

ಆಗಸ್ಟ್ 8

'ಹೆಚ್.ಎಸ್.ವೆಂಕಟೇಶ ಮೂರ್ತಿಯವರ ಕಾವ್ಯ – ಒಂದು ಸಹೃದಯ ಅನುಸಂಧಾನ' ಎಂಬ ವಿಷಯದ ಬಗ್ಗೆ ಡಾ. ಆರ್.ಲಕ್ಷ್ಮೀನಾರಾಯಣರವರು ಉಪನ್ಯಾಸವನ್ನು ನೀಡಿದರು. ಈ ಕಾರ್ಯಕ್ರಮದಲ್ಲಿ ಶ್ರೀ ಎಚ್.ಎಸ.ವೆಂಕಟೇಶ ಮೂರ್ತಿಯವರೂ ಅಂತರ್ಜಾಲ ಮುಖೇನ ಭಾಗವಹಿಸಿ ಸ್ಪಂದಿಸಿದ್ದು ಒಂದು ವಿಶೇಷ.

ಆಗಸ್ಟ್ 13

ವೇದಿಕೆಯು ಹಮ್ಮಿಕೊಂಡ 'ಸಣ್ಣ ಕಥಾ ಶ್ರಾವಣ ಅಭಿಯಾನ'ದ ಹಿನ್ನೆಲೆಯಲ್ಲಿ ವೇದಿಕೆಯ ಸದಸ್ಯರಿಗಾಗಿ 'ಸಣ್ಣ ಕಥಾ ಶಿಬಿರ' ವನ್ನು ಇಂಡಿಯನ್ ಇನ್ಸಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್‌ನಲ್ಲಿ ಹಮ್ಮಿಕೊಳ್ಳಲಾಗಿತ್ತು. ಸರ್ವಶ್ರೀ ಎನ್. ಎಸ್.ಶ್ರೀಧರಮೂರ್ತಿ, ಸಂತೋಷ್ ಕುಮಾರ್ ಮೆಹಂದಳೆ, ವಾಸುದೇವ ನಾಡಿಗ್ ಅವರು ವಿವಿಧ ಗೋಷ್ಠಿಗಳಲ್ಲಿ ಭಾಗವಹಿಸಿ, ಸಣ್ಣ ಕಥಾ ರಚನೆಯ ವಿವಿಧ ಆಯಾಮಗಳ ಬಗ್ಗೆ ತಿಳಿಸಿದರು. ಶ್ರೀ ಶಶಿಧರ ಹಾಲಾಡಿಯವರ ಅಧ್ಯಕ್ಷತೆಯಲ್ಲಿ ಈ ಕಾರ್ಯಕ್ರಮ ಜರುಗಿತು

ಡಿಸೆಂಬರ್ 09

ಪ್ರತಿಷ್ಠಾನದ ವತಿಯಿಂದ ಕುಮಾರಸ್ವಾಮಿ ಬಡಾವಣೆಯಲ್ಲಿರುವ ರಾಜ್ಯ ಸರ್ಕಾರದ ನಗರ ಕೇಂದ್ರ ಗ್ರಂಥಾಲಯದಲ್ಲಿ ಹಮ್ಮಿಕೊಳ್ಳಲಾಗಿದ್ದ 'ಗ್ರಂಥದ ಗುಡಿಯಲ್ಲಿ ಗಮಕ ಸಪರ್ಯೆ' ಎಂಬ ಕಾರ್ಯಕ್ರಮದಲ್ಲಿ ಶ್ರೀಮತಿ ರಾಧಾಕೃಷ್ಣ ಸ್ವರೂಪ ಹಾಗೂ ಶ್ರೀಮತಿ ಶಾಂತಾ ನಾಗಮಂಗಲ ಅವರಿಂದ ಗಮಕವಾಚನ ಮತ್ತು ವ್ಯಾಖ್ಯಾನ ಕಾರ್ಯಕ್ರಮ ನಡೆಯಿತು. .

ವಿವಿಧ ಅಭಿಯಾನಗಳು:

ಏಪ್ರಿಲ್ 21 ರಿಂದ ಮೇ 15ರವರೆಗೆ

'ಎಚ್ಚೆಸ್ಕೆ ಬದುಕು ಬರಹ ಸಂದರ್ಶನ' ಪುಸ್ತಕಾವಲೋಕನ ಪಕ್ಷ ನಡೆಸಲಾಯಿತು. ಸುಮಾರು 22 ಜನ ಸದಸ್ಯರು ಭಾಗವಹಿಸಿ 48 ಲೇಖನಗಳನ್ನು ಪ್ರಸ್ತುತಪಡಿಸಿದರು.

ಅಗಸ್ಟ್17 ರಿಂದ ಸೆಪ್ಟೆಂಬರ್ 17

ಶ್ರಾವಣ ಮಾಸದಲ್ಲಿ ನಡೆದ 'ಸಣ್ಣ ಕಥೆಗಳ ಶ್ರಾವಣ ಅಭಿಯಾನ'ದಲ್ಲಿ ವೇದಿಕೆಯ 57 ಸದಸ್ಯರು ಭಾಗವಹಿಸಿ ಒಟ್ಟು 158 ಕಥೆಗಳನ್ನು ಬರೆದು ಅಭಿಯಾನವನ್ನು ಯಶಸ್ವಿಗೊಳಿಸಿದರು. ಈ ಕತೆಗಳನ್ನು ಲೇಖಕರು ಓದಿ ಆಡಿಯೋ ಪುಸ್ತಕ ಮಾಡುವ ಕಾರ್ಯ ನಡೆಯುತ್ತಿದೆ

ನವಂಬರ್ 1 ರಿಂದ 30

ಕೆಲವು ನಿರ್ದಿಷ್ಟ ವಿಷಯಗಳನ್ನು ನೀಡಿ 'ರಾಜ್ಯೋತ್ಸವ 2023 – ವಿಶೇಷ ಲೇಖನಮಾಲೆ' ಅಭಿಯಾನವನ್ನು ನಡೆಸಲಾಯಿತು. ವೇದಿಕೆಯ ಸದಸ್ಯರು ಸರಣಿ ಲೇಖನಗಳನ್ನು ಬರೆದು ಅಭಿಯಾನದಲ್ಲಿ ಪಾಲ್ಗೊಂಡರು.

ಪ್ರಾಚಾರ್ಯ ಎಚ್ಚೆಸ್ಕೆಯವರ ಸಮಗ್ರ ಪ್ರಬಂಧಗಳ ವಾಚನ ಅಭಿಯಾನ ನಡೆದಿದ್ದು, ಎಚ್ಚೆಸ್ಕೆಯವರು ಬರೆದಂತಹ ವಿವಿಧ ಪ್ರಬಂಧಗಳನ್ನು ವೇದಿಕೆಯ ಸದಸ್ಯರಿಂದ ಧ್ವನಿ ಮುದ್ರಿಸಿ ಎಚೆಸ್ಕೆ ಕೇಳ್ಕೊತ್ತಿಗೆಯಲ್ಲಿ ಪ್ರಸ್ತುತಪಡಿಸಲಾಗುತ್ತಿದೆ. ಶ್ರೀ ಗುರುಪ್ರಸಾದ್ ಹಾಲ್ಕುರಿಕೆಯವರ ನೇತೃತ್ವದಲ್ಲಿ ಈ ಅಭಿಯಾನ ನಡೆದಿದೆ.

ಆರಂಭದಲ್ಲಿ ಕೇವಲ ಬ್ಯಾಂಕಿಂಗ್ ವಲಯದ ಸದಸ್ಯರು ಮಾತ್ರವಿದ್ದ ಈ ವೇದಿಕೆಗೆ ಕಳೆದ ಕೆಲವು ವರ್ಷಗಳಿಂದೀಚೆಗೆ ಇತರ ವಲಯಗಳ ಸಾಹಿತ್ಯಾಸಕ್ತರಿಗೂ ಮುಕ್ತ ಅವಕಾಶ ನೀಡಿರುವುದು ವಿಶೇಷ. ಈ ವರ್ಷವೂ ಹಲವು ಹೊಸ ಸದಸ್ಯರು ಸೇರ್ಪಡೆಯಾಗಿದ್ದು ವೇದಿಕೆಯಲ್ಲಿ ಈಗ 195 ಜನ ಸದಸ್ಯರಿದ್ದಾರೆ ಪ್ರತಿದಿನವೂ ಸದಸ್ಯರು ತಮ್ಮ ಲೇಖನ, ಕಥೆ, ಕವನ, ವಿಮರ್ಶೆ, ಪ್ರತಿಕ್ರಿಯೆ ಮುಂತಾದುವನ್ನು ವಾಟ್ಸಾಪ್ ವೇದಿಕೆಯಲ್ಲಿ ಪ್ರಸ್ತುತಪಡಿಸುತ್ತಿದ್ದು ಸಾಹಿತ್ಯಕ್ಕೆ ಸಂಬಂಧಿಸಿದಂತೆ ಉತ್ತಮ ಚರ್ಚೆಗಳೂ ನಡೆಯುತ್ತವೆ. ನುರಿತ ಮತ್ತು ಖ್ಯಾತ ಬರಹಗಾರರೂ ಇರುವುದರಿಂದ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಈ ವೇದಿಕೆಯಲ್ಲಿ ಉತ್ತಮ ಮಾರ್ಗದರ್ಶನ ಮತ್ತು ಪ್ರೋತ್ಸಾಹ ಸದಸ್ಯರಿಗೆ ದೊರೆಯುತ್ತಿದೆ

'ಕವಿಮನ' ಎಂಬ ವಾರದ ಅಂಕಣವು ಕಳೆದ ಏಳು ವರ್ಷಗಳಿಂದ ಯಶಸ್ವಿಯಾಗಿ ನಡೆಯುತ್ತಾ ಬಂದಿದ್ದು ಸದಸ್ಯರು ಇದರಲ್ಲಿ ಉತ್ಸಾಹದಿಂದ ಭಾಗವಹಿಸುತ್ತಿದ್ದಾರೆ. ಪ್ರತಿ ಬುಧವಾರ ಸದಸ್ಯರೊಬ್ಬರ ಹೊಸ ಕವನವನ್ನು

ಪ್ರಸ್ತುತಪಡಿಸಿ ಇತರ ಸದಸ್ಯರಿಂದ ಕವನದ ವಸ್ತು, ಭಾಷೆ ಶೈಲಿಯ ಕುರಿತಂತೆ ಸ್ಪಂದನೆಗಳನ್ನು ವಾಟ್ಸಾಪ್ ವೇದಿಕೆಯಲ್ಲಿ ಹಂಚಿಕೊಳ್ಳಬೇಕೆಂದು ಕೋರಲಾಗುತ್ತದೆ. ಒಂದು ವಾರದವರೆಗೂ ಕವಿಯ ಹೆಸರನ್ನು ಗುಪ್ತವಾಗಿಡಲಾಗುತ್ತದೆ. ವಾರದ ಅಂತ್ಯದಲ್ಲಿ ಕವಿಮನಕ್ಕೆ ಕವನವನ್ನು ನೀಡಿದ ಕವಿಯು, ಸದಸ್ಯರ ಎಲ್ಲ ಸ್ಪಂದನೆಗಳಿಗೂ ಪ್ರತಿಕ್ರಿಯಿಸುವುದರ ಜೊತೆಗೇ ಆ ಕವನವನ್ನು ಬರೆಯಲು ತಮಗೆ ನೀಡಿದ ಪ್ರೇರಣೆ, ಕವನದ ಹಿನ್ನೆಲೆ ಮುಂತಾದುವುಗಳ ಬಗ್ಗೆ ತಮ್ಮ ಅಭಿಪ್ರಾಯವನ್ನು ವಾಟ್ಸಾಪ್ ವೇದಿಕೆಯಲ್ಲಿ ಹಂಚಿಕೊಳ್ಳುತ್ತಾರೆ. 'ಕವಿಮನ' ಅಂಕಣವನ್ನು ವೇದಿಕೆಯ ಸದಸ್ಯರಾದ ಶ್ರೀ ಹು.ವಾ.ಶ್ರೀಪ್ರಕಾಶ್ ಅವರು ಯಶಸ್ವಿಯಾಗಿ ನಿರ್ವಹಿಸುತ್ತಿದ್ದಾರೆ. .

ವೇದಿಕೆಯ ಸದಸ್ಯರ ಕತೆ, ಕವನ, ವಿಡಂಬನೆ ಮತ್ತಿತರ ಬರಹಗಳು ವಿವಿಧ ದಿನಪತ್ರಿಕೆ/ ವಾರ/ಮಾಸ ಪತ್ರಿಕೆಗಳಲ್ಲಿ ನಿರಂತರವಾಗಿ ಪ್ರಕಟವಾಗುತ್ತಿದ್ದು ಹಲವರು ಪ್ರತಿಷ್ಠಿತ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನ ವಿಜೇತರಾಗಿರುವುದು ಹೆಮ್ಮೆಯ ಸಂಗತಿ. ಅಷ್ಟೇ ಅಲ್ಲದೆ, ವೇದಿಕೆಯ ಹಲವು ಸದಸ್ಯರು ವಿವಿಧ ವಿಷಯಗಳ ಕುರಿತು ಸ್ವತಂತ್ರವಾಗಿ ತಮ್ಮ ಕೃತಿಗಳನ್ನು ಪ್ರಕಟಿಸಿದ್ದಾರೆ.

ಸಸಕಸವೇದಿಕೆ ಎಲ್ಲ ಸದಸ್ಯರ ಉತ್ಸಾಹದ ಪಾಲ್ಗೊಳ್ಳುವಿಕೆಯಿಂದ ಯಶಸ್ವಿಯಾಗಿ ಮುನ್ನಡೆಯುತ್ತಾ ಮುಂಬರುವ 2024ನೇ ವ಼ರ್ಷವನ್ನು ಉತ್ಸಾಹದಿಂದ ಸ್ವಾಗತಿಸುತ್ತಿದೆ.

ಹೊಸ ವರ್ಷದ ಶುಭಾಶಯಗಳು

***

ನೆನದೇನು ಮೊದಲು

- ಕೆ.ಎನ್. ಭಗವಾನ್

ನೆನೆದೇನು ಮೊದಲು ನಾ ಸಾಹಿತ್ಯ ತಿಲಕರಾ
ಕನ್ನಡದ ತೋಟದಲಿ ಫಲ ಪುಷ್ಪ ಬೆಳೆದವರ

ಗುರುಗಳಿಗೆ ಗುರುವರ್ಯ ಬಿ.ಎಂ.ಶ್ರೀ ಮಹನೀಯ
ನವಕಾವ್ಯ ಚಿಂತನೆಯ ಕುಲಗುರುವು ನೀವಯ್ಯ
ಕರುಣಾಳು ಬೆಳಕಿಗೆ ಕಿಟಕಿ ಬಾಗಿಲ ತೆರೆದು
ಕನ್ನಡದ ಬಾವುಟವ ಎತ್ತರಿಸಿದಾರ್ಯ.

ಆಧ್ಯಾತ್ಮದಲಿ ಬೆರೆಸಿ ಜೀವನದ ದರ್ಶನವ
ಹಳೆ ಬೇರಿನಾ ಮರದಿ ಹೊಸ ಚಿಗುರ ನೀಡಿದಿರಿ
ಕಗ್ಗದಲಿ ನೀತಿಗಳ ಸಗ್ಗವನೆ ನಿರ್ಮಿಸಿದ
ಡಿವಿಜಿ ನೀವ್ ಮಿಗಿಲು ನೋಬೆಲ್ಲಿಗೂ.

ಕುಪ್ಪಳಿಯಲವತರಿಸಿ ವಿಶ್ವ ಮಾನವರಾಗಿ
ಅನ್ನ ಆನಂದಗಳ ಒಂದಾಗಿ ಕಂಡವರು
ರಾಮನಾ ಕಾವ್ಯದೊಳು ಹೊಸತು ದರ್ಶನವಿತ್ತು
ರಸಋಷಿ, ಯುಗಪುರುಷ ಎನಿಸಿದವರು.

ನಾಕು ತಂತಿಯ ಮೀಟಿ ನಾದಲೀಲೆಯ ಹರಿಸಿ
ನೂರು ಮರದಲು ನೂರು ಸ್ವರ ಕೇಳಿಸಿದಿರಿ
ಮೀರಿ ಸಾಧನಕೇರಿ ಬೆಳಗು ಬೆರಗನು ತೋರಿ
ಅಂಬಿಕೆಯ ವರಪುತ್ರ ಎನಿಸಿ ಬಾಳಿದಿರಿ.

ನಾಡಿನಲಿ ತಾವ್ ಕಂಡ ಒಂದೊಂದು ತಾಣದಲು
ಹೊಸತೊಂದು ಐತಿಹ್ಯ ಹುಡುಕಿದವರು
ಸರಳ ಛಂದಸ್ಸಿನ ಕಥನ ಕವನವ ಕಟ್ಟಿ
'ಕಾಡಿನಭಿಮನ್ಯು'ವನು ಮಾಸ್ತಿ ತೋರಿದರು.

ಸಪ್ತಸಿಂಧುಗಳಲ್ಲಿ ಭಾರತವ ಕಂಡವರು
ವಿದ್ಯೆ ಪ್ರತಿಭೆಯ ವಿ.ಕೃ.ಗೋಕಾಕರು
ದ್ಯಾವ ಪೃಥವಿಯ ದೃಷ್ಟಿ ಸ್ಥಾಯಿ ಸಂಚಾರಿಗಳು
ಸೃಷ್ಟಿ ಸಮುದ್ರದಲಿ ಸವ್ಯ ಸಾಚಿಗಳು.

ಹರಿಚರಿತೆ ಕೃತಿಯೊರೆದು ಕೃತಕೃತ್ಯರಾದವರು
ಯದುಗಿರಿಯ ನಂದನದಿ ತಪವ ಗೈದವರು.
ಕೃಷ್ಣ ಕೊಳಲಿನ ನಾದ ನುಡಿಯಾಗಿ ಹರಿಸುತಲಿ
ಪು.ತಿ.ನ. ಆಚಾರ್ಯ ಖ್ಯಾತಿ ಗಳಿಸಿದರು.

ಮಲ್ಲಿಗೆಯ ಪರಿಮಳವ ನಾಡೆಲ್ಲ ಹರಡುತಲಿ
ಶಿಲೆಯ ಲತೆಯಲು ಇರುವಂತಿಗೆಯ ಬೆಳೆದರು.
ಸಾಲು ದೀಪವ ಹಚ್ಚಿ ನರಸಿಂಹ ಸ್ವಾಮಿಗಳು
ಪ್ರೀತಿ ಬದುಕನು ತೋರಿ ಹೆಜ್ಜೆ ಹಾಕಿದರು.

ವಿಸೀ ಎಂವಿಸೀ ಬರೆದಂಥ ಕವಿತೆಗಳು
ನಮ್ಮ ಮನೆಯಂಗಳದ ಜಾಜಿ ಮಲ್ಲಿಗೆಯು
ಮಡಿಕೇರಿ ಮಂಜೇನು ಪುಟ್ಟಂಜಿ ರಂಗೇನು
ಎಂಡ್ಕುಡ್ಕ ರತ್ನನಾ ಭಾಷೆಯೇ ಸೊಗಸು.

ಕಲ್ಲು ಮಣ್ಣಿನ ಗುಡಿಲಿ ಕಾಣಿಸದ ದೇವರನು
ತಮ್ಮಂತರಂಗದಲಿ ಕಾಣಬಯಸಿದರು.
ಕಾಣದಾ ಕಡಲಿಗೂ ಹಂಬಲಿಸಿ ಮಿಡಿದವರು
ಎದೆ ತುಂಬಿ ಹಾಡುವುದ ಮರೆಯದವರು.

ನವ್ಯದಲಿ ನಿಮಗಾರು ಸಮನಿಹರು ಅಡಿಗರೇ
ಯಾವ ಮೋಹನ ಮುರಳಿ ಕರೆದೀತು ಮತ್ತೆ?
ಕಟ್ಟುವೆವು ನಾವು ಹೊಸ ನಾಡೆಂದ ಕವಿವರರ
ಅನುಕರಿಸಿ ಬರೆದವರು ಬಹಳಲ್ಲವಲ್ತೆ.

ವಾಚನಕು ಗಾಯನಕು ಸೂಕ್ತ ಭಟ್ಟರ ಗೀತೆ
ಲಯ ಲಾಸ್ಯ ಛಂದಸ್ಸು ಇಡಿ ಭಾವಗೀತೆ
ಯೇಟ್ಸ್ ಈಲಿಯೆಟ್ ಶೇಕ್ಸ್‌ಪಿಯರನೆಲ್ಲರನು
ದೇಸಿ ಉಡಿಗೆಗಳಲ್ಲಿ ಸಿಂಗರಿಸಿದವರು.

ವರುಷದಲಿ ಒಮ್ಮೆ ಬಹ ಉತ್ಸವಕು ಮಿಗಿಲದು
ನಿಸಾರ ಅಹಮದರ ನಿತ್ಯೋತ್ಸವ
ನಾನೆಂಬ ಪರಕೀಯ ನೀವು ಹೇಗಾದೀರಿ?
ನೆನೆದವರ ಮನದಲ್ಲಿ ನೀವಿಲ್ಲವೇ!

ಕರ್ಕಿ ಹಚ್ಚಿದರಲ್ಲಿ ಕನ್ನಡದ ದೀಪವನು
ಸೃಷ್ಟಿ ಸೊಬಗಿಗೆ ತೆರೆದ ಹೊಸ ಕಣ್ಣು ಕಣವಿ
ಸಿದ್ಧಯ್ಯ ಪುರಾಣಿಕರೂ ಆನಂದಕಂದರೂ
ಮಾನವೀಯತೆ- ಬದುಕು ಎಂಬೆರಡು ಕಣ್ಣು.

ಸುಂದರ ತರುಲತೆಗಳ ಬೃಂದಾವನ ಲೀಲೆಯಲಿ
ಕನ್ನಡದ ಐಸಿರಿಯು ಸಾಶಿ ಮರುಳಯ್ಯ
ಗೀತೆ ನಾಟ್ಯವದಾಯ್ತು ಕಂಬಾರ ಸೃಷ್ಟಿಯಲಿ
ಮಣ್ಣ ಮಾತುಗಳಲ್ಲಿ ಮನುಜರ ಪ್ರಗಾಥ.

ಸಂಪ್ರದಾಯವ ಮುರಿದು ಬಂಡಾಯದಲಿ ಮೆರೆದ
ಕವಿದನಿಗಳಲ್ಲಿಹುದು ನೋವು ಕೋಪ
ದಲಿತ ಹಣೆಪಟ್ಟಿಯಲಿ ಹೊಸತೊ ಂದು ಕಾವ್ಯಕುಲ
ನುಡಿದೇವಿಗೆಲ್ಲವೂ ಬಹು ತೆರನ ದೀಪ.

ಬೆಳ್ಳತೆರೆ ಗೀತೆಯಲು ಬಂಗಾರ ಬೆಳೆದವರು
ಕುರಾಸೀ ಆರೆನ್ನೆ ಉದಯಶಂಕರರು
ಕಣಗಾಲು ಅಯ್ಯರೂ ವಿಜಯನಾರಸಿಂಹರೂ
ಹುಣಸೂರು ಹಂಸಲೇಖರು ಜಯಂತರು.

ಇಂತೆಲ್ಲ ಕವಿಗಳನು ನೆನೆದಲ್ಲಿ ಮೂಡುವುದೇ
ಲೇಖನಿಯ ಹಿಡಿದವಗೆ ಕಬ್ಬಿಗನ ಸ್ಫೂರ್ತಿ?
ಮೋಜಿನಾಟದ ತೆರದಿ ಹುಚ್ಚು ಹಠವನೆ ಹಿಡಿದು
ತೋಚಿದುದ ಗೀಚಿಹೆನು ಬೇಕಿಲ್ಲ ಕೀರ್ತಿ.

***

ನೀತಿ ಕತೆಗಳು

ಮೋಸ ಮಾಡುವವನಿಗೊಬ್ಬ ಗೂಸಾ ಕೊಡುವವನು

– ವಿಠಲ ಇಜೇರಿ

ಶ್ರೀ. ತೀ.ನಂ. ಶ್ರೀಕಂಠಯ್ಯನವರು ಒಂದೆಡೆ ಹೇಳುತ್ತಾರೆ – 'ಕತೆಗಳು ಮಕ್ಕಳ ಶಿಕ್ಷಣದ ಅಮೂಲ್ಯ ಸಾಧನಗಳು'. ಆದರೆ ಇಂದಿನ ದಿನಗಳಲ್ಲಿ ಆ ಅಮೂಲ್ಯ ಸಾಧನ ತುಕ್ಕು ಹಿಡಿದು ನಶಿಸಿ ಹೋಗುತ್ತಿದೆ. ಆದರೆ ನಾವು ಎಚ್ಚೆತ್ತುಕೊಂಡು ಅವುಗಳ ಸ್ವರೂಪ ಮತ್ತು ಉಪಯೋಗಗಳ ಬಗ್ಗೆ ಮಕ್ಕಳಲ್ಲಿ ಅರಿವು ಮೂಡಿಸಬೇಕು. ಮನುಷ್ಯನಿಗೆ ಮಾತನಾಡಲು ಬಂದಾಗಿನಿಂದ ಕತೆಗಳು ಹುಟ್ಟುತ್ತಲೇ ಇವೆ. ಕತೆಗಳ ಮೇಲಿನ ಪ್ರೀತಿ ಮಾನವನ ಹುಟ್ಟುಗುಣ. ಈ ಹುಟ್ಟುಗುಣವನ್ನು ಚಾತುರ್ಯದಿಂದ ಉಪಯೋಗಿಸಿಕೊಂಡರೆ ಮಕ್ಕಳ ಶಿಕ್ಷಣವು ಎಷ್ಟೋ ಸುಲಭವಾಗುತ್ತದೆ. ಕತೆಗಳು ಮಕ್ಕಳಲ್ಲಿ ಕುತೂಹಲವನ್ನು ಉಂಟು ಮಾಡುತ್ತವೆ. ಈ ಕುತೂಹಲ ಮನವನ್ನು ಒಂದೆಡೆ ತಂದು ಮಕ್ಕಳ ಗಮನವನ್ನೆಲ್ಲ ಏಕಮುಖವಾಗಿಸುತ್ತದೆ ಮತ್ತು ಶ್ರಮವಿಲ್ಲದೆ ಚಿತ್ತದ ಏಕಾಗ್ರತೆ ಲಭಿಸುತ್ತದೆ. ಕತೆಗಳು ಮಕ್ಕಳ ಜ್ಞಾಪಕ ಶಕ್ತಿಯನ್ನು ವೃದ್ಧಿಗೊಳಿಸುತ್ತವೆ. ಒಂದು ಕತೆಯನ್ನು ಹೇಳಿ, ಅದೇ ಕತೆಯನ್ನು ನೆನಪಿನಲ್ಲಿಟ್ಟುಕೊಂಡು ಮರಳಿ ಹೇಳಿ ಅಂದರೆ ಮಕ್ಕಳು ಆ ಕತೆಯನ್ನು ಹೇಳಬಲ್ಲರು. ಇನ್ನೂ ಒಂದು ಸಾಧ್ಯತೆ ಇದೆ. ಅದಕ್ಕೆ ಅವರೊಂದಿಷ್ಟು ಸೇರಿಸಿ ಹೇಳಲೂಬಹುದು. ಆಗ ಅವರ ಕಲ್ಪನಾ ಶಕ್ತಿಯ ವಿಕಾಸವಾಗುವುದು. ಜೀವನದ ಮೌಲ್ಯಗಳನ್ನು ಕತೆಗಳ ಮೂಲಕ ಮಕ್ಕಳ ಮನಸ್ಸಿಗೆ ಸಾಗಿಸಿಬಿಡಬಹುದು. ಅದರಲ್ಲೂ ಹಾಸ್ಯ ಕತೆಗಳು ಮಕ್ಕಳ ಮನಸ್ಸನ್ನು ಬೇಗ ಆವರಿಸುವವು. ಆದರೆ ಕಥೆ ಸ್ಪಷ್ಟವಾಗಿ, ಸ್ವಾರಸ್ಯಪೂರ್ಣವಾಗಿರಬೇಕು. ನಮ್ಮ ಕೆಲವು ಪ್ರಾಸಬದ್ಧ ನುಡಿಗಟ್ಟುಗಳಲ್ಲಿ ಸಂದೇಶವಿದ್ದು, ಆ ಸಂದೇಶ ತಿಳಿಸುವ ಕತೆ ಕಟ್ಟಿ, ಇಲ್ಲವೆ ಆ ಸಂದೇಶ ಸಾರುವ ಕತೆ ಹುಡುಕಿ ಹೇಳಬೇಕು. ಆಗ ಕತೆ ಹೇಳಿದವರಿಗೂ, ಕತೆ ಕೇಳಿದವರಿಗೂ ಖುಷಿಯಾಗುವುದು. ಈಗ ಅಂತಹದೇ ಒಂದು ಕತೆ ಕೇಳೋಣ.

ಒಂದು ಊರಿನಲ್ಲಿ ಅಣ್ಣ, ತಮ್ಮಂದಿರಿದ್ದರು. ಅಣ್ಣ ಚುರುಕು ಮತ್ತು ಕ್ಷುಲ್ಲಕ ಬುದ್ಧಿ ಹೊಂದಿದ್ದ, ತಮ್ಮ ಮುಗ್ಧ ಸರಳ ಜೀವಿ. ತಂದೆ ತೀರಿಹೋದಾಗ ಅಣ್ಣನಿಗೆ ತಮ್ಮನನ್ನು ಮೋಸಗೊಳಿಸಿ ಹೆಚ್ಚಿನ ಪಾಲು ಪಡೆಯುವ ಮನಸ್ಸಾಯಿತು. ಎಲ್ಲ ಪಾಲು ಮುಗಿದು ಒಂದು ಎಮ್ಮೆ ಮತ್ತು ಒಂದು ಕಂಬಳಿ ಮಾತ್ರ ಉಳಿದಿದ್ದವು. ಅಣ್ಣ ಪಾಲು ಮಾಡುವವರಿಗೆ 'ನನಗೆ ಲಾಭವಾಗುವ ಹಾಗೆ ಪಾಲು ಮಾಡಿ, ನಾನು ನಿಮಗೆ ಲಾಭ ಮಾಡಿ ಕೊಡುತ್ತೇನೆ' ಎಂದು ಆಸೆ ಹುಟ್ಟಿಸಿದ. ಪಾಲು ಮಾಡಲು ಬಂದವರು, "ನೋಡಿ, ಎಮ್ಮೆ ಮತ್ತು ಕಂಬಳಿ ಕತ್ತರಿಸಿ ತುಂಡುಮಾಡಿ ಹಂಚಲಾಗದು. ನಾವು ಅನುಭವದ ಆಧಾರದ ಮೇಲೆ ಭಾಗ ಮಾಡಿಕೊಟ್ಟುದುದನ್ನು ಒಪ್ಪಿಕೊಳ್ಳಬೇಕು" ಎಂದು ಒಪ್ಪಿಸಿ, ಒಂದು ಅಳತೆ ಟೇಪು ತರಿಸಿ ಎಮ್ಮೆಯ ಉದ್ದ ಅಳೆದು ನೋಡಿದರು. ಆರು ಅಡಿ ಇತ್ತು. ಮುಂದಿನ ಮೂರು ಅಡಿ ತಮ್ಮನಿಗೂ, ಹಿಂದಿನ ಮೂರು ಅಡಿ ಭಾಗ ಅಣ್ಣನಿಗೂ ಕೊಟ್ಟರು. ಕಂಬಳಿಯನ್ನು ಬೆಳಗಿನ 8 ಗಂಟೆಯಿಂದ ರಾತ್ರಿ 8 ಗಂಟೆಯವರೆಗೆ ತಮ್ಮನಿಗೆ ಮತ್ತು ರಾತ್ರಿ 8 ಗಂಟೆಯಿಂದ ಮರುದಿನ ಬೆಳಗಿನ 8 ಗಂಟೆವರೆಗೆ ಅಣ್ಣನಿಗೆ ಎಂದು ಹಂಚಿಕೆ ಮಾಡಿದರು. ತಮ್ಮನ ಪಾಲಿಗೆ ಎಮ್ಮೆಯ ಮುಂಬಾಗ ಬಂದಿತ್ತು. ಅವನು ಎಮ್ಮೆಗೆ ಹಸಿರು ಹುಲ್ಲು, ಹಿಂಡಿ ನೀಡಿ ಚೆನ್ನಾಗಿ ನೋಡಿಕೊಳ್ಳುತ್ತಿದ್ದ, ಅಣ್ಣನಿಗೆ ಹಿಂಭಾಗ ದೊರೆತಿತ್ತು ಪುಷ್ಕಳ ಹಾಲು, ಗೊಬ್ಬರಕ್ಕೆ ಶಗಣಿ ಪಡೆದು ಕೊಳ್ಳುತ್ತಿದ್ದ. ತಮ್ಮನ ಪಾಲಿಗೆ ಹಗಲಿನಲ್ಲಿ ದೊರೆತ ಕಂಬಳಿ ಯಾವತ್ತೂ ಉಪಯೋಗಕ್ಕೆ ಬರುತ್ತಿರಲಿಲ್ಲ. ಅಣ್ಣ ರಾತ್ರಿ ಕಂಬಳಿ ಹೊದ್ದು ಬೆಚ್ಚಗೆ ಮಲಗುತ್ತಿದ್ದ.

ಕೆಲವು ದಿನಗಳಲ್ಲಿ ತಮ್ಮನಿಗೆ ತನಗೆ ಮೋಸವಾಗಿದೆ ಎಂದು ಅರಿವಾದರೂ ಯಾರಲ್ಲೂ ದೂರಲು ಧೈರ್ಯವಿರಲಿಲ್ಲ. ಅದೊಂದು ದಿನ ಅದೇ ಚಿಂತೆಯಲ್ಲಿ ಕುಳಿತಾಗ ಅವನ ಸ್ನೇಹಿತನೊಬ್ಬ "ಅದೇಕೆ ಹೀಗೆ ಮುಖ ಇಳಿಬಿಟ್ಟು

ಕುಳಿತಿರುವೆ?" ಎಂದು ಕೇಳಿದಾಗ, ತನ್ನ ಪಾಲಿನ ಹಿನ್ನೆಲೆ ಹೇಳಿದ. ಸ್ನೇಹಿತ ಹುಷಾರು. "ತಮ್ಮನ ಮುಗ್ಧತೆ ಅರಿತು ಮೋಸ ಮಾಡಿದ್ದು ಅರ್ಥವಾಯಿತು. ಅವನು ಹೇಳಿದ. "ನೋಡು, ಇಷ್ಟೊಂದು ಸಂಪನ್ನತೆ ಸರಿಯಲ್ಲ, ಈಗಲಾದರೂ ಎಚ್ಚತ್ತುಕೋ, ನಾಳೆ ಬೆಳಗ್ಗೆ ಹಾಲು ಕರೆಯಲು ಯಾರೇ ಬರಲಿ, ಹಾಲು ಕರೆಯುವಾಗ ಎಮ್ಮೆಯ ಮುಂಭಾಗ ನಿನ್ನದು. ಅದರ ಮುಖಕ್ಕೆ ಚೆನ್ನಾಗಿ ಏಟು ಹಾಕು, ತಕರಾರು ಬರುತ್ತೆ, ಎಮ್ಮೆಯ ಮುಖ ನಿನಗೆ ಸೇರಿದ್ದು ಅದನ್ನು ನೀನು ಶಿಕ್ಷಿಸಿದರೆ ಯಾರೂ ನಿನ್ನನ್ನು ಪ್ರಶ್ನಿಸುವಂತಿಲ್ಲ. ಇನ್ನು ಕಂಬಳಿ ವಿಷಯ. ಸಂಜೆ 8 ಗಂಟೆಯವರೆಗೆ ಅದು ನಿನ್ನ ಕಂಬಳಿ. ಸಂಜೆ 7 ಗಂಟೆಗೆ ಕಂಬಳಿಯನ್ನು ನೀರಲ್ಲಿರಿಸಿಬಿಡು. 8 ಗಂಟೆಗೆ ನಿನ್ನ ಅಣ್ಣ ಕಂಬಳಿ ಕೇಳಲು ಬಂದಾಗ, 'ಅಲ್ಲಿ ನೀರಲ್ಲಿದೆ ಎತ್ತಿಕೊಂಡು ಹೋಗು' ಎಂದು ಹೇಳು. ತಕರಾರು ಮಾಡುತ್ತಾರೆ. ಆಗ 'ನನ್ನ ಸುಪರ್ದಿಯಲ್ಲಿ ಇರುವಾಗ ನನ್ನ ಇಷ್ಟದಂತೆ ಮಾಡುವೆ' ಎಂದು ಹೇಳು" ಎಂದು ಉಪಾಯ ಸೂಚಿಸಿದ.

ಅಂದು ಬೆಳಗ್ಗೆ ತಮ್ಮ ಯಾರಾದರೂ ಹಾಲು ಕರೆಯಲು ಬರಲಿ ಎಂದು ಕಾಯುತ್ತಿದ್ದ. ಅತ್ತಿಗೆ ಬಂದು ಕೆಚ್ಚಲು ತೊಳೆಯುವಾಗ ಎಮ್ಮೆಯ ಮುಖಕ್ಕೆ ಒಂದಿಷ್ಟು ಏಟು ಹಾಕಿದ. ಎಮ್ಮೆ ಝಾಡಿಸಿ ಒದೆಯಿತು. ಅತ್ತಿಗೆ ಅಷ್ಟು ದೂರ ಹೋಗಿ ಬಿದ್ದು ಕಿರುಚತೊಡಗಿದಳು. ಅಣ್ಣ ಬಂದು ತಕರಾರು ತೆಗೆದ, ತಮ್ಮ "ನನ್ನ ಭಾಗದ ಎಮ್ಮೆಗೆ ನಾನು ಏಟು ಹಾಕಿದ್ದೇನೆ, ನಿನ್ನದೇನು ತಕರಾರು?" ಎಂದು ಮರುಪ್ರಶ್ನೆ ಹಾಕಿದ. ಅಣ್ಣನಲ್ಲಿ ಉತ್ತರವಿರಲಿಲ್ಲ. ಅಂದು ಸಂಜೆ ಅಣ್ಣ ಕಂಬಳಿ ಕೇಳಲು ಬಂದ. ತಮ್ಮ "ಅಲ್ಲಿ ನೀರಲ್ಲಿದೆ, ತೆಗೆದುಕೊಂಡು ಹೋಗು" ಅಂದ. ಅಣ್ಣ "ಹೀಗೆ ನೀರಲ್ಲಿ ಇಟ್ಟರೆ ನಾನು ಹೇಗೆ ಉಪಯೋಗಿಸುವುದು?" ಎಂದು ಜೋರುಮಾಡಿದ. ತಮ್ಮ ಸ್ನೇಹಿತ ಹೇಳಿದ ಪಾಠ, "ಹಗಲು ನನ್ನ ಕಂಬಳಿ. ನಾನು ನನಗೆ ಬೇಕಾದ ರೀತಿಯಲ್ಲಿ ಉಪಯೋಗಿಸುವೆ, ಅದನ್ನು ಯಾರೂ ಪ್ರಶ್ನಿಸುವಂತಿಲ್ಲ" ಅಂದ.

ಅಣ್ಣನಿಗೆ ತಮ್ಮನ ಧೋರಣೆ ಅರ್ಥವಾಯಿತು. ತಾನೇ ಮುಂದುವರಿದು, ಒಂದು ದಿನ ಎಮ್ಮೆ ಹಾಲು ಮತ್ತು ಕಂಬಳಿ ನಿನಗಿರಲಿ, ಇನ್ನೊಂದು ದಿನ ಅವೆರಡೂ ನನ್ನ ಪಾಲಿಗಿರಲಿ" ಎಂದು ಒಪ್ಪಂದಕ್ಕೆ ಬಂದ.

ಕೊಲ್ಲುವವನಿರುವಾಗ ಕಾಯುವವನೊಬ್ಬನಿರುವಂತೆ, ಮೋಸ ಮಾಡುವವನಿಗೊಬ್ಬ ಗೂಸಾ ಕೊಡುವವನು ಇದ್ದೇ ಇರುತ್ತಾನೆ.

***

ಚಮಚಾ... ಚಮಚಾಗಿರಿ

– ಕಮಲಾಕ್ಷಿ ಸಿ ಆರ್

'ಚಮಚ' ಎನ್ನುವ ಸಾಮಾಗ್ರಿ ಯಾರ ಮನೆಯಲ್ಲಿ ಇಲ್ಲ ಹೇಳಿ? ಅಡುಗೆಮನೆಯ ಅಧಿಪತ್ಯವನ್ನು ನಡೆಸಲು ದಂಡದಂತೆ ವರ್ತಿಸುವ ಚಮಚದ್ದೇ ಅಧ್ಯಕ್ಷತೆ. ಅಡುಗೆಮನೆಯ ಪ್ರತಿ ಕೆಲಸದಲ್ಲೂ ಚಮಚದ್ದೇ ದರ್ಬಾರು.

ಪ್ರತಿ ಭಕ್ಷ್ಯವನ್ನು ತಯಾರಿಸಲು, ಉಣಬಡಿಸಲು ಚಮಚ ಬೇಕೇಬೇಕು. ಕಲಸನ್ನಗಳಾದ ಚಿತ್ರಾನ್ನ, ಪುಳಿಯೋಗರೆ, ವಾಂಗಿಬಾತ್ ಇವುಗಳನ್ನು ಕಲೆಸಲು ಚಮಚ ಇಲ್ಲದೆ ಕೆಲಸ ಸಾಗದು. ಬಿಸಿ ಬಿಸಿ ಹೊಗೆಯಾಡುವ ಅನ್ನವನ್ನು ಕೈನಿಂದ ಕಲೆಸಿ ಕೈ ಸುಟ್ಟುಕೊಳ್ಳೋದೇಕೆ? ಚಮಚವಿದೆಯಲ್ಲ. ಇಷ್ಟೇ ಚಮಚ ಸಕ್ಕರೆ, ಕಾಫಿಪುಡಿ, ಚಾಪುಡಿ ಅಂತ ಬೆಳಗಾದೊಡನೆ ಚಮಚ ಕೈಲಿ ಹಿಡಿದೇ ಕೆಲಸ ಪ್ರಾರಂಭವಾಗುತ್ತದೆ. ಒಗ್ಗರಣೆ ಕೈಯಾಡಿಸಲು ಚಮಚವಿಲ್ಲದೆ ಸಾಗದು. ಉಪ್ಪು, ಖಾರ, ಹುಳಿ ಹಾಗೂ ಮಸಾಲೆಗಳನ್ನು ಹದವಾಗಿ ಬೆರಸುವ ಚಮಚ ಹೆಂಗಳೆಯರ ಆಪ್ತಮಿತ್ರ. ಷಡ್ರಸಗಳಾದ ಉಪ್ಪು, ಹುಳಿ, ಖಾರ, ಸಿಹಿ, ಒಗರು, ಕಹಿ ಯಾವುದೇ ಭಕ್ಷ್ಯಕ್ಕಾದರೂ ಸಮಾನ ಮನಸ್ಥಿತಿಯಿಂದ ಕಾರ್ಯನಿರ್ವಹಿಸುವ ಏಕ ರೂಪದಿಂದ ಸ್ಪಂದಿಸುವ ಸ್ಥಿತಪ್ರಜ್ಞ ಈ ಚಮಚ.

ಚಮಚ ಎನ್ನುವುದು ಅಡಿಗೆ ಮನೆಯ ಪ್ರಮುಖ ಪರಿಕರ. ಅಡಿಗೆ ಮಾಡುವುದರಲ್ಲಿ, ಬಡಿಸುವುದರಲ್ಲಿ ಎಷ್ಟು ಉಪಯುಕ್ತವೋ ಮಾಡಿದ ಭಕ್ಷ್ಯಗಳನ್ನು ಬಾಯಿಗೆ ಸೇರಿಸಲು ಅಷ್ಟೇ ಮುಖ್ಯ. ಬಡಿಸಿದ ಚಮಚಕ್ಕಿಂತ ಸಣ್ಣದಾದ ಚಮಚವೊಂದು, ತಟ್ಟೆಗೆ ಬಡಿಸಿಕೊಟ್ಟದ್ದನ್ನು ಬಾಯಿವರೆಗೆ ತಲುಪಿಸುವ ತೂಗು ಸೇತುವೆ. ಆದರೆ ತಟ್ಟೆಯಿಂದ ಆಹಾರವನ್ನು ಬಾಯಿಗೆ ತಲುಪಿಸಿ, ತಟ್ಟೆಗೆ ಹಿಂದಿರುಗುವಾಗ ಖಾಲಿ ದೋಣಿಯಂತೆ ತಟ್ಟೆಗೆ ಮರಳುತ್ತದೆ.

ಪಾಶ್ಚಿಮಾತ್ಯರು ನಮ್ಮಲ್ಲಿಗೆ ಬರುವವರೆಗೆ ಚಮಚದಲ್ಲಿ ತಿನ್ನುವ ಅಭ್ಯಾಸ ನಮಲ್ಲಿ ಹೆಚ್ಚಾಗಿ ಇರಲಿಲ್ಲ. ಆದರೂ 'ಬೆಳ್ಳಿ ಚಮಚ ಬಾಯಲ್ಲಿಟ್ಟುಕೊಂಡು ಹುಟ್ಟಿರೋರು' ಎನ್ನೋ ಮಾತು ಹೇಗೆ ಪ್ರಚಲಿತದಲ್ಲಿ ಇದೆಯೋ ತಿಳಿಯದು. ಕಂಚು, ಹಿತ್ತಾಳೆ, ತಾಮ್ರ ಹಾಗೂ ಸ್ಟೀಲಿನಿಂದ ಮಾಡಿದ ಚಮಚಗಳನ್ನು ವ್ಯಾಪಕವಾಗಿ ಬಳಕೆಯಲ್ಲಿವೆ. ಈಗಂತೂ ಪ್ಲಾಸ್ಟಿಕ್, ಪಿಂಗಾಣಿ, ಮರದ ಚಮಚಗಳೂ ಬಂದಿವೆ. ಸೂಪು, ಐಸ್‌ಕ್ರೀಮ್, ಅನ್ನದ ಭಕ್ಷ್ಯ, ಉಪ್ಪಿನಕಾಯಿ, ಇವೆಲ್ಲಕ್ಕೂ ಬಗೆ ಬಗೆಯ ಚಮಚಗಳು ಇವೆ. ಒಮ್ಮೆ ಬಳಸಿ ಎಸೆಯುವ ಪ್ಲಾಸ್ಟಿಕ್ ಚಮಚಗಳೂ ಬಹು ಬೇಡಿಕೆಯಲ್ಲಿವೆ. ಬೆಳ್ಳಿ ಹಾಗೂ ಚಿನ್ನದ ಚಮಚಗಳನ್ನು ಬಳಸುವುದು ಸಿರಿವಂತರ ಹೆಗ್ಗಳಿಕೆ.

ನನ್ನ ದೊಡ್ಡ ಮಗ ಚಮಚ ಬಳಸದೇ ಏನನ್ನೂ ತಿನ್ನುತ್ತಿರಲಿಲ್ಲ. ಇತ್ತೀಚಿನ ಕೆಲ ವರ್ಷಗಳವರೆಗೂ ರೊಟ್ಟಿ, ಚಪಾತಿ ಯನ್ನು ಚಮಚದಲ್ಲೇ ತಿನ್ನುತ್ತಿದ್ದ. ನನ್ನ ಓರಗಿತ್ತಿ ಅವನಿಗೆ ಚಮಚ ಕೊಡದೆ ಬೇಕೆಂದೇ ಸತಾಯಿಸುತ್ತಿದ್ದುದುಂಟು. ಆದ್ರೂ ಅವನೂ ಚಮಚ ಬಿಡ್ತಾ ಇರಲಿಲ್ಲ.. ಓರಗಿತ್ತಿ ಮನೆಗೆ ಹೋಗುವಾಗ ನಮ್ಮ ಮನೆಯಿಂದ ಚಮಚವನ್ನು ತನ್ನ ಜೇಬಿನಲ್ಲಿ ಇಟ್ಟುಕೊಂಡೇ ಹೋಗುತ್ತಿದ್ದ. ಅದೆಷ್ಟೋ ಕಡೆ ಅವನು ರೊಟ್ಟಿ, ಚಪಾತಿಯನ್ನು ಚಮಚದಲ್ಲಿ ತಿನ್ನುವುದನ್ನು ಜನ ವಿಚಿತ್ರವಾಗಿ ನೋಡುತ್ತಿದ್ದರು. ನಮ್ಮ ಕುಟುಂಬದಲ್ಲಿ ಅವನಿಗೆ ಸ್ಪೂನ್ ಮ್ಯಾನ್ ಎಂದು ಹೆಸರು. ನನ್ನ ತಮ್ಮ ಅವನು ಹುಟ್ಟುವಾಗ "ಚಮಚ ಕೈಲಿ ಹಿಡಿದಿದ್ದನೇನೋ.. ಡಾಕ್ಟನ್ನ ಕೇಳಬೇಕು" ಎಂದು ಛೇಡಿಸುತ್ತಿದ್ದ. ಇತ್ತೀಚೆಗೆ ಮಗ ಚಮಚ ಬಳಕೆಯನ್ನು ಸ್ವಲ್ಪ ಮಿತಿಗೊಳಿಸಿದ್ದಾನೆ ಎನ್ನುವುದೇ ಸಮಾಧಾನ.

ಈ ಚಮಚ ಅಡುಗೆ ಮಾಡುವಾಗ ಕೈಯಾಡಿಸಲು, ತಿನ್ನಲು ಉಪಯುಕ್ತವಾಗಿರುವಷ್ಟೇ ಅಳತೆಗೂ ಸಹಕಾರಿ. ಔಷಧಿಗಳನ್ನು ತೆಗೆದುಕೊಳ್ಳಲು ಚಮಚ ಬೇಕೇಬೇಕು. ಕಡ್ಲೇಬೇಳೆ, ಉದ್ದಿನಬೇಳೆ, ಸಾಸಿವೆ, ಜಿರಿಗೆ ಇವೆಲ್ಲದರ ಅಳತೆಯನ್ನು ಟೀ ಸ್ಪೂನ್ ಹೆಸರಲ್ಲೇ ತೆಗೆದುಕೊಳ್ಳುವುದು ಸಾಮಾನ್ಯ.

ಇಷ್ಟೆಲ್ಲ ಉಪಯುಕ್ತವಾಗಿರುವ ಚಮಚವನ್ನು ಋಣಾತ್ಮಕವಾಗಿ 'ಚಮಚಾಗಿರಿ' ಎನ್ನುತ್ತಾರಲ್ಲ. ತಮ್ಮ ಸ್ವಾರ್ಥ ಸಾಧನೆಗಾಗಿ ಮತ್ತೊಬ್ಬರಿಗೆ ಬೇಕಾದ ಮಾಹಿತಿ ನೀಡುವವರು, ಅವರಿಗೆ ಬೇಕಾದಂತೆ ಇರುವುದನ್ನು ಚಮಚಾಗಿರಿ ಎನ್ನಬಹುದೇನೋ. ಮೇಲಧಿಕಾರಿಗೆ ಆತ್ಮೀಯವಾಗಿರುವವರನ್ನು ಅವರ ಬೆನ್ನ ಹಿಂದೆ ಅಧಿಕಾರಿಯ 'ಚಮಚಾಗಿರಿ' ಮಾಡುವರು ಎಂದು ವ್ಯಂಗ್ಯವಾಗಿ ಹೇಳುವುದುಂಟು. ಅವರಿವರ ಬಗ್ಗೆ ಹೇಳುವುದೆಲ್ಲವನ್ನು ಕೇಳಿಸಿಕೊಂಡು, ಮಾಹಿತಿ ಕಲೆ ಹಾಕಿ ವರದಿ ನೀಡುವವರನ್ನು ಚಮಚಾಗಿರಿ ಮಾಡುವವರು ಎಂದು ಪಟ್ಟ ಕಟ್ಟುವರು.

ಚಮಚಾಗಿರಿ ಎಂದರೆ ಉಣಬಡಿಸುವುದು ಎಂಬ ಅರ್ಥ ಕೊಡುವುದು. ಆ ನಿಟ್ಟಿನಲ್ಲಿ ನೋಡುವುದಾದರೆ ಚಮಚಾಗಿರಿ ಸದುದ್ದೇಶಕ್ಕಾದರೆ ಒಳಿತೇ. ಆದರೆ ತನ್ನ ಸ್ವಾರ್ಥ ಸಾಧನೆಗೆ ಅಥವಾ ಇಬ್ಬರ ನಡುವೆ ಕಂದಕ ಸೃಷ್ಟಿಸುವುದಾದರೆ ಆ ಚಮಚಾಗಿರಿ ಅಕ್ಷಮ್ಯ. ಅಂತಹ ನಡೆ ಅನುಕರಣೀಯವಲ್ಲ. ಚಮಚ ಬಹುಪಯೋಗಿ. ಅದನ್ನು ಒಳಿತಿಗೆ ಮಾತ್ರ ಬಳಸುವಾ. ಸಾಧ್ಯವಾದರೆ ಎಲ್ಲರಿಗೂ ಒಳಿತಾಗುವುದನ್ನೇ ಬಡಿಸುವ ಚಮಚವಾಗೋಣ.. ಅಲ್ಲವೆ?

***

ತೊರೆದು ಜೀವಿಸಬಹುದೇ ವಾಟ್ಸಾಪ್ ಆ್ಯಪನು

– ಸುವರ್ಣಲಕ್ಷ್ಮಿ

ತೊರೆದು ಜೀವಿಸಬಹುದೇ ವಾಟ್ಸಾಪ್ ಆ್ಯಪನು
ಬರಿದೆ ಮಾತೇಕಿನ್ನು ಅರಿತು ಪೇಳುವೆನಯ್ಯ

ತಾಯಿ ತಂದೆಯರನ್ನು ವೀಡಿಯೋ ಕಾಲ್‌ಲ್ಲಿ ನೋಡಬಹುದು
ದಾಯಾದಿ ಬಂಧುಗಳ ಹೊಗಳ ತೆಗಳಬಹುದು
ನಿಂದಿಸುವ ಜನರು ಮರೆತು ಚಾಟಿಂಗು ಮಾಡಬಹುದು
ಇಂಟರ್ನೆಟ್‌ನ ಸುತ ವಾಟ್ಸಾಪ್
ನಿನ್ನ ಬಿಡಲಾಗದು.. ನಿನ್ನ ಬಿಡಲಾಗದು

ಒಡಲು ಹಸಿಯಲು ಅನ್ನ ಇಲ್ಲದಲೆ ಇರಬಹುದು
ಮಾಡ್ವ ಕೆಲಸವ ಬಿಟ್ಟು ಹೊರಡಬಹುದು
ಮಡದಿ ಮಕ್ಕಳ ಕಡೆಗೆ ತೊಲಗಿಸಿಯೆ ಬಿಡಬಹುದು
ಫೇಸ್ಬುಕ್‌ನ ಗೆಳೆಯ ವಾಟ್ಸಾಪ್
ನಿನ್ನ ಬಿಡಲಾಗದು.. ನಿನ್ನ ಬಿಡಲಾಗದು

ಪ್ರಾಣವನು ಪರರು ಬೇಡಿದರೆತ್ತಿ ಕೊಡಬಹುದು
ವಾಟ್ಸಾಪ್ ಇರುವ ಮೊಬೈಲನ್ನು ಹೇಗೆ ಕೊಡುವುದು
ಸರ್ವ ವ್ಯಾಪ್ತಿಯಲಿರುವ ವಾಟ್ಸಾಪ್ ಆ್ಯಪ್
ಜಾಣ ನೀ ವಾಟ್ಸಾಪ್
ನಿನ್ನ ಬಿಡಲಾಗದು... ಬಿಡಲಾಗದು.. ಬಿಡಲಾಗದು


(ಕನಕದಾಸರ ಕ್ಷಮೆ ಕೋರಿ – ಕನಕದಾಸರ ಕೀರ್ತನೆಯನ್ನು ಆಧರಿಸಿ ಬರೆದಿರುವ ಪೇರಡಿ/ಅಣಕವಾಡು)

***

ಪುಸ್ತಕ ಪರಿಚಯ

‘ದೇರಾಜೆ ಸೀತಾರಾಮಯ್ಯ ನೆನಪು ನೂರೆಂಟು’ ಸಂಸ್ಮರಣ ಗ್ರಂಥ

– ಮನೋಹರ.ಎಂ.ಗೋಖಲೆ



ಶಿವರಾಮ ಕಾರಂತ: ‘ದೇರಾಜೆ ಸೀತಾರಾಮಯ್ಯನವರಿಗೆ ತಾನು ಯಾವ ಪಾತ್ರ ವಹಿಸಿದ್ದೇನೆ ಎಂಬ ಸ್ಪಷ್ಟವಾದ ಜ್ಞಾನವಿರುತ್ತದೆ. ಅದರ ಇತಿಮಿತಿಗಳನ್ನು ತಿಳಿದೇ ಮಾತಾಡುವವರು ಅವರು. ಪಾತ್ರದ ಯೋಗ್ಯತೆಗೂ ಸಮಯಕ್ಕೂ ತಕ್ಕಂತೆ ಮಾತನಾಡುವಾಗ ಭಾವದ ಕಡೆಗೆ ಅವರ ಪರಮಲಕ್ಷ್ಯ ಸರಿಯುವುದರಿಂದ ಗಮನ ರಂಗಸ್ಥಳಕ್ಕೆ ಅವಶ್ಯವಾದ ಸ್ವರೋಚ್ಚಾರ, ಧ್ವನಿವಿಲಾಸ ಅವರಲ್ಲಿ ಕಂಡುಬರುತ್ತದೆ. ಈ ಗುಣದಲ್ಲಿ ಅವರನ್ನು ಮೀರಿಸಿದವರಿಲ್ಲವೆಂದೇ ಎಣಿಸುತ್ತೇನೆ’.

ಡಿ.ವಿ.ಜಿ.: ‘ದೇರಾಜೆಯವರದು ಕನ್ನಡದ ಹಿರಿಯರಾದ ಟಿ.ಎಸ್.ವೆಂಕಣ್ಣಯ್ಯನವರನ್ನು ನೆನಪಿಗೆ ತರುವ ವ್ಯಕ್ತಿತ್ವ’.

ಗೌರೀಶ ಕಾಯ್ಕಿಣಿ: ‘ವರ್ಣವೈಚಿತ್ರ್ಯ, ನಕ್ಷತ್ರಪುಂಜಗಳ ನಡುವೆ ಧ್ರುವತಾರೆಯಂತೆ. ಬಣ್ಣ ಬೆಡಗಿನ ದೀಪೋತ್ಸವದ ನಡುವೆ ನಿತ್ಯ ನಂದಾದೀಪದಂತೆ ಅವರ ವೈಖರಿ. ಅದು ನಿಜವಾಗಿಯೂ ವಿಖರ. ಆರ್ಭಟವರಿಯದ ತಾರ್ಕಿಕತೆ, ಆಗ್ರಹವಿಲ್ಲದ ಮಾರ್ಮಿಕತೆ ಅದರ ವಾದಿ–ಸಂವಾದಿಗಳದ್ದಂತೆ. "ಪದನರಿತು ನುಡಿವ" ಗುಣಕ್ಕೆ ಇವರ ಮಾತು ಒಂದು ವಸ್ತುಪಾಠ’.

ಜಿ.ವೆಂಕಟಸುಬ್ಬಯ್ಯ: ‘ದೇರಾಜೆಯವರ ಶೈಲಿ ನಾಟಕೀಯವಾದ ಶೈಲಿ. ಆ ಭಾಷೆ ಓದೋಣ ಅನಿಸುತ್ತೆ. ಅಷ್ಟೇ ಅಲ್ಲ, ಒಬ್ಬರೇ ಕೂತಿದ್ದರೂ ಕೂಡಾ ಗಟ್ಟಿಯಾಗಿ ಓದೋಣ ಅನಿಸುತ್ತೆ. ಬರೇ ಕಣ್ಣಲ್ಲಿ ಓದಿದರೆ ಸಾಕಾಗುವುದಿಲ್ಲ, ಅದನ್ನು ಬಾಯಲ್ಲಿ ಹೇಳೋಣ ಅನಿಸುತ್ತೆ. ಯಾಕೆಂದರೆ ಅಷ್ಟು ರಸವತ್ತಾಗಿದೆ, ಅಷ್ಟು ಸೊಗಸಾದ ಶೈಲಿ, ವ್ಯಾಸಭಾರತದಷ್ಟು ವಿಸ್ತಾರವಿಲ್ಲದೆ ಹೋದರೂ ಕೂಡಾ ಅವರು ಬರೆದ ಭಾರತ, ವ್ಯಾಸಭಾರತದ ಸತ್ವವನ್ನು ಹೊತ್ತು ಬಂದಿದೆ. ಅವರು ಜೊತೆಗಿದ್ದರೆ ಅದೊಂದು ರಸಲೋಕ’.

ಎಚ್ಚೆಸ್ಕೆ: ‘ಬಡಕಲು ದೇಹ, ಉಬ್ಬಸ, ತಮಗಿಂತಲೂ ಕುರೂಪಿ ಯಾರೂ ಇಲ್ಲವೆಂದು ಹೇಳುವ ನಿರ್ಮೋಹ. ಯಕ್ಷಗಾನ ಕಲೆಗಾಗಿ ಸರ್ವಸ್ವವನ್ನೂ ತೆತ್ತುಕೊಂಡ ಜೀವ. ಈ ಬಡದೇಹಕ್ಕೆ ಕಂಚಿನ ಕಂಠ ಹೇಗೆ ಬಂತೆಂಬುದೇ

ಆಶ್ಚರ್ಯ. ಅಭಿವ್ಯಕ್ತಿಸಬೇಕಾದ ಪಾತ್ರದಲ್ಲೇ ತಲ್ಲೀನ. ಅದಕ್ಕನುಗುಣವಾದ ಧ್ವನಿವಾಕ್ಯ ಸಂಯೋಗ. ತಟ್ಟಿದಂತೆ ರೂಪು, ಆಕಾರ ತಳೆಯುವ ಜೇಡಿಮಣ್ಣಿನ ಹಾಗೆ ಅವರ ಮಾತಿನ ಓಘ'.

'ದೇರಾಜೆ ಸೀತಾರಾಮಯ್ಯ ನೆನಪು ನೂರೆಂಟು'
ಸಂಸ್ಮರಣ ಗ್ರಂಥ – ವಿವಿಧ ಲೇಖಕರು
ಪ್ರಕಾಶಕರು: ಜ್ಞಾನಗಂಗಾ ಪ್ರಕಾಶನ, ಪುತ್ತೂರು
1/4 ಕ್ರೌನ್ ಆಕೃತಿ – ರಿಯಾಯಿತಿ ಬೆಲೆ ರೂ. 950/-

– ಇವು ಯಕ್ಷಗಾನ ಕಲಾವಿದ ದೇರಾಜೆ ಸೀತಾರಾಮಯ್ಯ ಅವರ ಕುರಿತಾಗಿ ಹಿರಿಯರು ವ್ಯಕ್ತಪಡಿಸಿದ್ದ ಸಾಲುಗಳು. ಇವುಗಳನ್ನು ಇತ್ತೀಚೆಗೆ ಅಂದರೆ 14-11-2023ರಂದು ಎಡನೀರು ಮಠದಲ್ಲಿ ಶ್ರೀ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿ ಅವರಿಂದಲೂ ಮತ್ತು 12-12-2023ರಂದು ಪುತ್ತೂರು ವಿವೇಕಾನಂದ ಕಾಲೇಜಿನಲ್ಲಿ ಶ್ರೀ ಲಕ್ಷ್ಮೀಶ ತೋಳ್ಪಾಡಿ ಅವರಿಂದಲೂ ಲೋಕಾರ್ಪಣೆಗೊಂಡ "ದೇರಾಜೆ ಸೀತಾರಾಮಯ್ಯ ನೆನಪು ನೂರೆಂಟು" ಗ್ರಂಥದಿಂದ ಆರಿಸಿದವುಗಳಾಗಿವೆ.

ಈ ಶೀರ್ಷಿಕೆಯ ಗ್ರಂಥ ಈ ತಿಂಗಳು ನನ್ನ ಕೈಸೇರಿತು. ಗ್ರಂಥದ ಸುಂದರ ರಕ್ಷಾಪುಟ, ವಿಶಿಷ್ಟ ಪುಟ ವಿನ್ಯಾಸ, ವಿಶೇಷ ಭಾವಚಿತ್ರ ಸಂಗ್ರಹ ಮತ್ತು ಆಕರ್ಷಕ ಮುದ್ರಣಗಳಿಂದ ಮೊದಲ ನೋಟದಲ್ಲೇ ಕಣ್ಸೆಳೆಯಿತು. ದೇರಾಜೆ ಸೀತಾರಾಮಯ್ಯ ಸಂಸ್ಮರಣ ಸಮಿತಿ ಸದಸ್ಯರು ಅದೆಷ್ಟು ತಿಂಗಳುಗಳ ಕಾಲ ಜನಸಂಪರ್ಕ, ಲೇಖನ ಸಂಪಾದನೆ, ಭಾವಚಿತ್ರ ಸಂಗ್ರಹ, ಮುದ್ರಣಕಾರ್ಯಗಳಲ್ಲಿ ತೊಡಗಿಸಿಕೊಂಡು ಪರಿಶ್ರಮಪಟ್ಟು ಈ ಗ್ರಂಥವನ್ನು ಹೊರ ತಂದಿದ್ದಾರೆ. ಒಟ್ಟು 664 ಪುಟಗಳ ಪೈಕಿ 600 ಪುಟಗಳಷ್ಟು ದೇರಾಜೆಯವರ ವ್ಯಕ್ತಿತ್ವ, ಅವರು ಬರೆದ ಸಾಹಿತ್ಯ, ದೇರಾಜೆ ಅರ್ಥವೈಭವಗಳನ್ನು ಪರಿಚಯಿಸುವ ವೈವಿಧ್ಯಮಯ ವಿವರವಾದ ಬರಹಗಳಿವೆ. 64 ಪುಟಗಳಲ್ಲಿ ಅಪರೂಪ ಭಾವಚಿತ್ರಗಳ ಭಂಡಾರ ಹರಡಿಕೊಂಡಿದೆ. ಗ್ರಂಥವನ್ನು ಸಮಗ್ರವಾಗಿ ಓದಿದವರು ಖಂಡಿತವಾಗಿಯೂ ಕರಾವಳಿ ಕರ್ನಾಟಕದ ಯಕ್ಷಗಾನ ಇತಿಹಾಸವನ್ನೂ, ತಾಳಮದ್ದಳೆ ಮಹತ್ತನ್ನೂ, "ದೇರಾಜೆ ಪರ್ವ"ದ ಚರಿತ್ರೆಯನ್ನೂ ತಿಳಿದುಕೊಳ್ಳಬಹುದಾಗಿದೆ.

ಕಳೆದ ಶತಮಾನದ 1914-1984ರ ಅವಧಿಯಲ್ಲಿ ಬದುಕಿದ್ದ ಯಕ್ಷಗಾನ ಕ್ಷೇತ್ರದ ಅಪ್ರತಿಮ ಕಲಾವಿದರಾಗಿದ್ದ ದೇರಾಜೆ ಸೀತಾರಾಮಯ್ಯ ಅವರ ಬದುಕು, ವ್ಯಕ್ತಿತ್ವ, ಕಲಾಸೇವೆ, ಸಾಹಿತ್ಯ ಸಾಧನೆ, ಜನಪ್ರಿಯತೆ, ಸಾಧನೆಗಳ ಪರಿಚಯವನ್ನು ಸಮಗ್ರವಾಗಿ ಈ ಗ್ರಂಥದಲ್ಲಿ ಮಾಡಿಕೊಟ್ಟಿದ್ದಾರೆ. ದೇರಾಜೆಯವರು ಪ್ರೌಢಶಾಲಾ ಮಟ್ಟದವರೆಗೆ ಮಾತ್ರ ಶಿಕ್ಷಣ ಮುಗಿಸಿದವರು. ಅಭಿಜಾತ ಸಾಹಿತಿ ಮತ್ತು ಕಲಾವಿದರಾಗಿದ್ದ ಇವರ ಕೌಟುಂಬಿಕ ಪರಿಸರ ಇವರ ಪ್ರತಿಭಾ ಪ್ರಕಟಣೆಗೆ ಅವಕಾಶ ಒದಗಿಸಿತು. ಪುರಾಣ ನಾಟಕಗಳಲ್ಲಿ ಅಭಿನಯ, ನಿರ್ದೇಶನ, ನೂತನ ರಂಗಪ್ರಯೋಗ ಗಳಿಗೆ ಇವರಿಗೆ ಪ್ರೋತ್ಸಾಹ ಸಿಕ್ಕಿತು. ಹಾಗೆಯೇ ಸಾಹಿತ್ಯ ರಚನೆಗೂ ಪ್ರೇರೇಪಿಸಿತು.

ತಾಳಮದ್ದಳೆ ಕ್ಷೇತ್ರದಲ್ಲಿ ಇವರಲ್ಲಿದ್ದ ಪ್ರತಿಭೆ, ಪುರಾಣ ಜ್ಞಾನ, ಲೋಕವಿಚಾರಗಳೊಂದಿಗೆ ವಿಶಿಷ್ಟ ವಾಕ್ ವೈಖರಿ, ಧ್ವನಿ, ಅರ್ಥ, ರಸವಿಲಾಸಗಳ ಚಾತುರ್ಯಪೂರ್ಣ, ಮೊನಚು, ಮಾತುಗಾರಿಕೆಗಳು ದೇರಾಜೆ ಅವರನ್ನು ಜನಮೆಚ್ಚುಗೆಯ ಅರ್ಥಧಾರಿಯಾಗಿ ಪ್ರಖ್ಯಾತಿಯನ್ನಾಗಿಸಿದವು. ಎಲ್ಲ ಪಾತ್ರಗಳಿಗೂ ಮಾತುಗಾರಿಕೆಯಲ್ಲಿ ಜೀವ ತುಂಬಬಲ್ಲ ಸಮರ್ಥರೆನಿಸಿದ್ದ ದೇರಾಜೆಯವರು ಹಾಸ್ಯಪೂರ್ಣ ಪಾತ್ರಗಳ ಅರ್ಥಗಾರಿಕೆಯ ಮೂಲಕ ಜನಪ್ರೀತಿ ಗಳಿಸಿದ್ದರು.

ದೇರಾಜೆಯವರ ತಾಳಮದ್ದಳೆ ಮಾತುಗಾರಿಕೆ ಮತ್ತು ಅವರ ಸಾಹಿತ್ಯ ಕೃತಿಗಳ ಮೂಲಕ ಅಭಿಮಾನಿ ಮಿತ್ರರು ಗಳಾಗಿದ್ದ ಡಿ.ವಿ.ಜಿ., ಎಸ್.ವಿ.ಪರಮೇಶ್ವರ ಭಟ್ಟ, ಶಿವರಾಮ ಕಾರಂತ, ಗೌರೀಶ ಕಾಯ್ಕಿಣಿ, ವಿದ್ವಾನ್ ರಂಗನಾಥ

ಶರ್ಮ, ಜಿ.ವೆಂಕಟಸುಬ್ಬಯ್ಯ, ಕೆ.ವಿ.ತಿರುಮಲೇಶ್, ಎಡನೀರು ಮಠದ ಕೇಶವಾನಂದ ಸ್ವಾಮೀಜಿ, ಏರ್ಯ ಲಕ್ಷ್ಮೀನಾರಾಯಣ ಅಳ್ವ, ವಾರಣಾಸಿ ಸುಬ್ರಾಯ ಭಟ್, ಗರ್ತಿಕೆರೆ ರಾಘಣ್ಣ ಮುಂತಾದ ಹಿರಿಯರು ದೇರಾಜೆಯವರ ಬಗ್ಗೆ ಬರೆದಿರುವ ಸುವರ್ಣಾಕ್ಷರಗಳ ಸಂಗ್ರಹ ಈ ಗ್ರಂಥದ ಹಿರಿಮೆಯನ್ನು ಹೆಚ್ಚಿಸಿವೆ. ಹಿರಿಯ ಚೇತನದ ಸಮಕಾಲೀನ ಕಲಾವಿದರಾಗಿ ಒಡನಾಡಿಗಳಾಗಿದ್ದ ಕೆರೆಮನೆ ಮಹಾಬಲ ಹೆಗಡೆ, ಕೆರೆಮನೆ ಶಂಭು ಹೆಗಡೆ, ಹೊಸ್ತೋಟ ಮಂಜುನಾಥ ಭಾಗವತ, ಶೇಣಿ ಗೋಪಾಲಕೃಷ್ಣ ಭಟ್, ಕೊಳ್ಯೂರು ರಾಮಚಂದ್ರ ರಾವ್, ಕುಂಬ್ಳೆ ಸುಂದರ ರಾವ್ ಮುಂತಾದವರು ದೇರಾಜೆಯವರು ಯಕ್ಷಗಾನ ಕ್ಷೇತ್ರದಲ್ಲಿ ಮಾಡಿರುವ ಮಹತ್ತರ ಕೊಡುಗೆಗಳನ್ನು ನೆನಪಿಸಿಕೊಂಡು ಬರೆದಿದ್ದ ಸಂಪಾದಿತ ಲೇಖನಗಳನ್ನು ಸಂಪಾದಿಸಿ ಪ್ರಕಟಿಸಲಾಗಿದೆ.

ಶತಾವಧಾನಿ ಆರ್ ಗಣೇಶ್, ಎಂ.ಪ್ರಭಾಕರ ಜೋಶಿ, ಲಕ್ಷ್ಮೀಶ ತೋಳ್ಪಾಡಿ, ವಿದ್ಯಾಭೂಷಣ, ಮಲ್ಲೇಪುರಂ ಜಿ. ವೆಂಕಟೇಶ್, ಕೆ.ಉಮಾಕಾಂತ ಭಟ್ ಮುಂತಾದ ವಿದ್ವಾಂಸರು ದೇರಾಜೆಯವರಲ್ಲಿ ಕಂಡ ಹಿರಿಮೆ ಗರಿಮೆಯ ನಲ್ನುಡಿಗಳು ಇಲ್ಲಿವೆ. ದೇರಾಜೆಯವರ ಸಂದರ್ಶನಗಳಲ್ಲಿ ಸಂದರ್ಶಕರು ಸಂಗ್ರಹಿಸಿ ಉಲ್ಲೇಖಿಸಿರುವ ಮಾತುಗಳನ್ನು ಗ್ರಂಥದಲ್ಲಿ ಸೇರಿಸಲಾಗಿದೆ.

ಕನ್ನಡದ ಭವಭೂತಿ, ರಸಋಷಿ, ಶಿರೋಮಣಿ, ವಾಙ್ಮಯ ರೂವಾರಿ, ಭೂಮ ವ್ಯಕ್ತಿತ್ವ, ವಾಗ್ವಿಲಾಸಿ ರಸಜ್ಞ, ಬಹುಮುಖಿ ಸಂತ, ಗುರುಸ್ವರೂಪಿ, ಚುಂಬಕ ಶಕ್ತಿ, ಅಜಾತಶತ್ರು, ಮೇರುಸದೃಶ ಸಾಹಿತಿ– ಹೀಗೆ ದೇರಾಜೆಯವರಿಗೆ ಹಲವು ಬಿರುದುಗಳನ್ನು ದಯಪಾಲಿಸಿ ಅಭಿಮಾನಿ ಬಳಗದವರು ಪ್ರೀತಿಯಿಂದ ಬರೆದ ಬರಹಗಳು ಈ ಗ್ರಂಥದಲ್ಲಿವೆ.

ದೇರಾಜೆ ಸೀತಾರಾಮಯ್ಯ ಅವರು ಬರೆದಿರುವ ರಾಮಾಯಣ: ಶ್ರೀರಾಮ ಚರಿತಾಮೃತಂ, ಮಹಾಭಾರತ: ಶ್ರೀಮನ್ಮಹಾಭಾರತ ಕಥಾಮೃತಂ, ವಿನೂತನ ಕೃತಿಯಾದ ಕುರುಕ್ಷೇತ್ರಕ್ಕೊಂದು ಆಯೋಗ, ರಾಮರಾಜ್ಯದ ರೂವಾರಿ, ಯಕ್ಷಗಾನ ವಿವೇಚನೆ, ಪ್ರಿಯದರ್ಶನಂ, ಧರ್ಮ–ದಾಸಿ, ಧರ್ಮದರ್ಶನ, ವಿಚಾರ ವಲ್ಲರಿ, ಯಕ್ಷಗಾನ ಪ್ರಸಂಗಗಳು, ನಾಟಕಗಳನ್ನು ಕುರಿತಾದ ವಿಮರ್ಶಾ ಲೇಖನಗಳು ಈ ಗ್ರಂಥದ ತೂಕವನ್ನು ಹೆಚ್ಚಿಸಿವೆ.

ಒಂದು ಗ್ರಾಮದ ಪಟೇಲರಾಗಿ, ಸಹಕಾರಿ ಆಂದೋಳನದ ರೂವಾರಿಯಾಗಿ, ಉತ್ತಮ ಸಂಘಟಕರಾಗಿ ದೇರಾಜೆ ಯವರು ಜನಾನುರಾಗಿಯಾಗಿದ್ದರು. ಪಿತೃವಾಕ್ಯ ಪರಿಪಾಲಕರಾಗಿ ತಂದೆಗಿತ್ತ ಮಾತನ್ನು ಉಳಿಸಿಕೊಳ್ಳಲು ತಾವು ಬರೆದ ರಾಮಾಯಣ ಕೃತಿಯನ್ನು ಊರೂರು ಸುತ್ತಿ ಮಾರಿ ಬಂದ ಹಣದಿಂದ ಊರಿನಲ್ಲಿ ಶ್ರೀರಾಮ ಮಂದಿರವನ್ನು ಕಟ್ಟಿಸಿದವರು ಇವರು. ನಾಟಕ ಮಂಡಳಿಯನ್ನು ನಡೆಸಿದವರು. ಕುಬಣೂರು ಬಾಲಕೃಷ್ಣ ರಾಯರ ತಾಳಮದ್ದಳೆ ತಂಡದಲ್ಲಿ ಪ್ರಮುಖ ಅರ್ಥಧಾರಿಯಾಗಿದ್ದವರು. ಅರವತ್ತರ ದಶಕದಲ್ಲಿ ಈ ತಾಳಮದ್ದಳೆ ತಂಡ ಬೆಂಗಳೂರು, ಮೈಸೂರು, ಹೈದರಾಬಾದ್, ಮದ್ರಾಸು, ದೆಹಲಿಗಳಿಗೆ ಹೋಗಿ ಯಕ್ಷಗಾನ ತಾಳಮದ್ದಳೆ ಕಲೆಯನ್ನು ಕಲಾಸಕ್ತರಿಗೆ ಪರಿಚಯಿಸಿದ್ದು ಒಂದು ಅಪೂರ್ವ ದಾಖಲೆ. ಆ ಸಂದರ್ಭದಲ್ಲಿ ಬೆಂಗಳೂರಿನ ವಿಧಾನಸೌಧ, ಗೋಖಲೆ ಸಂಸ್ಥೆಗಳಲ್ಲಿ ತಾಳಮದ್ದಲೆ ಏರ್ಪಾಡಾಗಿತ್ತು ಎಂಬುದನ್ನು ಉಲ್ಲೇಖಿಸಲೇಬೇಕು. ಅಂದಿನ ರಾಜಕೀಯ ಮುತ್ಸದ್ದಿಗಳು ಮತ್ತು ಕನ್ನಡ ಸಾಹಿತ್ದ ಹಿರಿಯ ಸಾಹಿತ್ಯ ದಿಗ್ಗಜರು ತಾಳಮದ್ದಳೆ ಕಾರ್ಯಕ್ರಮಗಳಿಗೆ ಸಾಕ್ಷಿಗಳಾಗಿದ್ದರು ಎನ್ನುವುದೇ ವಿಶೇಷ.

"ಹಾಸ್ಯರಸ ಸಿದ್ಧಿಯೇ ಕಲಾಸಿದ್ಧಿಯ ಸೋಪಾನ" ಎಂದು ದೇರಾಜೆಯವರು ನಂಬಿದ್ದವರು. ಚುಟುಕಾದ ಅರ್ಥ, ಕಾವ್ಯಮಯತೆಯ ಮೆರುಗು, ಅದ್ಭುತವಾದ ಪ್ರತ್ಯುತ್ಪನ್ನಮತಿತ್ವ ಇವುಗಳೇ ಸೀತಾರಾಮಯ್ಯನವರ ಅರ್ಥಗಾರಿಕೆಯ ವಿಶಿಷ್ಟತೆ. ಪ್ರಖ್ಯಾತಿಯ ಶಿಖರದಲ್ಲಿದ್ದಾಗಲೇ ಅತ್ಯಂತ ಬೇಡಿಕೆಯಲ್ಲಿದ್ದಾಗಲೇ ಸಂತೃಪ್ತಿಯಿಂದ ವೃತ್ತಿಯಿಂದ ನಿವೃತ್ತಿ ಪಡೆದ ದೇರಾಜೆಯವರ ಸದ್ಗುಣತ್ವ ಅಸದೃಶವಾದುದಾಗಿತ್ತು.

ನಾಡಿನ ಹಿರಿಯ ಸಾಹಿತಿಗಳು, ವಿದ್ವಾಂಸರು, ಸಹೃದಯಿಗಳು, ಒಡನಾಡಿಗಳು, ಬಂಧು ಬಳಗದವರು ಬರೆದ ಬರಹಗಳ ಖಜಾನೆ ಈ ಗ್ರಂಥ. ಶ್ರೀ ಮೂರ್ತಿ ದೇರಾಜೆಯವರ ಸಂಚಾಲಕತ್ವದಲ್ಲಿ ಮತ್ತು ಶ್ರೀ ಶ್ರೀಕರ ಭಟ್ ಮರಾಠೆಯವರ ಸಂಪಾದಕತ್ವದಲ್ಲಿ ಗ್ರಂಥ ಪ್ರಕಟವಾಗಿರುವುದು ಯಕ್ಷಗಾನ ಸಾಹಿತ್ಯ ಕ್ಷೇತ್ರವನ್ನು ಸಂಪದ್ಭರಿತ ಗೊಳಿಸಿದೆ.

ಇಂತಹ ಅಪೂರ್ವ ಗ್ರಂಥವನ್ನು ಸಾಹಿತ್ಯ ಕ್ಷೇತ್ರಕ್ಕೆ ನೀಡಿ ಮಹದುಪಕಾರಗೈದ ದೇರಾಜೆ ಸೀತಾರಾಮಯ್ಯ ಸಂಸ್ಮರಣ ಸಮಿತಿಯವರಿಗೆ ಮತ್ತೊಮ್ಮೆ ಅಭಿನಂದನೆಗಳು.

***

ಕಾಲಾಯ ತಸ್ಮೈ ನಮಃ

– ಮಾಲತಿಶ್ರೀನಿವಾಸನ್

ಕಾಲ ನಿನ್ನ ಗತಿಯ ಪರಿಯೇನು
ಅಚ್ಚರಿಯ ಮೂಡಿಸಿದರೊಮ್ಮೆ
ಗಮ್ಯ ತಲುಪುವ ಸಂತಸ ತರುವುದು ಮತ್ತೊಮ್ಮೆ.
ಬಾಲ್ಯದಿಂ ಹರೆಯಕ್ಕೆ ಮಧ್ಯಂತರದ ದ್ವಂದ್ವಕ್ಕೆ
ಮುಸ್ಸಂಜೆಯ ಮಬ್ಬಿಗೆ ಸಾಗಿತ್ತು ನಿನ್ನೊಡನೆ
ಪಯಣ ನಿರಂತರ ರಭಸದಲಿ ಗತಿ ತಪ್ಪದೆ.

ಬಾಲ್ಯದ ತುಂಟಾಟ ಎಲ್ಲವನ್ನು ಒಪ್ಪಿ ಅಪ್ಪಿ
ಕೊಳ್ಳುವ ಪಾಠ, ಕನಸಿನ ಲೋಕದಲಿ
ಹರೆಯದ ಚೆಲ್ಲಾಟ ಎಲ್ಲ ಗೆಲ್ಲುವನೆಂಬ
ಉತ್ಸಾಹ ಮೊಂಡಾಟ
ಈ ಎಲ್ಲದರ ಅರ್ಥ ಅರಿಯುವ ಮುನ್ನ,
ಸಂಪೂರ್ಣ ಸವಿಯುವ ಮುನ್ನ ಜಾರಿಸಿದೆ
ಮಧ್ಯಂತರ ದಾಟಿಸಿ ಮುಸ್ಸಂಜೆಗೆ.

ಸ್ವಲ್ಪ ನಿಧಾನಿಸು ಗೆಳೆಯ, ಕನಿಕರಿಸು,
ಓಡಲಾರೆ ನಾ ನಿನ್ನ ಗತಿ ನಿನ್ನ ವೇಗಕ್ಕೆ.
ತಾಯಿ ತಂದೆಯ ಒಲವು ಗೆಳೆಯರ
ಒಡನಾಟದ ನಲಿವು, ಬಾಳ ಸಂಗಾತಿಯ ಸಂಗ
ಪ್ರೇಮ ಆರಾಧನೆಯಲ್ಲಿ ಮೈಮರೆತ
ಅಂತರಂಗ, ಹೊಸ ಜೀವಿಗಳ ಆಗಮನ
ಪಾತ್ರ ಬದಲಾಯಿತು ಪ್ರತಿ ಕ್ಷಣ.

ನಿನ್ನ ಮಾಯಾ ಲೋಕ ಏನೆಲ್ಲ ತೋರಿಸಿತು
ಇಲ್ಲವಾಗಿಸಿತು ತುಂಬಿದೆಲ್ಲವ, ಶೂನ್ಯದೆಡೆ
ಸೆಳೆದಿತ್ತು, ಹಿರಿಯರಿಗೆ ಹತ್ತಿರದವರಿಗೆ ಹೇಳ
ವಿದಾಯ, ಸಿದ್ಧಳಾಗಿಹೆ ನಾ ನಿಂದು ಮುಂದಿನ
ಪಯಣಕ್ಕೆ. ಓ ಕಾಲ ಏಕೆಷ್ಟು ಅವಸರ
ನಿನಗೆ ಗೆಳೆಯ, ಅಸಹಾಯಕ ನಾ
ಹಾಕುತಿಹೆ ಹೆಜ್ಜೆ ನಿನ್ನ ತಾಳಕ್ಕೆ ನಿನ್ನ ಗತಿಗೆ.

ಅರಿವುಂಟು ನನಗೆ ನಿನ್ನೊಡನೆ ಹುರುಪಿನಲಿ
ನಡೆದರೆ ಬಾಳು, ನಿಂತು ನೀರಾದರೆ ಚಿಂತೆ
ರೋಗ ರುಜಿನದ ಗೋಳು. ಏನು ಗಳಿಸಿದೆ?
ಏನ ಸಾಧಿಸಿದೆ? ಏನು ಉಳಿಸಿ ಇಲ್ಲಿಂದ
ನಿರ್ಗಮಿಸುವೆ? ಸದಾ ಮನದಾಳದಲ್ಲಿ ತಾಕಲಾಟ
ಸರಿ ತಪ್ಪುಗಳ ಕೈಂಕರ್ಯದ ಹುಡುಕಾಟ.

ಕಾಲ ನೀ ಸ್ಥಿತ ಪ್ರಜ್ಞ ಗುರು, ನೀ ಸಾಗುತಿಹೆ
ನಿನ್ನ ವೇಗದಲಿ. ನಿನ್ನೊಡನೆ ಹೆಜ್ಜೆ ಹಾಕುವು–
ದೊಂದೇ ನನ್ನ ಮುಂದಿರುವ ಆಯ್ಕೆ.
ಕರ್ಮದ ಹಾದಿಯಲಿ ಹಿಮ್ಮುಖದ ಹೆಜ್ಜೆ
ಅಸಂಭವ. ಕರ್ಮದ ಕರೆ ಸದಾ ಮುನ್ನಡೆಸುವ
ತೊರೆ. ಏನು ಹೇಳಲಿ ನಾ, ಕೈಮುಗಿವೆ
ನಿನ್ನ ಚಲನೆಗೆ ಸುಮ್ಮನೆ.
ಮನದಾಳದ ಮಾತು "ಕಾಲಾಯ ತಸ್ಮೈ ನಮಃ".

***

ಸ್ವಾನುಭವದ ವೈಚಾರಿಕ ಲೇಖನ

ಸ್ವಾವಲಂಬನೆ

– ಶೀಲಾ ಅರಕಲಗೂಡು

ಕಳೆದ ವಾರ ನಾನೊಂದು ಪ್ರವಾಸಕ್ಕೆ ಹೋಗಿದ್ದೆ. ನಮ್ಮೊಡನೆ ಬಂದಿದ್ದ ಒಬ್ಬಾಕೆ ತನ್ನೊಡನೆ ತನ್ನ ಎರಡು ವರ್ಷದ ಸಣ್ಣ ಮಗುವನ್ನು ಕರೆತಂದಿದ್ದರು. ಆ ಮಗುವಂತೂ ತನ್ನ ವಸ್ತುಗಳನ್ನು, ಪಾದರಕ್ಷೆಯನ್ನು ತುಂಬಾ ಜತನದಿಂದ ನೋಡಿಕೊಳ್ಳುತ್ತಿತ್ತು. ಪಾದರಕ್ಷೆಯನ್ನಂತೂ ಎಲ್ಲೆಂದರಲ್ಲಿ ಹಾಕದೆ ಒಪ್ಪವಾಗಿ ಇಡುತ್ತಿದ್ದುದನ್ನು ನೋಡುವುದೇ ಒಂದು ಚೆಂದ ಎನಿಸಿತ್ತು. ಸಾಮಾನ್ಯವಾಗಿ, ಸಣ್ಣ ವಯಸ್ಸಿನಲ್ಲಿ ಮಕ್ಕಳು ಹೀಗೇ ಇರುತ್ತವೆ. ದೊಡ್ಡವರು ಮಾಡುವ ಕೆಲಸ ಗಳನ್ನು ಗಮನಿಸುತ್ತಾ ಅದೇ ರೀತಿ ತಮ್ಮ ಕೆಲಸಗಳನ್ನು ಒಪ್ಪವಾಗಿ ಮಾಡಲು ಪ್ರಯತ್ನಿಸುತ್ತವೆ. ಸಣ್ಣ ಸಣ್ಣ ಬಟ್ಟೆಗಳನ್ನು ಮಡಿಸುವುದು, ನೀರು ಕುಡಿದ ಲೋಟ ಎತ್ತಿಡುವುದು, ಹರಡಿದ ತನ್ನ ಆಟದ ಸಾಮಾನುಗಳನ್ನು ಅದಕ್ಕೆಂದೇ ಇರುವ ದೊಡ್ಡ ಬುಟ್ಟಿಯಲ್ಲೋ, ಖಾನೆಯಲ್ಲೋ ಹಾಕುವುದು, ಕಸ ಗುಡಿಸಲು ಯತ್ನಿಸುವುದು ಇತ್ಯಾದಿ ಇತ್ಯಾದಿ. ಇದನ್ನೆಲ್ಲ ಬಂದವರಿಗೆ ಹೇಳಿಕೊಂಡು ಮನೆಯವರು ಹೆಮ್ಮೆ ಪಡುವುದು ಎಲ್ಲರಿಗೂ ತಿಳಿದದ್ದೇ.

ಇಷ್ಟು ಚೆನ್ನಾಗಿ ತಮ್ಮ ಕೆಲಸಗಳನ್ನು ತಾವೇ ಮಾಡಿಕೊಳ್ಳಲು ಆಸಕ್ತಿ ತೋರಿಸುವ ಮಕ್ಕಳು ದೊಡ್ಡವರಾಗುತ್ತಾ ಈ ವಿಷಯಗಳಲ್ಲಿ ಅಸಡ್ಡೆ, ಸೋಮಾರಿತನ ತೋರುವುದು ಸಾಮಾನ್ಯ. ಇದಕ್ಕೆ ಹಲವಾರು ಕಾರಣಗಳಿರಬಹುದು. ಬೆಳೆಯುತ್ತಾ ಬೆಳೆಯುತ್ತಾ ಬದುಕು ವಿಸ್ತಾರಗೊಂಡು ಅನೇಕ ವಿಧಧ ಚಟುವಟಿಕೆಗಳಲ್ಲಿ, ಆಟಪಾಠಗಳಲ್ಲಿ ತೊಡಗಿ ಕೊಳ್ಳುವುದರಿಂದ ವೈಯಕ್ತಿಕ ಕೆಲಸಗಳ ಬಗ್ಗೆ ಶ್ರದ್ಧೆ, ಆಸಕ್ತಿ ಕಡಿಮೆಯಾಗಬಹುದು.

ಮತ್ತೊಂದು ಕಾರಣವೆಂದರೆ, ಇಂದು ಸಾಮಾನ್ಯವಾಗಿ ಜನರು ಆರ್ಥಿಕವಾಗಿ ಸದೃಢವಾಗಿರುವುದರಿಂದ, ಮನೆಯಲ್ಲಿ ಕೆಲಸದಾಳುಗಳು ಇದ್ದು, ಮಕ್ಕಳು ಸ್ವಂತದ ಕೆಲಸವನ್ನಾಗಲೀ, ಮನೆಯ ಕೆಲಸಗಳನ್ನಾಗಲೀ ಮಾಡುವುದನ್ನು ಕಲಿತಿರುವುದಿಲ್ಲ.

ಇವೆರಡೇ ಅಲ್ಲದೆ, ಇನ್ನೂ ಹಲವು ಕಾರಣಗಳಿರಬಹುದು.

ಇತ್ತೀಚೆಗೆ ನನ್ನ ಗೆಳತಿಯೊಬ್ಬರ ಮಗ ಉನ್ನತ ವ್ಯಾಸಂಗ ಮಾಡಬೇಕೆಂಬ ಅಭಿಲಾಷೆಯಿಂದ ಜರ್ಮನಿಗೆ ಹೋದ. ಇಲ್ಲಿ ತುಂಬಾ ಐಶ್ವರ್ಯವಂತ ಕುಟುಂಬದಲ್ಲಿದ್ದು, ಸ್ವಂತದ ಯಾವ ಕೆಲಸಗಳನ್ನೂ ಅವನು ಮಾಡಿಕೊಳ್ಳುತ್ತಿರಲಿಲ್ಲ. ಕೈಗೊಬ್ಬ, ಕಾಲಿಗೊಬ್ಬ ಎನ್ನುವಷ್ಟು ಆಳುಕಾಳುಗಳಿದ್ದರು.

ಜರ್ಮನಿಗೆ ಹೋದ ಒಂದೇ ವಾರಕ್ಕೆ ಅವನು ಅಲ್ಲಿರಲಾಗುವುದಿಲ್ಲವೆಂದೂ, ಹಿಂದಿರುಗಿ ಬಂದುಬಿಡುವೆನೆಂದೂ ತಂದೆ ತಾಯಿಗೆ ವರಾತ ಹಚ್ಚಿದ. ಕಾರಣ ಕೇಳಿದರೆ ನೀವು ನಗಬಹುದು. ಅವನು ಹೇಳಿದ್ದೇನೆಂದರೆ, "ಇಲ್ಲಿ ನನ್ನ ಹೊದಿಕೆಯನ್ನು ನಾನೇ ಮಡಿಸಬೇಕು, ಕೋಣೆಯ ಕಸವನ್ನು ನಾನೇ ಕಸದ ಬುಟ್ಟಿಗೆ ಹಾಕಬೇಕು, ಒಗೆಯುವ ಬಟ್ಟೆಗಳನ್ನು ನಾನೇ ವಾಷಿಂಗ್ ಮಿಷಿನ್ನಿಗೆ ಹಾಕಬೇಕು. ನನ್ನ ಕೈಲಿ ಇದೆಲ್ಲ ಸಾಧ್ಯವಿಲ್ಲ." ಒಂದೇ ವಾರದಲ್ಲಿ ಅವನು ಮನೆಗೆ ಹಿಂದಿರುಗಿ ಬಂದೇಬಿಟ್ಟ.

ಮೇಲೆ ಹೇಳಿದ್ದಕ್ಕೆ ವ್ಯತಿರಿಕ್ತವಾದ ಮತ್ತೊಂದು ಅನುಭವ ನಿಮ್ಮೊಡನೆ ಹಂಚಿಕೊಳ್ಳಲು ತುಂಬಾ ಸಂತೋಷವೆನಿಸುತ್ತದೆ. ಒಂದು ಅತ್ಯಂತ ಸಂತೋಷಕರ ಅವಕಾಶ ಕಳೆದ ತಿಂಗಳು ನನಗೆ ದೊರೆಯಿತು. ಅದು

ಅತ್ಯಂತ ಅಪೂರ್ವ ಅವಕಾಶ ಎಂದೇ ನಾನು ಭಾವಿಸುತ್ತೇನೆ. ಅವಕಾಶ ಕೊಟ್ಟವರು ಈ ವೇದಿಕೆಯ ಹೆಮ್ಮೆಯ ಸದಸ್ಯರುಗಳಲ್ಲೊಬ್ಬರಾದ ಶ್ರೀ ಜಿ. ವಿ. ಅರುಣ ಅವರು. ಅವರಿಗೆ ನಾನು ಕೃತಜ್ಞಳು.

ಕಳೆದ ಅಕ್ಟೋಬರ್ ತಿಂಗಳ ಕಡೆಯ ವಾರದಲ್ಲಿ ಶ್ರೀಯುತ ಜಿ. ವಿ. ಅರುಣ ಅವರು ನನಗೆ ಕರೆ ಮಾಡಿ, ನವೆಂಬರ್ 26ರಂದು ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಶ್ರೀ ರಾಮಕೃಷ್ಣ ಸ್ಟೂಡೆಂಟ್ಸ್ ಹೋಂಗೆ ಬಂದು, 'ಕನ್ನಡ ನಮಗೇಕೆ ಬೇಕು?' ಎಂಬ ವಿಷಯದ ಬಗ್ಗೆ ಮಾತನಾಡಬೇಕೆಂದು ಕೇಳಿಕೊಂಡರು. ನನಗೆ ಒಪ್ಪಿಗೆ ನೀಡಲು ಧೈರ್ಯವೇ ಬರಲಿಲ್ಲ. ಆದರೂ ಇದು ನನ್ನ ಒಳಿತಿಗಾಗಿಯೇ ಬಂದಿರಬಹುದಾದ ಅವಕಾಶವೆಂದು ತಿಳಿದು ಒಪ್ಪಿಗೆ ಕೊಟ್ಟೇಬಿಟ್ಟೆ. ಈ ಕಾರಣದಿಂದ ಕನ್ನಡ ಸಾಹಿತ್ಯದ ಇತಿಹಾಸದ ಬಗ್ಗೆ ಒಂದಷ್ಟು ಅಧ್ಯಯನ ಮಾಡಬಹುದೆಂದುಕೊಂಡೆ. ಅಲ್ಲದೆ ಶತಮಾನಕ್ಕೂ ಮೀರಿದ ಇತಿಹಾಸವುಳ್ಳ ಹಾಗೂ ಹಲವಾರು ಹಿರಿಯ ಜ್ಞಾನಿಗಳು ಓಡಾಡಿದಂತಹ ಕಟ್ಟಡದಲ್ಲಿ ನಾನೂ ಹೋಗಿ ಪುನೀತಳಾಗುವ ಅವಕಾಶ ತಪ್ಪಿಸಿಕೊಳ್ಳುವುದಾದರೂ ಹೇಗೆ? ನಮ್ಮೆಲ್ಲರ ಹೆಮ್ಮೆಯ ಶತಾಯುಷಿ, ನಿಘಂಟು ತಜ್ಞ ಪ್ರೊ. ಜಿ.ವೆಂಕಟಸುಬ್ಬಯ್ಯನವರು ವಾರ್ಡನ್ ಆಗಿ ಹಲವಾರು ದಶಕಗಳ ಕಾಲ ಸೇವೆ ಸಲ್ಲಿಸಿದ ಸಂಸ್ಥೆಯಲ್ಲಿ ಆಹ್ವಾನಿತಳಾಗುವ ಸುಯೋಗ ದೊರೆತದ್ದಕ್ಕಾಗಿ ಭಗವಂತನಿಗೆ ಮನದಲ್ಲೇ ವಂದಿಸಿದೆ.

ಶ್ರೀ ರಾಮಕೃಷ್ಣ ಸ್ಟೂಡೆಂಟ್ಸ್ ಹೋಂ ನಿಜಕ್ಕೂ ಒಂದು ವಿಶಿಷ್ಟ ಸಂಸ್ಥೆ. ಅಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ ಸ್ವಲ್ಪ ಕಡಿಮೆ ಎನಿಸಿದರೂ ಇರುವವರೆಲ್ಲ ಸಮಾಜಕ್ಕೆ ಮಾದರಿಯಾಗಿ ಬೆಳೆಯುತ್ತಿರುವವರು ಎನ್ನಿಸಿತು.

ನವೆಂಬರ್ ತಿಂಗಳ ಮೊದಲ ವಾರದಲ್ಲೇ ವಿದ್ಯಾರ್ಥಿಯೊಬ್ಬ ಬಂದು ಸಂಸ್ಥೆಯ ಬಗ್ಗೆ ಹೆಚ್ಚಿನ ಮಾಹಿತಿ ಕೊಡುವಂತಹ, ಶತಮಾನೋತ್ಸವದ ಪ್ರಯುಕ್ತ ಹೊರತಂದಿದ್ದ ಒಂದು ಸಂಚಿಕೆಯನ್ನು ಕೊಟ್ಟು ಹೋದದ್ದು ನನಗೆ ಸಂಸ್ಥೆಯ ಬಗ್ಗೆ ಹೆಚ್ಚು ಅರಿಯಲು ಅನುಕೂಲವಾಯಿತು. ಆಹ್ವಾನ ಪತ್ರಿಕೆಯನ್ನೂ ವಿದ್ಯಾರ್ಥಿಗಳೇ ತಯಾರಿಸಿ ಕಳಿಸಿದರು.

ನವೆಂಬರ್ 26 ಬಂದೇಬಿಟ್ಟಿತು. ಒಂದು ರೀತಿಯ ಕುತೂಹಲ, ಸಂಭ್ರಮದಿಂದಲೇ ಶ್ರೀ ರಾಮಕೃಷ್ಣ ಸ್ಟೂಡೆಂಟ್ಸ್ ಹೋಂಗೆ ಕಾಲಿಟ್ಟೆ. ಅರುಣರವರೇ ನನ್ನನ್ನು ತುಂಬಾ ಆತ್ಮೀಯತೆಯಿಂದ ಆಹ್ವಾನಿಸಿ, ಒಂದಿಬ್ಬರು ವಿದ್ಯಾರ್ಥಿಗಳಿಗೆ ಪರಿಚಯಿಸಿ, ಕುಳಿತುಕೊಂಡಿರಲು ತಿಳಿಸಿದರು. ಅವರು ಒಂದು ಮೀಟಿಂಗಿನಲ್ಲಿದ್ದುದರಿಂದ ಸ್ವಲ್ಪ ಕಾಯಲು ಹೇಳಿದರು.

ನಾನು ಮಕ್ಕಳೊಂದಿಗೆ ಮಾತನಾಡುತ್ತಾ ಅವರುಗಳ ದಿನಚರಿ ತಿಳಿದುಕೊಂಡೆ. ಒಬ್ಬ ವಿದ್ಯಾರ್ಥಿಯೊಂದಿಗೆ ಇಡೀ ಕಟ್ಟಡ ನೋಡಿ ಬಂದೆ. ಪೂಜಾಗೃಹವನ್ನೂ ಹೊಕ್ಕಿ ಬಂದೆ. ಅಲ್ಲಿ ಒಂದಿಬ್ಬರು ವಿದ್ಯಾರ್ಥಿಗಳು ಪೂಜೆಗೆ ಸಜ್ಜು ಗೊಳಿಸುತ್ತಿದ್ದರು. ಕಂಪ್ಯೂಟರ್ ರೂಮು, ಲೈಬ್ರರಿ, ಎಲ್ಲೆಡೆ ಶಾಂತ ವಾತಾವರಣ! ಒಂದಿಷ್ಟಾದರೂ ಕಸ ಕಾಣಲಿಲ್ಲ. ವಿದ್ಯಾರ್ಥಿಗಳೇ ಕಟ್ಟಡವನ್ನು, ತಮ್ಮ ತಮ್ಮ ಕೋಣೆಗಳನ್ನು ಶುಚಿಯಾಗಿಟ್ಟುಕೊಳ್ಳುತ್ತಾರೆಂದು ತಿಳಿದುಬಂತು. ಎಲ್ಲರೂ ಶುಭ್ರವಾದ ಬಿಳಿ ಪಂಚೆಯನ್ನುಟ್ಟು ಅಂಗಿ ಧರಿಸಿದ್ದರು. ಅವರೆಲ್ಲ ಪ್ರತಿಭಾವಂತರಾಗಿದ್ದು ಬೇರೆ ಬೇರೆ ಪದವಿ ಕಾಲೇಜುಗಳಲ್ಲಿ ಓದುತ್ತಿದ್ದರು. ಬಹಳಷ್ಟು ಮಂದಿ ಇಂಜಿನಿಯರಿಂಗ್ ವಿದ್ಯಾರ್ಥಿಗಳು ಎಂದು ತಿಳಿದುಬಂತು. ಸ್ವಾವಲಂಬನೆಯ ಬದುಕು ಅವರದಾಗಿತ್ತು. ಅಡಿಗೆಯವರು ಮಾಡಿಟ್ಟಿದ್ದನ್ನು ತಾವೇ ಬಡಿಸಿಕೊಂಡು ಊಟ ಮಾಡುವ ವ್ಯವಸ್ಥೆಯನ್ನೂ ಅವರು ಮಾಡಿಕೊಂಡಿದ್ದರು. ಅವರುಗಳ ಮುಖದಲ್ಲಿ 'ಎಲ್ಲಿ ಹೋದರೂ ನನ್ನನ್ನು ನಾನು ನೋಡಿಕೊಂಡು ಚೆನ್ನಾಗಿ ಬದುಕಬಲ್ಲೆ' ಎನ್ನುವ ಸ್ವಾಭಿಮಾನದ ಪ್ರಭೆ ಕಾಣುತ್ತಿತ್ತು. ಇಂಥ ಸಂಸ್ಥೆಯಲ್ಲಿ ಸ್ವಲ್ಪವೂ ಖರ್ಚು ವೆಚ್ಚವಿಲ್ಲದೆ ಇದ್ದು ಓದುವ ಅವಕಾಶ ದೊರೆತಿದ್ದಕ್ಕೆ ಸಾರ್ಥಕ್ಯ ಭಾವ ಅವರ ಮಾತುಗಳಲ್ಲಿ ಕಂಡುಬಂತು. 'ಎಷ್ಟೆಲ್ಲ ಹಿರಿಯರ ಹಾರೈಕೆ ಅವರಿಗೆ ದೊರೆತಿರಬಹುದಲ್ಲವೆ?' ಎನ್ನಿಸಿತು.

ಕಾರ್ಯಕ್ರಮದ ಸಂಪೂರ್ಣ ನಿರ್ವಹಣೆ ವಿದ್ಯಾರ್ಥಿಗಳದ್ದೇ ಆಗಿತ್ತು. ನಂತರದಲ್ಲಿ ಪೂಜಾಗೃಹದಲ್ಲಿ ದೇವರಿಗೆ ಮಂಗಳಾರತಿ ಮಾಡಿ ಪ್ರಸಾದ ವಿನಿಯೋಗ ಮಾಡಿದ್ದು ಕೂಡಾ ವಿದ್ಯಾರ್ಥಿಗಳೇ. ಭೋಜನ ಶಾಲೆಯಲ್ಲಿ ಬಾಳೆ ಎಲೆ ಹಾಕಿ ಸ್ವಾದಿಷ್ಟವಾದ ಭೋಜನವನ್ನು ವಿದ್ಯಾರ್ಥಿಗಳೇ ಬಡಿಸಿದ್ದು ಮನಸ್ಸು ತುಂಬಿ ಬಂತು. ಇಂತಹ ವಿದ್ಯಾರ್ಥಿಗಳು ಸಮಾಜಕ್ಕೆ ದೊಡ್ಡ ಕೊಡುಗೆಯಾಗುವುದರಲ್ಲಿ ಸಂಶಯವಿಲ್ಲವೆನಿಸಿತು.

ಈ ರೀತಿಯಾಗಿ ಸ್ವಾವಲಂಬನೆ ಕಲಿಸುತ್ತಾ, ಉತ್ತಮ ಸಂಸ್ಕಾರ ನೀಡುತ್ತಾ, ಆರ್ಥಿಕವಾಗಿ ಹಿಂದುಳಿದ ಪ್ರತಿಭಾವಂತರಿಗೆ ವಿದ್ಯಾರ್ಜನೆ ಮಾಡಲು ಇಸವಿ 1919ರಿಂದಲೂ ಶ್ರಮಿಸುತ್ತಿರುವ ಈ ಸಂಸ್ಥೆಗೆ ನಾವೆಲ್ಲ ಆಭಾರಿಯಾಗಿರಬೇಕೆನಿಸಿತು. ಹಲವಾರು ಹಿರಿಯರು, ಈ ಹಿಂದೆ ಅಲ್ಲೇ ಇದ್ದು ಕಲಿತವರು, ಈಗಲೂ ಅಭಿಮಾನದಿಂದ ಅಲ್ಲಿಗೆ ಬಂದು ಸೇವೆ ಮಾಡುತ್ತಿರುವುದನ್ನು ನೋಡಿ ತುಂಬಾನೇ ಸಂತೋಷವಾಯ್ತು. ಅಂತಹ ಮಹನೀಯರುಗಳ ಪರಿಚಯ ಭಾಗ್ಯವೂ ದೊರೆತದ್ದು ನನ್ನ ಸುದೈವ.

***

ಕಳೆಯಿತು ಇಪ್ಪತ್ತೂರರ ಸಂಭ್ರಮ

– ಮಾಲತಿ ಶ್ರೀನಿವಾಸನ್

ಕಳೆಯಿತು ಇಪ್ಪತ್ತೂರರ ಸಂಭ್ರಮ
ಏನುಂಟು ಇಪ್ಪತ್ನಾಲ್ಕರಲಿ
ಪ್ರತಿ ವರುಷದ ಕೊನೆಯಲಿ ಇದೆ
ಪ್ರಶ್ನೆ ಮತ್ತದೇ ಸಂಭ್ರಮ ಸಡಗರ
ಜಗದಲ್ಲಿ, ಸಂಭ್ರಮ ಸಡಗರ ಜಗದಲ್ಲಿ.

ಹಿತವಾದುದ ಹಿಡಿದು ಬೇಡದ ಬಿಟ್ಟು
ಮುನ್ನಡೆಯುವ ಹೊಸ ನಿರ್ಧಾರದಲಿ
ಅರಿತೋ ಅರಿಯದೆ ಮನ ಮತ್ತೊಮ್ಮೆ
ಹಳೆ ಜಾಡನೆ ಹಿಡಿವುದು ಆಚರಣೆಯಲಿ.

ಆಸೆ ದುರಾಸೆಯ ಮನಸು ನೂರಾರು
ಕನಸು, ಬಾಳ ಕಟ್ಟಲು ಹೊಸಹೊಸ
ದಿರಿಸು. ಯೋಜನೆಗಳ ಆಗರ ತಲೆಯಲ್ಲಿ
ಗೆಲುವು ಯಾವುದಕೋ ಸೋಲುವುದು
ಯಾವುದೊ, ಮೇಲಿನವನ ಆಟದ ನಿರ್ಧಾರದಲಿ.

ನಮ್ಮ ಯುಗಾದಿಯು ಮುಂದುಂಟು
ಈ ಹೊಸ ವರುಷದ ಆಗಮನ ಬರಿ
ತಾರೀಖಿನಲಿ, ಹಾರಿಕೆ ಮಾತು ಬಾಯಲ್ಲಿ.
ಮೂವತ್ತೊಂದರ ರಾತ್ರಿ ಹೊಸ ವರುಷಕ್ಕೆ
ಪ್ರತಿ ವರುಷವು ಸ್ವಾಗತ ಜೋರುಂಟು ನಮ್ಮಲ್ಲಿ.

ಹೊಸತೋ ಹಳೆತೋ ಏನಾದರೂ ಸರಿ
ಇದ್ದವರ ಕೈಂಕರ್ಯದಲಿ, ಬಡವನ
ಜೀವಕೆ, ಅಸಹಾಯಕರಿಗೆ ಎಲ್ಲುಂಟು
ಸಂಭ್ರಮ ಸಡಗರ ಬಾಳಿನಲಿ.
ಸಂತ್ರಸ್ತರಿಗೆ ಪರಿಹಾರ ಕಾಂಬುದು
ಬರಿ ಪತ್ರಿಕೆಯಲಿ, ಪುಂಖಾನುಪುಂಖ
ಕವಿ ಲೇಖಕರ ಸಾಹಿತ್ಯದಲಿ.

ಕೊಡುವರು ಯಾರೋ? ಕೊಳ್ಳುವವರ್‍ಯಾರೋ
ಎಲ್ಲಾ ಅಯೋಮಯಾ ಈ ಜಗದಲ್ಲಿ
ದಿನನಿತ್ಯ ನಾಟಕ ದೊಂಬರಾಟ ನಮ್ಮನು
ಆಳುವ ನೇತಾರರ ಕಣದಲ್ಲಿ.
ಮುಂದುಂಟು ಮಾರಿ ಹಬ್ಬ ಎನ್ನದೆ
ಕಾಯುವ ನಾವ್ ಆಶಾಭಾವದಲಿ

ಕಳೆಯಿತು ಇಪ್ಪತ್ತೂರರ ಸಂಭ್ರಮ
ಏನುಂಟು ಇಪ್ಪತ್ನಾಲ್ಕರಲಿ?

***

ನಾನೂ, ನನ್ನ ಸಹಪಾಠಿ ಮಿತ್ರನೂ – ಲೇಖನ ಮಾಲೆ– 12

ಬಾಂಧವ್ಯ (ಅಂತಿಮ ಭಾಗ)

– ಮಾಧುರಿ ಕೃಷ್ಣ

ಸಹಪಾಠಿ ಮಿತ್ರನು ಚಿನ್ನತೆಯಲ್ಲಿ ಚಾರಿ ಊಟ ತಿಂಡಿಗಳನ್ನು ತ್ಯಜಿಸಿಬಿಟ್ಟಿದ್ದಾನೆಂದು ಕೇಳ ಓಡೋಡಿ ಬಂದಿದ್ದ ನಾನು ಹಾಗೂ ನನ್ನ ಮಾತಿಗೆ ಮಣಿದು ಕೊನೆಗೂ ಮಂಚ ಬಿಟ್ಟಿದ್ದು ಹಾಲಿಗೆ ಬಂದಿದ್ದ ಮಿತ್ರ ನೆಟ್ಟಗೆ ಕುಳಿತ.

ಮತ್ತುಳಿದ ಸಮಯವೆಲ್ಲ ಅವನು ವ್ಹೀಲ್ ಛೇರ್‌ನಲ್ಲಿ ಕುಳಿತಿದ್ದಂತೇ ಒಂದೊಂದೇ ಮಾತಾಗಿ ಬಿಕ್ಕಳಿಸಿ, ಬಿಕ್ಕಳಿಸಿ ಹೊರಬಂದುವು. ಆಗ ನಾನು ಕೇಳಿಸಿಕೊಂಡದ್ದು ಆವರೆಗಿನ ಬದುಕಲ್ಲಿ ಎಂದೂ ಕೇಳದ, ಕಾಣದ ಮನುಷ್ಯ ಗುಣ ಧರ್ಮದ ಅನುಪಮ ಪ್ರವೃತ್ತಿಯೊಂದನ್ನು! 50 ವರ್ಷಗಳ ಹಿಂದೆಯೇ ನಡೆದ ಆ ಮಹತ್ತರ ಘಟನೆಯ ಕಿಂಚಿತ್ತೂ ಅರಿವಿಲ್ಲದ ನಾನು ಗರಬಡಿದು ಕೂತುಬಿಟ್ಟಿದ್ದೆ. ಚಿನ್ನತೆಯಲ್ಲಿ ಕುಗ್ಗಿಹೋದ ಮಿತ್ರ, ತನ್ನ ಅನಾರೋಗ್ಯವನ್ನೂ ಅಸಹಾಯಕತೆಯನ್ನೂ ನಿರ್ಲಕ್ಷ್ಯಿಸಿ, ಹೃದಯದಲ್ಲಿ ಮಡುಕಟ್ಟಿ ಘಾತಿಸುತ್ತಿದ್ದ ಬಂಡಿ ಭಾರವನ್ನು ಕಥೆಯಾಗಿ ಬಿಚ್ಚಿ ಬಿಡಿಸಿದ್ದ.

ಕೊನೆಗೂ ನನ್ನ ಮಗ ನನ್ನನ್ನು ಕರೆದೊಯ್ಯಲು ಬರುವವರೆಗೂ ಮಧ್ಯೆ ಒಂದೇ ಒಂದು ಮಾತು ಆಡದೇ ಕೇಳಿಸಿಕೊಳ್ಳುತ್ತಲೇ ಇದ್ದ. ನಾನು ಆಗ ಅವನೆದುರು ಎದ್ದು ನಿಂತೆ. ಅದೆಂಥಹುದೋ ಭಾವತೀವ್ರತೆಯಿಂದ ನನ್ನೆರಡೂ ಕೈಗಳು ಜೋಡಿಸಿಕೊಂಡುವು. .ತಲೆ ತುಸು ಬಾಗಿಕೊಂಡು ಆ ಘಳಿಗೆ ಕ್ಷಣಕಾಲ ತಟಸ್ಥವಾಯಿತು. ಮತ್ತೆ ಮರದ ಕುರ್ಚಿಯ ಎರಡೂ ಕೈಗಳಲ್ಲಿ ಆಧಾರ ಪಡೆದು ಪವಡಿಸಿದ್ದ ಅವನ ಕೈಗಳೆರಡನ್ನೂ ಎತ್ತಿ ನನ್ನ ಬೊಗಸೆಯಲ್ಲಿ ಆಪ್ತವಾಗಿ ಹಿಡಿದು ಮಾತು ಬಾರದ ಮೂಗಿಯಾಗಿಯೇ ಅವನೆದುರಿನಿಂದ ನಿರ್ಗಮಿಸಿದೆ.

ಅಂದು ನನ್ನ ಮಿತ್ರ ಹೇಳಿದ ಕಥೆ ಸಂಕ್ಷಿಪ್ತವಾಗಿ ಹೀಗಿದೆ:

ಮೂರು ವರ್ಷದ ಪದವಿಯ ಕೊನೆಯಲ್ಲಿ 'ಮದುವೆ ಮಾಡಿಕೊಂಡ ಅವಸರದ ಮಿತ್ರ ' ಎಂಬ ನಮ್ಮ ನಗೆಪಾಟಲಿಗೆ ಗುರಿಯಾದ ಮಿತ್ರನಲ್ಲಿ'ಡಬ್ಬಲ್ ಫ್ರುಟ್ ಸಾಲಾಡ್' ಡಿಮಾಂಡ್ ಮಾಡಿಕೊಂಡು ತಿಂದ ಅವನ ಮದುವೆಯಲ್ಲಿ ಒಂದಲ್ಲ, ಎರಡು ತ್ಯಾಗದ ಕಥೆಗಳದ್ದುವು ಎಂಬುದು ಇದೀಗ 50 ವರ್ಷಗಳಷ್ಟು ತಡವಾಗಿ ನನಗೆ ತಿಳಿದುಬಂತು.

ಮೂವರು ಅಣ್ಣಂದಿರಿಗೆ ತಮ್ಮನಾಗಿ ಹುಟ್ಟಿದ ನನ್ನ ಸಹಪಾಠಿ ಮಿತ್ರನಿಗೆ ಅಣ್ಣಂದಿರ ಮಧ್ಯದಲ್ಲೇ ಹುಟ್ಟಿದ ಅಕ್ಕನೊಬ್ಬಳಿದ್ದಳು. ಅವನ ಭಾವನಾಗಿ ಅಕ್ಕನನ್ನು ಮದುವೆಯಾಗುವವನಿಗೆ ಕಾಕತಾಳೀಯವಾಗಿ ತಂಗಿಯೂ ಒಬ್ಬಳಿದ್ದಳು. ಕಡು ಬಡವನಾದ ಆ ಮದುವೆ ಗಂಡು, ಕಲಿಯುವುದರಲ್ಲಿ ಮಹಾ ಬುದ್ಧಿವಂತ ಮಾತ್ರವಲ್ಲ, ಆ ಕಾಲಕ್ಕೇನೇ ಅಮೇರಿಕಾ ಸಂಯುಕ್ತ ಸಂಸ್ಥಾನದ ಅತ್ಯಂತ ಪ್ರತಿಷ್ಠಿತ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮುಂದುವರಿಸಲು ಫೆಲೋಶಿಪ್ ಕೂಡ ಪಡೆದು ಹೊರಡುವ ಕ್ಷಣಕ್ಕಾಗಿ ಚಡಪಡಿಸುತ್ತಿದ್ದ. ಆದರೆ ಹೊರಡಲು ಬೇಕಾದ ಕನಿಷ್ಠ ಸಿದ್ಧತೆಗಳಿಗೂ ಹಣದ ಅಭಾವವಿದ್ದು, ಮದುವೆಯ ವರದಕ್ಷಿಣೆ ಬಿಟ್ಟರೆ ಬೇರಾವ ದಾರಿಯೂ ಮನೆಯವರಿಗೆ ತೋರುತ್ತಿರಲಿಲ್ಲ.

ನನ್ನ ಸಹಪಾಠಿ ಮಿತ್ರನ ತಂದೆಯಾದರೋ ಆಗರ್ಭ ಶ್ರೀಮಂತರಿದ್ದು ಮಗಳಿಗಾಗಿ ಎಷ್ಟೂ ವರದಕ್ಷಿಣೆಯನ್ನು ನೀಡಲು ಸಿದ್ಧರಿದ್ದರು. ಆದರೂ ಸಮಸ್ಯೆಯೊಂದು ಬೆಟ್ಟವಾಗಿ ಮಧ್ಯದಲ್ಲಿ ನಿಂತಿತ್ತು.

ವಿದೇಶಕ್ಕೆ ಹೊರಟ ಬುದ್ಧಿವಂತನಿಗೆ ಅಂದಚೆಂದದಲ್ಲಿ ಏನೇನೂ ಸಾಟಿಯಲ್ಲದ, ಮದುವೆಗೆ ನೆರೆತ ತಂಗಿಯೊಬ್ಬಳಿದ್ದರೆ, ಮಿತ್ರನ ಅಕ್ಕನೋ ಇನ್ನೊಂದು ತರದ ಸಂಕಷ್ಟದಿಂದ ಬದುಕಿ ಉಳಿದವಳಾಗಿದ್ದಳು. ಬರೇ ಹತ್ತು ವರ್ಷದ ಚೆಂದದ ಹೆಣ್ಣುಮಗಳು ಬೆಂಕಿ ಅಪಘಾತಕ್ಕೆ ಸಿಲುಕಿ ದೇಹದ ಮೇಲ್ಭಾಗವೆಲ್ಲ ಸುಟ್ಟರೂ ಬದುಕಿ ಉಳಿದು ಮದುವೆಗೆ ನೆರೆದಿದ್ದಳು. ಮಗಳ ಚಿಂತೆಯಲ್ಲೇ ಕೊರಗಿ ಕೊರಗಿ ತಾಯಿಯೂ ಈಚೆಗೆ ತೀರಿಕೊಂಡಿದ್ದರು. ತಂದೆಯು ಇನ್ನೆಷ್ಟು ದಿನವೋ!

ಇರುವ ಮೂವರು ಅಣ್ಣಂದಿರಲ್ಲಿ ಈ ನತದೃಷ್ಟ ತಂಗಿಗಾಗಿ ತ್ಯಾಗ ಮಾಡುವಷ್ಟು ಮನೋಬಲ ಅವರಿಗ್ಯಾರಿಗೂ ಇದ್ದಿರಲಿಲ್ಲ! ಅಂಥಾ ತಳಮಳದ ಸಂದರ್ಭದಲ್ಲಿ ಕಾಲೇಜಿನಲ್ಲಿ ಪುಂಡನೂ, ರೌಡಿಯೂ ಆಗಿ ಕಾಣಿಸುತ್ತಿದ್ದ ಸಹಪಾಠಿ ಮಿತ್ರ ಸ್ವತಃ ಒಂದು ನಿರ್ಧಾರ ತೆಗೆದುಕೊಂಡುಬಿಟ್ಟ. 'ಒಂದು ಹೆಣ್ಣು ಕೊಟ್ಟು ಒಂದು ಹೆಣ್ಣು ತರುವ ಯೋಜನೆ'ಗೆ ಒಪ್ಪಿಗೆ ಸೂಚಿಸಿದ. ಅಕ್ಕನನ್ನು ಮದುವೆಯಾಗುವ ಗಂಡಿಗೆ ಮಿತ್ರನ ತಂದೆ ಭಾರೀ ಮೊತ್ತವನ್ನೇ ಪಾವತಿಸಿದರು. ಆಗಲೇ ಒಂದು ಚಮತ್ಕಾರವೂ ನಡೆಯಿತು.

ಒಂದೇ ಮಂಟಪದಲ್ಲಿ ಒಟ್ಟಿಗೇ ಎರಡೂ ಮದುವೆಗಳು ನಡೆದುವು. ಯಾವಾಗ ವಿವಾಹ ಮಂತ್ರಗಳು ಜೋರಾಗಿ ಪಠಿಸತೊಡಗಿದುವೋ, ಮಿತ್ರನ ಅಕ್ಕ ವಧುವಾಗಿ ಆ ಬುದ್ಧಿವಂತನ ಕೈ ಹಿಡಿದಳೋ ಅಥವಾ ಅವನೇ ಅವಳ ಕೈ ಹಿಡಿದು ತನ್ನ ಬಾಳಿಗೆ ಸೇರಿಸಿಕೊಂಡನೋ, ಆ ವಿದೇಶ ಆಕಾಂಕ್ಷೀ ವರ ತನ್ನ ಆಸೆ ಕನಸುಗಳಿಗೆ ಎಳ್ಳು ನೀರು ಬಿಟ್ಟು, ಹುಟ್ಟಿದ ನಾಡಿನಲ್ಲೇ ಉಳಿದು ವಾಸಿಸುವ ನಿಶ್ಚಯ ಮಾಡಿಕೊಂಡ. ಸಿಕ್ಕಿದ ಯಾವುದೋ ಕಾಲೇಜಿಗೆ ಉಪನ್ಯಾಸಕನಾಗಿ ಸೇರಿಕೊಂಡು ಮಿತ್ರನ ಅಸಹಾಯಕ ಅಕ್ಕನಿಗೆ ಉತ್ತಮ ಪೋಷಣೆ ಒದಗಿಸುತ್ತ ಬದುಕಿನಾದ್ಯಂತ ಇದ್ದೂರಲ್ಲೇ ಬಾಳ ಬದುಕಿದ. ಅಕ್ಕನಿಗೆ ಹುಟ್ಟಿದ ಒಬ್ಬನೇ ಮಗನನ್ನು ಅಮೇರಿಕಾಗೆ ಓದಲು ಕಳುಹಿಸಿ ತನ್ನ ಕನಸನ್ನು ಸಾರ್ಥಕ ಪಡಿಸಿಕೊಂಡ. ಪತ್ನಿಯ ದೇಹಾಂತ್ಯ ನಡೆದ ತಿಂಗಳೆರಡರಲ್ಲಿ ತಾನೂ ನಿಶ್ಚಿಂತನಾಗಿ ಮರಣಿಸಿದ.

ಇಷ್ಟೆಲ್ಲಾ ಕಥೆ ಬಿಕ್ಕುತ್ತ ಬಿಕ್ಕುತ್ತ ಹೇಳಿದ ನನ್ನ ಸಹಪಾಠಿ ಮಿತ್ರ ಕೊನೆಯದಾಗಿ ನನ್ನನ್ನೇ ದಿಟ್ಟಿಸುತ್ತ ಕೇಳಿದ, "ನೀನೀಗ ಏನು ಹೇಳುತ್ತೀ ಇದಕ್ಕೆ?"

ಹೇಳಲು ನನಗೇನಾದರೂ ತೋಚಿದರೆ ತಾನೇ!!

ಮರಳಿ ಬೆಂಗಳೂರಿಗೆ ಬಂದೆ. ಗೋಡೆಯ ಎತ್ತರದಲ್ಲಿ ಜಾಗವೆರಡು ಎಷ್ಟೋ ದಿನಗಳಿಂದ ಖಾಲಿ ಖಾಲಿ ಉಳಿದಿತ್ತು. ಸ್ನಾನ ಮಾಡಿ ಶುಚಿರ್ಭೂತಳಾಗಿ ಬಂದ ನಾನು ಆ ಖಾಲಿ ಜಾಗವನ್ನೇ ನೋಡುತ್ತ ನಿಂತೆ.

***

ಬಾಡಿಲೈನ್

– ಮಹಾಬಲ

ನಾವಿಲ್ಲಿ ಕೇವಲ ಆಟ ಗೆಲ್ಲಲು ಬಂದವರು ಅಷ್ಟೆ
ನಮಗಿಲ್ಲ ಎದುರಾಳಿಯ ಸ್ನೇಹ ಗಳಿಸುವ ಆಸೆ
ಬಲಿಷ್ಠ ಬ್ಯಾಟರುಗಳ ನಾವು ಬೀಳಿಸಬೇಕಾದರೆ
ಚೆಂಡೆಸೆತದ ತಂತ್ರ ಇನ್ನಷ್ಟು ಚುರುಕಾಗಬೇಕಿದೆ

ಈ ಚೆಂಡಿನ ಪ್ರವೀಣ ವೇಗದೆಸೆತಕೆ ವಿಶ್ವಖ್ಯಾತಿ
ಬ್ಯಾಟುಗಾರನ ಉದರ ವಕ್ಷಗಳ ಗುರಿಯಾಗಿಸಿ
ಬೆಂಕಿಚೆಂಡಿನ ಪ್ರಹಾರಕೆ ಅತಿರಥರೇ ಹತಪ್ರಾಣ
ತುದಿಯ ಆಟಗಾರರಿಗಂತೂ ಮೈನಡುಕ ನಿತ್ರಾಣ

ವಿಶ್ವದ ಭವ್ಯ ಪಾರಂಪರಿಕ ಭವನದ ಕ್ರೀಡಾಂಗಣದಲಿ
ಡಗ್ಲಾಸ್ ಜಾರ್ಡನ್ ಕುತಂತ್ರಿ ಕಪ್ತಾನನ ಚಿಂತನೆಯಲಿ
ವೇಗಿ ಲಾರ್ವುಡ್‌ನ ಎಸೆತಗಳ ಮರ್ಮಾಘಾತದಲಿ
ಅಂದು ಸಭ್ಯರ ಆಟದ ಕ್ರೀಡಾಮನೋಭಾವವೇ ಬಲಿ

ಮುಂದೆ ವಿಚಾರಣೆ, ತಲೆದಂಡ ನಿಯಮಗಳ ಕಡಿವಾಣ
ಕ್ರಿಕೆಟ್ ಇತಿಹಾಸದಲೊಂದು ಕಪ್ಪುಚುಕ್ಕೆ ಈ ಹಗರಣ

***

(ಇತ್ತೀಚಿನ ಆಸ್ಟ್ರೇಲಿಯಾ ಪ್ರವಾಸದಲ್ಲಿ ವಿಶ್ವವಿಖ್ಯಾತ ಸಿಡ್ನಿ ಕ್ರಿಕೆಟ್ ಗ್ರೌಂಡ್‌ಗೆ ಭೇಟಿಯಾಗಿದ್ದಾಗ ಅಲ್ಲಿ ಮಾರ್ಗದರ್ಶಿಯಾಗಿ ಬಂದಿದ್ದ ಮಾಜಿ ಕ್ರಿಕೆಟ್ ಆಟಗಾರ ಸ್ಟೂವರ್ಟ್ ಅವರು ಅಲ್ಲಿದ್ದ ಹೆರಾಲ್ಡ್ ಲಾರ್ವುಡ್ ಪ್ರತಿಮೆಯ ಮುಂದೆ ಆಟಗಾರರ ಎದೆ ಹೊಟ್ಟೆಗಳ ಗುರಿಯಾಗಿಸಿ ಬೌಲ್ ಮಾಡಿದ ಇತಿಹಾಸದ ಕುಪ್ರಸಿದ್ಧ ಪ್ರಸಂಗ ಬಾಡಿಲೈನ್ ಬೌಲಿಂಗ್ ಬಗ್ಗೆ ವಿವರಿಸಿದಾಗ ಸೃಷ್ಟಿಯಾದ ಪದ್ಯ.)

ಸಣ್ಣ ಕತೆ

ವಾಸ್ತವ

– ಸರಸ್ವತಿ ನಟರಾಜ್

ಮನೂಗೆ ಇವತ್ತು ಸಿಕ್ಕಾಪಟ್ಟೆ ಬೇಜಾರಾಗಿತ್ತು. ಕೋಪವೂ ಬರುತ್ತಿತ್ತು. ಕೋಪ ಯಾರ ಮೇಲೆ? ಇನ್ಯಾರು ತನ್ನ ಕ್ಲಾಸಿನವನೇ ಆದ ಕಿಶೋರನ ಮೇಲೆ. ತನ್ನ ಅಮ್ಮನ ಫ್ರೆಂಡೂ ಆಗಿರುವ ತನ್ನ ಕ್ಲಾಸ್ ಟೀಚರ್ ಸುಷ್ಮಾ ಮಿಸ್ ಮೇಲೆ. ಇನ್ನೇನು ಕಣ್ಣಿಂದ ಧುಮುಕಿ ಬಿಡ್ತೀನಿ ಎಂದು ಹಠ ಮಾಡುತ್ತಿದ್ದ ಕಣ್ಣೀರನ್ನು ಬಲವಂತವಾಗಿ ರೆಪ್ಪೆ ಮಿಟುಕಿಸಿ ಅಲ್ಲೇ ಉಳಿಯುವಂತೆ ಮಾಡಿದ್ದ. ಶಾಲೆಯಿಂದ ಬರ್ತಾ ಕಾರಿನಲ್ಲೂ ಡ್ರೈವರ್ ಅಂಕಲ್ ಜೊತೆ ದಿನದಂತೆ ಹರಟಲಿಲ್ಲ. ಜಾನ್‌ಗೂ ತುಂಬಾ ಆಶ್ಚರ್ಯ ಇವತ್ತೇನು ಮನೂ ಮರಿ ತನ್ನ ಜೊತೆ ಮಾತನಾಡದೆ ಮಂಕಾಗಿ ಕುಳಿತಿದ್ದಾನೆ ಎಂದು ಎರಡುಮೂರು ಸಲ ಮಾತಾಡಿಸಲು ಪ್ರಯತ್ನಪಟ್ಟ ಕೂಡ. ಆದರೂ ಮನೂ 'ಹೂಂ.. ಊಂ..' ನಲ್ಲೆ ಮುಗಿಸಿದ್ದರಿಂದ ಸುಮ್ಮನಾದ. ಅವನಿಗೂ ಗೊತು, ಸಿಟ್ಟು ಬಂದಾಗ ಮನುವನ್ನು ಮಾತನಾಡಿಸಿದರೆ ಏನು ಗತಿ ಅಂತ. ಅವನು ಮೂಡ್ ಚೆನ್ನಾಗಿದ್ದರೆ ಮಾತ್ರ ಜಾನ್ ಜೊತೆ ಹರಟುತ್ತಿರುತ್ತಾನೆ.

ಮನೆಗೆ ಹೋದ ತಕ್ಷಣ ಬ್ಯಾಗನ್ನು ಒಂದು ಕಡೆ ಎಸೆದು, ಶೂ ಬಿಚ್ಚಿ ಅಲ್ಲೊಂದು ಇಲ್ಲೊಂದು ಎಸೆದು, ತನ್ನ ಮಹಡಿಯ ಮೇಲಿನ ರೂಮ್ ಸೇರಿ ಸುಮ್ಮನೆ ಬಿದ್ದುಕೊಂಡ. ಮಗ ಬರುವಷ್ಟರಲ್ಲಿ ಟೇಬಲ್ ಮೇಲೆ ತಿನ್ನಲು ಬಿಸಿ ಬಿಸಿ ಸ್ನಾಕ್ಸ್ ಹಾರ್ಲಿಕ್ಸ್ ರೆಡಿಯಾಗಿರುತ್ತೆ. ಕಾರಿನ ಹಾರ್ನ್ ಕೇಳಿ 15 ನಿಮಿಷವಾದರೂ ಮಗ ಡೈನಿಂಗ್ ಟೇಬಲ್ ಬಳಿ ಕಾಣಿಸದಾದಾಗ ರಜನಿ ತಾನೇ ಮೇಲೆ ಹೋದಳು. ಯೂನಿಫಾರ್ಮ್ ಬಿಚ್ಚದೆ, ಕಾಲುಗಳನ್ನು ತೊಳೆಯದೆ ಹಾಸಿಗೆಯ ಮೇಲೆ ಬಿದ್ದುಕೊಂಡಿದ್ದ ಮಗನನ್ನು ನೋಡಿದ ತಕ್ಷಣ ಗಾಬರಿಯಾಯಿತು.

"ಏನಾಯ್ತು ಮರಿ ಹುಷಾರಿಲ್ಲವಾ" ಎಂದು ಹಣೆ ಕುತ್ತಿಗೆ ಮುಟ್ಟಿ ಬಿಸಿಯಾಗಿಲ್ಲವೆಂದು ಖಾತ್ರಿ ಮಾಡಿಕೊಂಡಳು. "ಏನಾಯ್ತು ಮರಿ, ಸ್ಕೂಲಲ್ಲಿ ಏನಾದರೂ ತರ್ಲೆ ಮಾಡಿ ಬೈಸಿಕೊಂಡೆಯಾ"

"ಹೋಗಮ್ಮ! ನಾನೇನು ಮಿಸ್ ಹತ್ರ ಬೈಸ್ಕೊಳ್ಳೋ ಕೆಲಸ ಮಾಡಿಲ್ಲ. ನಾನು ಯಾವಾಗಲೂ ಎಲ್ಲರಿಗೂ ಸಹಾಯ ಮಾಡ್ತೀನಿ ಅಂತ ಮಿಸ್ ಯಾವಾಗಲೂ ಹೊಗಳ್ತಾ ಇರುತ್ತಾರೆ."

"ಮತ್ತೆ ಯಾಕೆ ಈ ರೀತಿ ಇದೀಯಾ? ಏನಾಯ್ತು?"

"ನನ್ಗೆ ಇವತ್ತು ತುಂಬಾ ಬೇಜಾರಾಯ್ತುಮ್ಮ. ಮೊನ್ನೆ ಚಾರಿಟಿ ಅಂತ ನಾನು ಡ್ಯಾಡಿ ಹತ್ತಿರ ಕೇಳಿ ನೂರು ರೂಪಾಯಿ ತಗೊಂಡು ಹೋಗಿ ಕೊಡ್ಲಿಲ್ವಾ? ನಮ್ಮ ಕ್ಲಾಸಲ್ಲಿ ಎಲ್ಲರಿಗಿಂತ ನಾನೇ ಜಾಸ್ತಿ ಕೊಟ್ಟಿದ್ದು. ಎಲ್ಲರೂ ಹತ್ತೋ ಇಪ್ಪತ್ತೋ ಕೊಟ್ರು. ಒಂದಿಬ್ಬರು 50 ರೂಪಾಯಿ ಕೊಟ್ರು. ಇವತ್ತು ಅಸೆಂಬ್ಲಿಯಲ್ಲಿ ನಮ್ ಮಿಸ್ಸು ಎಲ್ಲರನ್ನೂ ಹೊಗಳಿ ಥ್ಯಾಂಕ್ಸ್ ಹೇಳಿದ್ರು. ಆ ದುಡ್ಡೆಲ್ಲ ನಮ್ ಸ್ಕೂಲಲ್ಲೇ ಓದ್ತಾ ಇರೋ ಒಬ್ಬ ಹುಡುಗಿಯ ತಾಯಿಯ ಆಪರೇಷನ್‌ಗಂತೆ. ಅವರು ಬಡವರಂತೆ. ಕೊನೆಗೆ ಮಿಸ್ಸು ಈ ವರ್ಷದ ಬೆಸ್ಟ್ ಸ್ಟೂಡೆಂಟ್ ಅವಾರ್ಡ್ ಅನೌನ್ಸ್ ಮಾಡಿದ್ರು. ನಮ್ಮನ್ನೆಲ್ಲ ಹೊಗಳಲಿ ಪರವಾಗಿಲ್ಲ, ಕೊನೆಗೆ ಕಿಶೋರ್‌ಅನ್ನು ಕೂಡ ಹೊಗಳಿದರು. ಅವನು ಕೊಟ್ಟಿದ್ದು ಎಷ್ಟು ಗೊತ್ತಾ ಬರೀ ಐದು ರೂಪಾಯಿ. ಅವನನ್ನ ಈ ವರ್ಷದ ಬೆಸ್ಟ್ ಸ್ಟೂಡೆಂಟ್ ಅಂತ ಹೇಳಿದ್ರು. ಆನುಯಲ್ ಡೇಗೆ ಅವನಿಗೆ ಪ್ರೈಸ್ ಬೇರೆ ಕೊಡ್ತಾರಂತೆ. ಇದು ಸರಿನಾ ಅಮ್ಮ?"

ಮನು ಈಗ ಕಣ್ಣೀರನ್ನು ಮರೆಮಾಚುವ ಪ್ರಯತ್ನ ಮಾಡಲಿಲ್ಲ. ರಜನಿ ಮಗನ ಕಣ್ಣೀರು ಒರಸಿ ತಲೆ ಸವರಿದಳು. "ಸರಿ, ನಿನಗೆ ಹೆಲ್ಪ್ ಮಾಡಬೇಕು ಅನ್ನಿಸ್ತು ಮಾಡ್ದೆ. ಹೊಗಳಲಿ ಅಂತ ಆಸೆಪಡ್ಬಾರ್ದು. ನಡಿ ತಿಂಡಿ ತಿನ್ನುವೆಯಂತೆ".

"ಹೋಗಮ್ಮ ಸುಷ್ಮಾ ಮಿಸ್ ನಿನ್ ಫ್ರೆಂಡ್ ತಾನೇ. ಫ್ರೆಂಡ್ ಮಗನಿಗಿಂತ ಆ ಕಿಶೋರ್ ಅವರಿಗೆ ಜಾಸ್ತಿನಾ, ಅವರು ಮಾಡಿದ್ದು ಪಾರ್ಷಿಯಾಲಿಟಿ ತಾನೇ?"

"ಮಿಸ್ ಬಗ್ಗೆ ಹಾಗೆಲ್ಲ ಮಾತಾಡಬಾರದು. ಸರಿ, ನಿನ್ನ ಮಿಸ್ ಹತ್ತಿರ ನಾನು ಮಾತನಾಡುತ್ತೇನೆ. ಈಗ ಏಳು ತಿಂಡಿ ತಿಂದು ಆಡ್ಕೊಳೋವಂತೆ."

ಸಂಜೆ ಸುಷ್ಮಾ ಫೋನ್ ಮಾಡಿದಾಗ ಅದೂ ಇದೂ ಮಾತನಾಡುತ್ತಾ 'ಮನೂಗೆ ಇವತ್ತು ನಿನ್ನ ಮೇಲೆ ಸಿಟ್ಟು ಬಂದಿದೆ' ಅಂದು ಸಂಜೆ ಹೇಳಿದ್ದನ್ನೆಲ್ಲ ಹೇಳಿದಳು. ಸುಷ್ಮಾ ನಕ್ಕು ನುಡಿದಳು.

"ಅಷ್ಟೇನಾ? ನಾನು ನಾಳೆ ದಿನ ಮನೂನ ಅರ್ಧ ಗಂಟೆ ತಡವಾಗಿ ಕಳಿಸ್ತೀನಿ. ನನ್ನ ಜೊತೆ ಕರ್ಕೊಂಡು ಹೋಗಿ ನಾನೇ ನಿಮ್ಮನೆಗೆ ಕರ್ಕೊಂಡು ಬರ್ತೀನಿ. ಕಾರು ಕಳಿಸಬೇಡ."

ರಜನಿಗೆ ಸುಷ್ಮಾ ಬಗ್ಗೆ ತುಂಬಾ ವಿಶ್ವಾಸ. ಮಾರನೇದಿನ ಮನು ಕಾರಿಗಾಗಿ ಕಾಯ್ತಾ ಇದ್ದಾಗ ಸುಷ್ಮಾ ಬಂದು ತನ್ನ ಜೊತೆ ಕರೆದಳು. "ಬಾ, ಇವತ್ತು ನಾನು ನಿಮ್ಮನೆಗೆ ಬರೋಣ ಅನ್ಕೊಂಡಿದ್ದೀನಿ. ಮೊದಲು ನಮ್ಮನೆಗೆ ಹೋಗೋಣ."

ಮನು ಒಲ್ಲದ ಮನಸ್ಸಿನಿಂದಲೇ ಸುಷ್ಮಾ ಜೊತೆ ಹೊರಟ. ಸುಷ್ಮಾ ತನ್ನ ಮನೆಗೆ ಕರೆದುಕೊಂಡು ಹೋಗಿ ತಿನ್ನಲು ಬಿಸ್ಕತ್, ಹಣ್ಣು ಕೊಟ್ಟಳು. ಅವನು ಬಿಗುಮಾನದಿಂದಲೇ ಮಿಸ್ ಕೊಟ್ಟಿದ್ದನ್ನೆಲ್ಲ ಮುಗಿಸಿದ. ಇಬ್ಬರೂ ಹೊರಟಾಗ ಅವನಿಗೆ ಆಶ್ಚರ್ಯ. ಇದೇನು ಇದು ನಮ್ಮ ಮನೆ ರಸ್ತೆ ಅಲ್ಲ, ಎಲ್ಲಿಗೆ ಕರ್ಕೊಂಡು ಹೋಗ್ತಿದ್ದಾರೆ? ಅಂತ. ಕೇಳಿಯೂ ಕೇಳಿದ. ಮಿಸ್ ಸೀದಾ ನಡೆದು ಆ ದೊಡ್ಡ ಮನೆಯ ಕಾಂಪೌಂಡ್ ಒಳಗೆ ಹಿಂಭಾಗದಲ್ಲಿದ್ದ ಮನೆ ಒಳಗೆ ಹೋದರು. ಓಣಿಯಲ್ಲಿ ಮಿಸ್ ಹಿಂದೆ ನಡೆದು ಬರುತ್ತಿದ್ದ ಮನೂಗೆ ಆಶ್ಚರ್ಯ. ಆ ಪುಟ್ಟ ಮನೆಯೊಳಗೆ ಕಾಲಿಡುತ್ತಿದ್ದಂತೆಯೇ ಇಷ್ಟು ಚಿಕ್ಕ ಮನೇನಲ್ಲಿ ಹೇಗಿರುತ್ತಾರೆ ಜನ ಎಂದು ಬೆರಗಾದ. ಪುಟ್ಟ ಹಾಲಿನ ಮೂಲೆಯಲ್ಲಿ ಮಲಗಿರುವ ಒಬ್ಬ ಗಂಡಸು. ಅಲ್ಲೇ ಕೈಗೆ ಸಿಕ್ಕಿದ ವಸ್ತುಗಳನ್ನು ಇಟ್ಟುಕೊಂಡು ಆಟ ಆಡಿಕೊಂಡಿರುವ ಮೂರು ನಾಲ್ಕು ವರ್ಷದ ಹೆಣ್ಣು ಹುಡುಗಿ. ಅಡ್ಡಗೋಡೆ ಆಚೆ ಸ್ಟೌ ಹತ್ತಿಸಲು ಕಡ್ಡಿ ಗೀರುತ್ತಿರುವ ಕಿಶೋರ್! ಅರೆ! ಇದು ಕಿಶೋರ್ ಮನೆನಾ? ಇಷ್ಟು ಬೇಗ ಮನೆಗೆ ಬಂದು ಅಡಿಗೆ ಮನೆಯಲ್ಲಿ ತಾನೇ ಸ್ಟೌ ಹತ್ತಿಸ್ತಾ ಇದಾನಲ್ಲ! ಇವರ ಅಮ್ಮ ಇಲ್ಲವೇ? ಅವನು ಮನಸ್ಸಿನಲ್ಲೆ ಯೋಚಿಸಿದ.

ಸುಷ್ಮಾ ಮಿಸ್ ಮತ್ತು ಮನುವನ್ನು ನೋಡಿ ಕಿಶೋರ್‌ಗೆ ಆಶ್ಚರ್ಯವಾಯಿತು. ಗಲಿಬಿಲಿ ಆಯಿತು. ಗಡಿಬಿಡಿಯಿಂದ ಎದ್ದು "ಬನ್ನಿ ಮಿಸ್" ಎಂದು ಚಾಪೆ ಹಾಕಿ "ಕೂತ್ಕೊಳ್ಳಿ" ಎಂದ.

"ನಿಮ್ಮ ತಾಯಿ ಇನ್ನೂ ಬಂದಿಲ್ಲವೇ ಕಿಶೋರ್? ಹಪ್ಪಳ ಬೇಕಿತ್ತು, ಅದಕ್ಕೆ ಬಂದೆ. ಮನೂನು ಜೊತೇಲಿ ಕರ್ಕೊಂಡು ಬಂದೆ."

"ಇಲ್ಲ ಮಿಸ್. ಅಮ್ಮ ಬರೋದು ಆರು ಗಂಟೆ ಮೇಲೆ. ನಾನೇ ತೆಕ್ಕೊಡ್ತೀನಿ ತಾಳಿ." ಎಂದು ಬಡುವಿನಿಂದ ಹಪ್ಪಳದ ಪ್ಯಾಕೆಟ್‌ಗಳನ್ನು ತೆಗೆದುಕೊಟ್ಟ. ಸುಷ್ಮಾ ಕೊಟ್ಟ ದುಡ್ಡನ್ನು ಸಂಕೋಚದಿಂದಲೇ ತೆಗೆದುಕೊಂಡ.

"ಮಿಸ್, ಮನೂಗೂ ನಿಮಗೂ ಹಾಲು ಬಿಸಿ ಮಾಡ್ತೀನಿ, ಇರಿ ಮಿಸ್" ಎಂದ.

"ಬೇಡ ಕಿಶೋರ್, ಮನೇಲಿ ಮನೂ ಅಮ್ಮ ಕಾಯುತ್ತಿರುತ್ತಾರೆ. ನಿಮ್ ತಂದೆನಾ ಚೆನ್ನಾಗಿ ನೋಡ್ಕೋ. ಬರ್ತೀನಿ." ಎಂದು ಹೇಳಿ ಕಿಶೋರ್ ತಂಗಿಯ ಕೆನ್ನೆ ಸವರಿ ಮಾತನಾಡಿಸಿ ಆಚೆ ನಡೆದಳು ಸುಷ್ಮಾ.

"ನೋಡಿದ್ಯಾ ಮನೂ? ಕಿಶೋರ್ ಮನೆ ಪರಿಸ್ಥಿತಿ? ತಂದೆಗೆ ಆಕ್ಸಿಡೆಂಟ್ ಆಗಿ ಮಲಗಿದ್ದಾರೆ. ತಾಯಿ ಹಪ್ಪಳ ಸಂಡಿಗೆ ಮಾಡಿ ಮಾರುತ್ತಾ ಹೇಗೋ ಮನೆ ನಿಭಾಯಿಸ್ತಾ ಇದ್ದಾರೆ. ಕಿಶೋರ್ ಬೆಳಗ್ಗೆ ಎದ್ದು ಒಂದೆರಡು ಬೀದಿಯಲ್ಲಿ ಪೇಪರ್ ಹಂಚಲು ಹೋಗ್ತಾನೆ. ತಾಯಿ ಬರೋತನಕ ತಂದೆಯನ್ನು, ತಂಗಿಯನ್ನು ನೋಡ್ಕೋತಾನೆ. ಓದಿನಲ್ಲೂ ಮುಂದೆ ಇದ್ದಾನೆ. ಇಷ್ಟಾಗಿ ತನ್ನ ತೊಂದರೆ ಯಾರಿಗಾದರೂ ಹೇಳಿಕೊಂಡಿದ್ದು ನೋಡಿದ್ದೀಯಾ? ಇಷ್ಟು ಕಷ್ಟಪಟ್ಟರೂ ತಾನು ದುಡಿದಿದ್ದರಲ್ಲಿ ಐದು ರೂಪಾಯಿ ಕಷ್ಟಪಟ್ಟು ಉಳಿಸಿ ಚಾರಿಟಿಗೆ ಕೊಟ್ಟಿದ್ದಾನೆ. ಅದಕ್ಕೆ ಅದನ್ನು ತೆಗೆದುಕೊಂಡೆ. ಈಗ ಹೇಳು ನಿಮ್ಮ ಡ್ಯಾಡಿ ಹತ್ತಿರ ಕೇಳಿ ಕೊಟ್ಟ ನೂರು ರೂಪಾಯಿ ಖಂಡಿತ ದೊಡ್ಡದೇ. ಆದರೆ ಕಿಶೋರ್ ಕೊಟ್ಟ ಐದು ರೂಪಾಯಿಗೆ ಬೆಲೆ ಕಟ್ಟಲು ಸಾಧ್ಯವೇ? ನೀವಿಬ್ಬರೂ ಮೊದಲನೇ ರ್‍ಯಾಂಕ್ ಹಂಚಿಕೊಂಡಿದ್ದೀರಿ. ಆದರೆ ಓದಿನ ಜೊತೆ ಬೇರೆ ಸಂದರ್ಭಗಳನ್ನೂ ನೋಡಿ ಅವನಿಗೆ ಬೆಸ್ಟ್ ಸ್ಟೂಡೆಂಟ್‌ಗೆ ಶಿಫಾರಸ್ಸು ಮಾಡಿದೆ. ಅದರ ಪ್ರೈಸ್ 500 ರೂಪಾಯಿ. ಅದರಿಂದ ಅವನಿಗೆ ಕೊಂಚವಾದರೂ ಸಹಾಯ ಆಗುತ್ತೋ ಇಲ್ವೋ ಹೇಳು. ನಾನು ಪಾರ್ಷಿಯಾಲಿಟಿ ಮಾಡಿದೆನೋ ಇಲ್ಲ ಸರಿಯಾದ ಹೆಸರು ಸೂಚಿಸಿದೆನಾ?"

ಮನೂಗೆ ಮನಸ್ಸು ತುಂಬಿ ಬಂದಿತ್ತು, ಬೇಜಾರೂ ಆಗಿತ್ತು. ಆದರೆ ಈಗ ಬೇಜಾರಾಗಿದ್ದು ತನ್ನ ಮೇಲೆಯೇ. ತಾನು ಅನ್ಯಾಯವಾಗಿ ಸುಷ್ಮಾ ಮಿಸ್‌ನ ತಪ್ಪು ತಿಳಿದೆನಲ್ಲ. ಕಿಶೋರನ ಬಗ್ಗೆ ಅಸೂಯೆಪಟ್ಟೆನಲ್ಲ ಅಂತ. ಆ ತಪ್ಪನ್ನು ಹೇಗಾದರೂ ಸರಿಪಡಿಸಿಕೊಳ್ಳಬೇಕು.

"ಸಾರಿ ಮಿಸ್, ನನಗೆ ನಿಜವಾಗ್ಲೂ ಗೊತ್ತಿರಲಿಲ್ಲ. ನಾನು ತಪ್ಪಾಗಿ ತಿಳ್ಕೊಂಡ್ಬಿಟ್ಟಿದ್ದೆ. ಇನ್ಮೇಲೆ ಕಿಶೋರನ್ನ ಬೆಸ್ಟ್ ಫ್ರೆಂಡ್ ಮಾಡ್ಕೋತೀನಿ."

ಮನೆ ಮುಂದೆ ಕಾಯುತ್ತಿದ್ದ ರಜನಿಯನ್ನು ನೋಡಿದ ಸುಷ್ಮಾ ಮಂದಹಾಸ ಬೀರಿದಳು. ಮನೂ ಕಣ್ಣುಗಳು ಅಮ್ಮನನ್ನು ನೋಡಿದ ಕೂಡಲೇ ಲಕಲಕ ಹೊಳೆದವು. ಇವತ್ತು ಮಿಸ್ ಹೋದಮೇಲೆ ಅಮ್ಮಂಗೆ ಎಷ್ಟೊಂದು ವಿಷಯ ಹೇಳಬೇಕು. ಕಿಶೋರನ ಬಗ್ಗೆ, ಅವನ ಅಮ್ಮ ಅಪ್ಪನ ಬಗ್ಗೆ, ತಂಗಿ ಬಗ್ಗೆ !

ರಜನಿ ನಿರಾಳವಾಗಿ ಗೆಳತಿಯ ಕೈಯನ್ನು ಅದುಮಿ "ಬಾ ಕಾಫಿ ಕುಡಿಯೋಣವಂತೆ."

***

ನಾವು ಏಳು ಜನ

–ಡಾ. ಸತ್ಯವತಿ ಮೂರ್ತಿ

ಆ ಮುಗ್ಧ ಹುಡುಗಿ
ಹಗುರಾಗಿ ಉಸಿರಾಡುತ್ತ ಬದುಕುವವಳು
ನರನರದಲ್ಲೂ ಬದುಕ ಕಾಣುವವಳು
ಸಾವಿನ ಬಗ್ಗೆ ಏನು ತಿಳಿದಿದ್ದಳು?

ನಾನೊಂದು ಹಳ್ಳಿಯಾ ಹುಡುಗಿಯ ನೋಡಿದೆನಂತೆ
ಎಂಟು ವರ್ಷದ ಪುಟ್ಟಕೂಸು ಅದು, ಅವಳೇ ಹೇಳಿದುದು
ಅವಳ ಕೂದಲೋ ಒತ್ತಾದ ಕುರುಳುಗಳ ಸಂತೆ
ತಲೆಯ ತುಂಬ ಭರ್ತಿಯಾಗಿ ಆವರಿಸಿರುವುದು

ಹಳ್ಳಿಯ ಸಂಸ್ಕಾರದ ಗಾಳಿಯ ಕಂಪಿತ್ತು
ಮೈಮೇಲೆ ಅಸ್ತವ್ಯಸ್ತ ಬಟ್ಟೆಯ ದಿರಿಸಿತ್ತು
ನಿರ್ಮಲ ಕಣ್ಣುಗಳು ಸುಂದರ, ಬಹು ಸುಂದರವೆನಿಸಿತ್ತು!
ಅವಳಾ ರೂಪ ನನ್ನ ಮನವ ಸೂರೆಗೊಂಡಿತ್ತು

ಒಡಹುಟ್ಟಿದವರೆಲ್ಲ ಸೇರಿ ಪುಟ್ಟ ಹುಡುಗಿ, ನೀವು
ಎಷ್ಟು ಜನ ಇರುವಿರಿ? ಕುತೂಹಲಕೆ ಕಾಲುಕೊಟ್ಟೆ.
ಎಷ್ಟು? ಬೆರಳೆಣಿಸುತ್ತ ಹೇಳಿದಳು ಒಟ್ಟು ಏಳು ಜನ ನಾವು
ಪ್ರಶ್ನಾರ್ಥದಚ್ಚರಿಯಲಿ ಕಣ್ಣರಳಿಸಿದಳು ಆ ದಿಟ್ಟೆ

ಮತ್ತೆ, ಅವರೆಲ್ಲ ಎಲ್ಲಿರುವರು?
ತಟ್ಟನೆಯೆ ಉತ್ತರಿಸಿದಳು ಬಾಲೆ ಹೇಳಲಿಲ್ಲವೆ ಆಗಲೇ.
ಇಬ್ಬರು ಕಾನ್ವಯನಲ್ಲಿ ವಾಸವಿರುವರು
ಹೋಗಿರುವರು ಮತ್ತಿಬ್ಬರು ಸಮುದ್ರದ ಮೇಲೆ

ಇನ್ನಿಬ್ಬರು ಮಲಗಿದ್ದಾರೆ, ಚರ್ಚಿನಾವರಣದಲ್ಲಿ
ಒಬ್ಬ ನನ್ನ ಮುದ್ದು ಅಣ್ಣ ಮತ್ತೊಬ್ಬಳು ನನ್ನ ಅಕ್ಕಯ್ಯ
ಮತ್ತೆ ಅದೇ ಚರ್ಚಿನಾವರಣದ ಗುಡಿಸಲಲ್ಲಿ,
ಅವರ ಸನಿಹದಲ್ಲೇ ನನ್ನ ಹೆತ್ತಮ್ಮನೊಡನೆ, ನಾನಿರುವೆನಯ್ಯ

ನೀನೇ ಹೇಳಿದೆ ಇಬ್ಬರು ಕಾನ್ವಯ್‌ನಲ್ಲಿ ವಾಸ ಪಕ್ಕ.
ಮತ್ತಿಬ್ಬರು ಸಮುದ್ರದ ನಡುವೆ ಹೋಗಿಹರು
ಆದರೂ ನೀನು ಹೇಳುವೆ ನಿನ್ನದೇ ಲೆಕ್ಕ.
ಹೇಳು ಮುದ್ದು ಹೆಣ್ಣೇ ಏಳು ಜನ ಹೇಗಾಗುವರು?

ಕ್ಷಣವ ಬಿಡದೆ ಉತ್ತರಿಸಿದಳು ಪುಟ್ಟಹುಡುಗಿ ನಗುತಲಿ
ಒಟ್ಟು ಏಳು ಜನ ನಾವು ಹುಡುಗ ಹುಡುಗಿಯರು
ಇನ್ನಿಬ್ಬರು ಮಲಗಿದ್ದಾರೆ ಚರ್ಚಿನಾವರಣದಲ್ಲಿ
ಅಲ್ಲೇ ಅದೊಂದು ದೊಡ್ಡ ಮರದ ಕೆಳಗವರು!

ಪುಟ್ಟ ಹುಡುಗಿ ಕೇಳು, ನೀನು ಓಡಾಡಬಲ್ಲೆ
ನಿನ್ನ ಕೈಕಾಲುಗಳಲಿ ಶಕ್ತಿಯಿದೆ ನಾ ನೋಡಬಲ್ಲೆ
ಮಸಣದಲಿ ಮಲಗಿದವರು ಇಬ್ಬರೆಂದ ಮೇಲೆ
ಉಳಿದವರು ನೀವು ಬರೇ ಐದು ನಾ ಲೆಕ್ಕ ಬಲ್ಲೆ

ಅವರ ಕಾಣಬಹುದು ನಾವು, ಇನ್ನೂ ಹಸಿರು ಅವರ ಗೋರಿಗಳು,
ಆ ಪುಟ್ಟ ಹುಡುಗಿ ಕೊಟ್ಟಳು ಮಾರುತ್ತರ
ಹನ್ನೆರಡೆ ಅಥವ ಇನ್ನೆರಡು ಹೆಜ್ಜೆ ನನ್ನಮ್ಮನ ಕೋಣೆಗೆ ಅವುಗಳು
ಮತ್ತೆ ಇಬ್ಬರೂ ಪಕ್ಕ ಪಕ್ಕದಲೇ ಹತ್ತಿರ ಹತ್ತಿರ

ಅಲ್ಲಿಯೇ ಕುಳಿತು ನನ್ನ ಸಾಕ್ಸ್ ಹೊಲೆಯುತ್ತೇನೆ
ನನ್ನ ಕರ್ಚೀಫ್‌ನ ಅಂಚು ನುಲಿಯುತ್ತೇನೆ
ಅಲ್ಲೇ ಇರುವ ನೆಲದ ಮೇಲೆ ಕುಳ್ಳಿರುತ್ತೇನೆ
ಮತ್ತೆ ಅವರಿಗಾಗಿ ಹಾಡೊಂದ ಹಾಡುತ್ತೇನೆ

ಕೆಲವೊಂದು ದಿನ ಕತ್ತಲಾದ ಮೇಲೆ
ಬಿಳಿಯಾದ ತಿಳಿಬೆಳಕಿನ ಇರುಳಿನಲ್ಲಿ
ಊಟದ ಬಟ್ಟಲ ಕೊಂಡು ಹೋಗಿ ಕಲ್ಲಮೇಲೆ
ರಾತ್ರಿಯೂಟವ ನಾನು ತಿನ್ನುತ್ತೇನೆ ಅಲ್ಲಿ

ಮೊದಲು ಸತ್ತವಳು 'ಜೇನ್' ನನ್ನಕ್ಕ
ಮಲಗಿದ್ದಳು ಹಾಸಿಗೆಯಲಿ ನರಳುತ್ತ
ದೇವರವಳ ನೋವಿನಿಂದ ಬಿಡಿಸುವ ತನಕ,
ನಂತರ ಹೊರಟು ಹೋದಳು ಅವಳು ದೇವರತ್ತ

ಅವಳ ಮಲಗಿಸಿದರು ಚರ್ಚಿನಾವರಣದಲ್ಲೇ
ಕಲ್ಲಿನ ಸುತ್ತಲಿನ ಹುಲ್ಲು ಒಣಗಿದಾಗ
ನಾವಿಬ್ಬರೂ ಆಡಿದೆವು ಅವಳ ಗೋರಿಯ ಸುತ್ತಲೇ
ನಾನು ನನ್ನಣ್ಣ ಜಾನ್ ಮೈ ಮರೆತಾಗ

ಹಿಮಮಂಜು ಮುಸುಕಿ ನೆಲವೆಲ್ಲ ಬೆಳ್ಳಗಾದಾಗ
ನಾನು ಹಿಮದ ಮೇಲೆ ಓಡುತ್ತ ಜಾರುತ್ತಲಿದ್ದೆನು
ನನ್ನ ಅಣ್ಣನೂ ಒತ್ತಾಯದಲಿ ಹೋಗಬೇಕಾಯ್ತಾಗ
ಈಗ ಅವನೂ ನನ್ನಕ್ಕನ ಜೊತೆಗೆ ಮಲಗಿಹನು

ಹಾಗಾದರೆ ನೀವೆಷ್ಟು ಜನರಿರುವುದು ನಾ ಕೇಳಿದೆ
ಅವರಿಬ್ಬರೂ ಸ್ವರ್ಗದಲಿ ಇದ್ದರೆ?
ಉತ್ತರಿಸಿದಳು ಪುಟ್ಟ ಹುಡುಗಿ ತತ್‌ಕ್ಷಣದೆ
ನಾವು ಒಟ್ಟು ಏಳು ಜನ, ಓ ಮಾನ್ಯರೆ!

ಆದರೆ ಅವರು ಸತ್ತಿದ್ದಾರೆ, ಸತ್ತು ಹೋಗಿದ್ದಾರೆ ಅವರಿಬ್ಬರು
ತಿಳಿಯದೆ ನಿನಗೆ? ಅವರಾತ್ಮಗಳು ಸ್ವರ್ಗದಲ್ಲಿವೆ.
ಹತಾಶೆಯಲಿ ಕೈಯನ್ನೊದರಿ ಹೇಳಿದೆ ನಾನಾದರೂ
ಆದರೂ ಆ ಹೆಣ್ಮಗಳ ನಿರ್ಧಾರವೇ ನಿರ್ಧಾರವಲ್ಲವೆ

ಮತ್ತೆ ಹೇಳಿದಳು, ಇಲ್ಲ,ವೇ ಇಲ್ಲ ನಾವು ಏಳು ಜನರಿದ್ದೇವೆ

(ಇಂಗ್ಲಿಷ್ ಮೂಲ: 'We Are Seven' –
By William Wordsworth – A simple Child)

***

ಥ್ಯಾಂಕ್ಸ್‌ಗಿವಿಂಗ್ ಮತ್ತು ಬ್ಲ್ಯಾಕ್ ಫ್ರೈಡೆ

– ನಾಗರತ್ನ ಚಂದ್ರಶೇಖರ್

'ಥ್ಯಾಂಕ್ಸ್‌ಗಿವಿಂಗ್ ಮತ್ತು ಬ್ಲ್ಯಾಕ್ ಫ್ರೈಡೆ' ವಿದೇಶಗಳಲ್ಲಿ ಒಂದು ವಿಭಿನ್ನ ಆಚರಣೆ. ಅಮೆರಿಕಾದ ನಮ್ಮ ಅನೇಕ ಭೇಟಿಗಳಲ್ಲಿ ಇವುಗಳ ಪರಿಚಯ, ಅನುಭವ ಆದ ನಂತರ ಈ ಆಚರಣೆಗಳ ಹಿಂದಿನ ಮಾಹಿತಿ ಸಂಗ್ರಹಿಸಿದಾಗ ಕುತೂಹಲಕರವಾದ ವಿವರಗಳನ್ನು ಈ ಲೇಖನದಲ್ಲಿ ಕೊಟ್ಟಿರುವೆ.

ಪ್ರತಿವರ್ಷ ನವೆಂಬರ್ ತಿಂಗಳ ಕೊನೆಗೆ ಅಂದರೆ ನಾಲ್ಕನೇ ಗುರುವಾರ ಇದನ್ನು ಆಚರಿಸಲಾಗುತ್ತದೆ. ಈ ದಿನಕ್ಕಾಗಿ ಅವರು ಮಾಡಿಕೊಳ್ಳುವ ಸಿದ್ಧತೆ, ಪಡುವ ಸಂಭ್ರಮ, ಅದನ್ನು ನೋಡಿಯೇ ತಿಳಿಯಬೇಕು! ಮದ್ಯ, ಮಾಂಸಗಳನ್ನು ಒಳಗೊಂಡ ಈ ಭೋಜನಕ್ಕಾಗಿ ಇಡೀ ಕುಟುಂಬವರ್ಗ ಒಂದೆಡೆ ಸೇರಿ ಈ ಭೂರಿ ಭೋಜನವನ್ನು ಏರ್ಪಾಟು ಮಾಡಿಕೊಳ್ಳುತ್ತಾರೆ. ಆತ್ಮೀಯ ಸ್ನೇಹಿತರನ್ನೂ ಈ ಕೂಟಕ್ಕೆ ಆಹ್ವಾನಿಸುವುದುಂಟು. ಟರ್ಕಿ ಕೋಳಿಯ ಪದಾರ್ಥ ಹಾಗೂ ಕುಂಬಳಕಾಯಿಂದ ಮಾಡುವ ಪಮ್ಕಿನ್ ಪೈ ಈ ದಿನದ ವಿಶೇಷ ಖಾದ್ಯ. ಇದರೊಂದಿಗೆ ಸಮಾಜದಲ್ಲಿ ತಾವು ಉಪಕೃತರಾದವರಿಗೆ ಧನ್ಯವಾದಗಳನ್ನು ತನ್ಮೂಲಕ ಅರ್ಪಿಸುವ ಸಮಯವೂ ಹೌದು. ಊರಿನ ಹಿರಿಯ ನಾಗರಿಕರು, ಮಾಜಿ ಸೈನಿಕರು, ರೋಗಿಗಳಿಗಾಗಿ, ಕಾರ್ಯಕರ್ತರಿಗಾಗಿ ಒಂದೊಂದು ದಿನ ಔತಣ ಏರ್ಪಡಿಸುತ್ತಾರೆ.

ಸಾಮಾಜಿಕ ಕಳಕಳ ಇದ್ದವರು ಇಂತಹ ಔತಣ ಕೂಟಗಳಿಗೆ ಧನಸಹಾಯವನ್ನು ಮಾಡುತ್ತಾರೆ. ನನ್ನ ಮಗಳ ಜೊತೆ ಡಲಾಸ್‌ನಲ್ಲಿರುವ 24/7 ತುರ್ತು ಸೇವೆ ನೀಡುವ ವಾಲೆಂಟರಿ ಸಂಘಟನೆಯಲ್ಲಿ ಕೆಲಸ ಮಾಡುವವರಿಗಾಗಿ ಸೇಬಿನ ಹಣ್ಣಿನ ಪೈ ತಯಾರಿಸಿಕೊಟ್ಟು ಬಂದಿದ್ದೆವು.

ಈ ಸಂಭ್ರಮಾಚರಣೆಗಾಗಿ ಪೂರ್ವಭಾವಿಯಾಗಿ ನಡೆಯುವ ಸಿದ್ಧತೆಗಳನ್ನು ನೋಡಬೇಕು. ಅಲ್ಲಿನ ಜನರು ಸೂಪರ್ ಮಾರ್ಕೆಟ್‌ಗಳಲ್ಲಿ ಸಿಗುವ ಸಾಮಗ್ರಿಗಳು, ಉಡುಗೊರೆಗಳು ಹಾಗೂ ವೈವಿಧ್ಯಮಯವಾದ ಮದ್ಯಗಳನ್ನು ಟ್ರಾಲಿಗಳ ತುಂಬಾ ಖರೀದಿಸಿಕೊಂಡು ಹೋಗುತ್ತಾರೆ. ನೀರಿಗಿಂತ ಇಲ್ಲಿ ಮದ್ಯ ತುಂಬಾ ಅಗ್ಗ ಇರಬಹುದೇ ಎಂಬ ಅನುಮಾನ ಆಗ ನಮ್ಮನ್ನು ಕಾಡುತ್ತದೆ ಕೊಳ್ಳುಬಾಕ ಸಂಸ್ಕೃತಿಯನ್ನು ಹುಟ್ಟುಹಾಕಿದವರೆಂದು ಕರೆಯಬಹುದಾದ ಅಮೆರಿಕದಲ್ಲಿ ಗುರುವಾರ, ಶುಕ್ರವಾರದ ಮಾಯಾಜಾಲ ನೋಡಿ ಬೆರಗಾದೆವು. ಅತ್ಯಂತ ಕಡಿಮೆ ಬೆಲೆಯಲ್ಲಿ ಹೆಸರಾಂತ ಕಂಪನಿಗಳ ಉತ್ಪನ್ನಗಳನ್ನು ಖರೀದಿಸಲು ಯಾರಿಗೆಲ್ಲ ಅದೃಷ್ಟ ಎನ್ನುವುದನ್ನು ನೋಡಬೇಕಾದರೆ ಅದಕ್ಕಾಗಿ ಗುರುವಾರ ರಾತ್ರಿಯಿಂದಲೇ ಸರತಿಯ ಸಾಲಿನಲ್ಲಿ ಕಾಯುತ್ತಾ ನಿಂತವರ ಸಾಲುಗಳನ್ನು ನೋಡಬೇಕು. 'ಶಾಪ್ ಅಂಟಿಲ್ ಯು ಡ್ರಾಪ್' ಎನ್ನುವ ನಿಜವಾದ ಮಾತಿನ ಅರ್ಥ ತಿಳಿಯಬೇಕಾದರೆ ಈ ಸಮಯವೇ ಸೂಕ್ತ. ನಾನು ಮಗಳು ಚೈತ್ರಳ ಜೊತೆ ಡಲಾಸ್ ನಗರದ ದೊಡ್ಡ ಮಾಲ್ ಒಂದರ ಒಳಗೆ ಹೋದಾಗ 10:00 ಹೊಡೆದಿತ್ತು ವಾಪಸ್ಸು ಮನೆಗೆ ಬಂದದ್ದು ರಾತ್ರಿ ಎರಡು ಗಂಟೆಗೆ. ನಾವು ಹೊತ್ತು ತಂದ ಮೂರು ಮೂಟೆಗಳ ಪ್ಲಾಸ್ಟಿಕ್ ಬ್ಯಾಗುಗಳನ್ನು ಮತ್ತೊಮ್ಮೆ ಬಿಚ್ಚಿ ಪರಿಶೀಲಿಸುವ ತ್ರಾಣವೂ ಇಲ್ಲದೆ ಹೋಗಿ ಮಲಗಿದೆವು. ಹೀಗೆ ತಂದ ಬಟ್ಟೆಗಳು, ಬೇರೆ ಯಾವುದೇ ವಸ್ತುಗಳನ್ನು ಆನಂತರ ನಿಮಗೆ ಇಷ್ಟವಾಗದಿದ್ದಲ್ಲಿ ವಾಪಸ್ಸು ಕೊಡಬಹುದಾದ ಅಮೆರಿಕದ ಬಹುತೇಕ ಮಳಿಗೆಗಳಲ್ಲಿ ಗ್ರಾಹಕರ ರಕ್ಷಣೆ ನಿಜವಾಗಿ ಆಚರಣೆಯಲ್ಲಿದೆ.

ಈ ಥ್ಯಾಂಕ್ಸ್‌ಗಿವಿಂಗ್ ಮತ್ತು ಬ್ಲ್ಯಾಕ್ ಫ್ರೈಡೆ ಆಚರಣೆಯನ್ನು 1621ರಲ್ಲಿ ಪ್ಲೇಮೌತ್ ಕಾಲೋನಿಯಲ್ಲಿ ವಾಸಿಸುತ್ತಿದ್ದ ವಿಲಿಯಂ ಬ್ರಾಡ್ಫೋರ್ಡ್ ಎನ್ನುವಾತ ಪ್ರಾರಂಭಿಸಿದ. ಅಮೇರಿಕಕ್ಕೆ ಬರುವ ವಲಸೆಗಾರರಿಗಾಗಿ ಒಂದು ಪ್ರಾರ್ಥನೆ,

ಮನರಂಜನೆ, ಔತಣಕೂಟವನ್ನು ಪ್ರತಿವರ್ಷ ಸುಗ್ಗಿಯ ಸಮಯದಲ್ಲಿ ಆಚರಣೆಯ ಆಯ್ಕೆ ಮಾಡಿಕೊಂಡ. ಆ ದಿನ ತಮ್ಮ ಪೂರ್ವಿಕರನ್ನು ನೆನಪು ಮಾಡಿಕೊಂಡು ಅವರನ್ನು ಗೌರವಿಸಲು ಬಳಸಿಕೊಂಡರು ಎಂಬ ಮಾಹಿತಿ ಪ್ಲೇಮೌತ್ನನ ಬೀಚ್‌ನಲ್ಲಿರುವ ವಿಶೇಷ ಬಂಡೆಯೊಂದರ ಮೇಲೆ ಉಲ್ಲೇಖಿಸಲಾಗಿದೆ. ಧಾರ್ಮಿಕ ಸ್ವಾತಂತ್ರ್ಯವನ್ನು ಹುಡುಕಿಕೊಂಡು ಇಂಗ್ಲೆಂಡಿನಿಂದ ಅಮೆರಿಕಕ್ಕೆ ವಲಸೆ ಬಂದ ಮಾಹಿತಿ ಇಲ್ಲದೆ. ಇವರಿಗಿಂತ ಮೊದಲೇ ಅಮೆರಿಕಾದ ಮೂಲನಿವಾಸಿಗಳು ಹಿಂದಿನಿಂದಲೂ ಈ ಆಚರಣೆಯನ್ನು ಸುಗ್ಗಿ ಕಾಲದಲ್ಲಿ ದವಸಧಾನ್ಯಗಳನ್ನು ದೇವರಿಗೆ ಅರ್ಪಿಸುವ ಸಂಪ್ರದಾಯವನ್ನು ಪಾಲಿಸುತ್ತಿದ್ದರು.

ಇದಕ್ಕೆ ಉದಾಹರಣೆಯಾಗಿ ಅಲ್ಗೋನಕ್ಯುಯಾನ್ **(algonquian)** ಬುಡಕಟ್ಟಿನ ಜನ ಹಾಗೂ ವಾಮ್ಪನಾಗ್ ಬುಡಕಟ್ಟಿನವರು ಸ್ಟ್ರಾಬೆರಿ ಥ್ಯಾಂಕ್ಸ್‌ಗಿವಿಂಗ್ ಹೆಸರಿನಲ್ಲಿ ಆಚರಿಸುತ್ತಿದ್ದರು. ಆ ನಂತರ ಅಮೆರಿಕಾಗೆ ಕಾಲಿಟ್ಟ ಮೊದಲ ಯುರೋಪಿಯನರು ಕೂಡ ಈ ಆಚರಣೆಯಲ್ಲಿ ತೊಡಗಿಕೊಂಡರು ಎನ್ನಲು ಫ್ಲೋರಿಡಾ ಬಳಿಯ ಜಾಕ್ಸನ್ವಿಲ್ಲೆನಲ್ಲಿ 1564ರಲ್ಲಿ ಫ್ರೆಂಚ್ ಹ್ಯುಗೋನಾಟ್ಸ್, ಅದರ ಮುಂದಿನ ವರ್ಷ 1565ರಲ್ಲಿ ಸ್ಪಾನಿಷ್ ಜನ ಸೇಂಟ್ ಅಗಸ್ಟೀನ್ ಬಳಿ ಆಚರಿಸಿದ ದಾಖಲೆಗಳಿವೆ. ಟೆಕ್ಸಾಸ್‌ನ ಚರಿತ್ರಕಾರರು ಹೇಳುವಂತೆ ಸ್ಫಾನಿಷ್ ಕಾಲೋನಿಯಲ್ಲಿ ಇದ್ದವರು 1598ರಲ್ಲಿ ಮನ್ಸ್ರೋ ಇಂಡಿಯನ್ ಜನರ ಜೊತೆ ಆಚರಣೆ ಮಾಡಿದ್ದರು ಎನ್ನಲಾಗಿದೆ. ಈ ವಲಸೆಗಾರರು ಬಿಯರ್, ಬಾರ್ಬಿಕ್ಯೂ, ಶೂಟಿಂಗ್ ಮತ್ತು ಅನೇಕ ಆಟೋಟಗಳಲ್ಲಿ ಗಾಢವಾದ ಬಣ್ಣ ಬಣ್ಣದ ಉಡುಪು ತೊಟ್ಟು ಧನ್ಯವಾದ ಅರ್ಪಿಸುವ ಹಬ್ಬದ ಆಚರಣೆಗಳಲ್ಲಿ ತೊಡಗಿಕೊಳ್ಳುತ್ತಿದ್ದರು ಎಂದು ವಿನ್ಸ್ಲೋ ಬರೆಯುತ್ತಾನೆ.

ಇಂದು ಈ ಆಚರಣೆ ಇಡೀ ದೇಶದ ಜನರು ಎದುರು ನೋಡುವ ಒಂದು ಉತ್ಸವ ಎಂದರೆ ತಪ್ಪಿಲ್ಲ. ವ್ಯಾಪಾರಿಗಳು ಇದನ್ನು ತಮ್ಮ ಲಾಭಕ್ಕಾಗಿ ಬಳಸಿಕೊಳ್ಳುತ್ತಾರೆ. ನವೆಂಬರ್ ಕೊನೆಯಿಂದ ಕ್ರಿಸ್ಮಸ್, ಹೊಸ ವರ್ಷದ ಆಗಮನದವರೆಗೆ ನಡೆಯುವ ತೀರುವಳಿ ಮಾರಾಟಗಳ ಬಿರುಸು ಅಮೆರಿಕದ ಕೊಳ್ಳುಬಾಕ ಸಂಸ್ಕೃತಿಗೆ ಹಿಡಿದ ಕನ್ನಡಿಯಂತಿದೆ. ಈಗ ಅಂತರ್ಜಾಲ ಕೂಡ ಅವರ ನೆರವಿಗೆ ಬರುತ್ತದೆ. ಪ್ರತಿಯೊಂದು ದೊಡ್ಡ ನಗರಗಳ ಹೊರವಲಯಗಳಲ್ಲಿ ದೊಡ್ಡ ದೊಡ್ಡ ಔಟ್ಲೆಟ್ ಮಾಲ್ ಎಂಬ ಕಾರ್ಖಾನೆಯಿಂದ ನೇರ ಮಾರಾಟ ಎಂದು ಹೇಳಿಕೊಳ್ಳುವ ಪ್ರಸಿದ್ಧ ಕಂಪನಿಗಳ ಮಳಿಗೆಗಳಿಗೆ ಕಿಕ್ಕಿರಿದು ಜನ ಸೇರುತ್ತಾರೆ. ಕಾರಿಗೆ ಪಾರ್ಕಿಂಗ್ ಸಿಕ್ಕಿದರೆ ಅದೃಷ್ಟ. ಸಮಯ ಕಳೆಯುವುದು ಹೇಗೆ ಎನ್ನುವ ಸಮಸ್ಯೆ ಇದ್ದವರು ಒಮ್ಮೆ ಇಲ್ಲಿ ಒಳಹೊಕ್ಕರೆ ಸಾಕು .

ಭಾರತದ ನಾನಾ ಭಾಗಗಳಲ್ಲಿ ಅಕ್ಟೋಬರ್ ತಿಂಗಳಲ್ಲಿ ಬರುವ ಅಮಾವಾಸ್ಯೆ, ಮಹಾಲಯ ಅಮಾವಾಸ್ಯೆ ಆಚರಣೆ ಒಂದು ರೀತಿಯಲ್ಲಿ ವಿದೇಶಿಗಳ ಥ್ಯಾಂಕ್ಸ್‌ಗಿವಿಂಗ್‌ಗೆ ಹೋಲಿಕೆ ಇದೆ ಎನ್ನಬಹುದು.

***

ಮನಸ್ಸಿದ್ದರಾಯಿತು, ವಯಸ್ಸೇನು ಮಾಡೀತು

– ಗಿರಿಜಾ ರಾಜ್ ಎಲ್

ಸುಪನಾತಿ ಸುಬ್ಬಲಕ್ಷ್ಮಿ ಅದ್ಯಾವ ಗಳಿಗೇಲಿ ಈ ಬಾರಿ ಮಹಿಳಾ ಕ್ಲಬ್ಬಿನ ವಾರ್ಷಿಕೋತ್ಸವಕ್ಕೆ "ಸೌಂದರ್ಯ ಸ್ಪರ್ಧೆ" ಇರಲಿ ಅಂತ ಸಲಹೆ ಮಾಡಿದಳೋ, ಸದಸ್ಯರು ಬಹುಮತ ಹಾಕಿದರೋ, ಅದೇ ಗಳಿಗೆಯಿಂದ ವೆಂಕಜ್ಜಿಗೆ ಟೆನ್ಷನ್ ಶುರುವಾಯಿತು. ಪ್ರತಿ ವರ್ಷ ಅಬಲಾಶ್ರಮ, ಅನಾಥಾಶ್ರಮಗಳಿಗೆ, ಹಣ್ಣು ಬಟ್ಟೆ ಇತ್ಯಾದಿ ಹಂಚುವ ಕಾರ್ಯಕ್ರಮ ಗಳಂತೂ ಇದ್ದೇ ಇರುತ್ತಿದ್ದವು. ಅದರ ಜೊತೆಗೆ ಈ ವರ್ಷ ಒಂದು ಹೊಸತನ, ಖುಷಿಗಾಗಿ ಸೌಂದರ್ಯ ಸ್ಪರ್ಧೆ ಇರಲಿ ಎಂದಾಗ ಎಲ್ಲರೂ 'ಹೌದಮ್ಮ'ಗಳಾದರು. ವಯಸ್ಸಿಗನುಗುಣವಾಗಿ ಎರಡು ಗುಂಪು ಮಾಡಲು ನಿರ್ಧರಿಸಿದರು.

ಯಾವುದರಲ್ಲಿಯೂ ಸುಲಭವಾಗಿ ಸೋಲೊಪ್ಪಿಕೊಳ್ಳದ ವೆಂಕಜ್ಜಿ ಇದನ್ನು ಒಂದು ಸವಾಲಾಗಿಯೇ ಸ್ವೀಕರಿಸಿದರು. ತಮ್ಮ ಸುಕ್ಕು ಕೆನ್ನೆ, ಬಿಳಿ ಕೂದಲು, ದಪ್ಪ ಸೊಂಟ, ಹೊಟ್ಟೆಯ ಮೇಲೆ ಕೈಯಾಡಿಸಿ ನಿಟ್ಟುಸಿರುಬಿಟ್ಟರು. ಹೆಚ್ಚು ಕಡಿಮ ಒಂದು ತಿಂಗಳು ಸಮಯವಿದೆ ವಾರ್ಷಿಕೋತ್ಸವಕ್ಕೆ! ಒಂದು ತಿಂಗಳನಲ್ಲಿ ಏನೇನೆಲ್ಲ ಸಾಧಿಸಬಹುದು... ಮನೆಗೆ ಬಂದ ಮೊಮ್ಮಗಳು ಸುಮಿಗೆ ಎಲ್ಲ ವರದಿಯೊಪ್ಪಿಸಿದರು. ಸುಮಿ ಖುಷಿಯಿಂದ ಕಣ್ಣರಳಿಸಿ "ವೆಂಕಜ್ಜಿ, ನನ್ನಿಂದ ಏನೆಲ್ಲಾ ಸಹಾಯ ಆಗುತ್ತೋ ಎಲ್ಲಾ ಮಾಡ್ತೀನಿ" ಎಂದು ಭರವಸೆ ಕೊಟ್ಟಳು. "ಅಜ್ಜೀ ನನಗೆ ತುಂಬ ಖುಷಿ ಆಗುತ್ತೆ, ನಿಮಗಿರುವ ಜೀವನೋತ್ಸಾಹ ನೋಡಿ. ಮನುಷ್ಯನಿಗೆ ವಯಸ್ಸಾಗುವುದು ಅವನ ಮನಸ್ಸಿಗೆ ವಯಸ್ಸಾಗಿದೆ ಅನ್ನಿಸಿದಾಗಲೇ...." ಎಂದು ಸಂತೋಷದಿಂದ ವೆಂಕಜ್ಜಿಯನ್ನು ತಬ್ಬಿಕೊಂಡಳು. ವೆಂಕಯ್ಯ ತಾತನಿಗೆ ಎಲ್ಲ ಸುಮಿಯಿಂದ ವರದಿಯಾದಾಗ ಬೊಚ್ಚುಬಾಯಿ ಬಿಟ್ಟು ನಗುತ್ತ ಹುಬ್ಬೇರಿಸಿದರು. "ಇದೇನೆ ನಿನ್ನ ಹೊಸಾ ಸಾಹಸ ವೆಂಕೂ" ಎಂದರೆ, ವೆಂಕಜ್ಜಿ ಕೆಕ್ಕರಿಸಿ ಗಂಡನ ಕಡೆ ನೋಡುತ್ತಾ "ಏಕೆ ಈ ಕೊಂಕು? ತೆಪ್ಪಗಿರಿ!" ಎಂದರು.

ತೆಪ್ಪಗಿರುವ ಜೀವವೇ ಅದು! ತಾತ ಮೊದಲೇ ತರಲೇ ವೆಂಕಯ್ಯ ಎಂದು ಬಿರುದು ಪಡೆದಿರುವವರು. ಅದರಲ್ಲೂ ಹೆಂಡತಿಯನ್ನು ಛೇಡಿಸುವುದೆಂದರೆ ಅವರಿಗೆ ಹಬ್ಬದೂಟ ಉಂಡಂತೆ. "ಅಂಕು ಡೊಂಕು ಎಲ್ಲ ಕಳೆದುಕೊಂಡು, ರಮ್ ಡೋಲ್ ಆಗಿರುವ ನೀನು ಸೌಂದರ್ಯ ಸ್ಪರ್ಧೆಗೆ ಹೋಗುವುದು ಹೇಗೆ ವೆಂಕೂ?" ಎಂದರು ನಗುತ್ತಾ. "ತೆಗೆದಿರಾ ನಿಮ್ಮ ತರಲೆ ಬುದ್ಧಿ? ಮಂಕೂ ಕೇಳು, ವಯಸ್ಸು ಬಾಡಿಗಾಗಿರಬಹುದು, ಮೈಂಡಿಗಲ್ಲಾರೀ, ಉತ್ಸಾಹ ಇದ್ರೆ ಏನು ಬೇಕಾದರೂ ಸಾಧಿಸಬಹುದು. ನಿಮ್ಮ ಬಾಯಿಗೆ ಹಾಕು ಬ್ರೇಕು!" ಎಂದು ತಮ್ಮ ದುಂಡು ಬಿಳಿಯ ಕೈಯನ್ನು ಗಾಳಿಯಲ್ಲಿ ಕುಣಿಸುತ್ತ ಹೇಳಿದರು. "ಅದಲ್ಲ ವೆಂಕು ನನ್ನ ಚಿಂತೆ? ನೀನು ಹಠ ಹಿಡಿದರೆ ಏನುಬೇಕಾದ್ರೂ ಮಾಡ್ತೀಯ ಬಿಡು. ಆದ್ರೆ ನೀನು ಬಳ್ಳಿಯಂತೆ ಬಳುಕುವವಳಾಗಿ ಕೂದಲಿಗೆ ಬಣ್ಣ ಹಾಕಿ, ತುಟಿಗೆಂಪು ಹಾಕಿ ಅಲಂಕಾರ ಮಾಡ್ಕೊಂಡು ಹೊರಟ್ರೆ, ಯಾರಾದ್ರೂ ಹೊಡ್ಕೊಂಡೋದ್ರೆ ನನ್ನ ಗತಿಯೇನು ಅಂತ?" ಎಂದರು ವೆಂಕಯ್ಯ ತಾತ.

ವೆಂಕಜ್ಜಿಗೆ ರೇಗಿತು. "ಹೊಡ್ಕೊಂಡು ಹೋಗೋಕೆ ನಾನೇನು ಹಸೂನೆ? ಅರ್ಥ ಆಗುತ್ತೆ ನಿಮ್ಮ ವ್ಯಂಗ್ಯ! ಸುಮ್ನೆ ಕುಕ್ಕರ್ ಬಡೀರಿ. ನೀವೋ ನಡುವೆ ನಿಮ್ಮ ಮಾತೋ..." ಎಂದೂ ಸುಮಿ ಕಡೆ ತಿರುಗಿ "ಸುಮಿ, ಒಂದು ವಾರ ಆದ ಮೇಲೆ ಬ್ಯೂಟಿ ಪಾರ್ಲರ್‌ಗೆ ಹೋದರೆ ಸರಿ ಹೋಗುತ್ತೆ ಅಲ್ವ? ಕೂದಲಿಗೆ ಬಣ್ಣ ಹಾಕಿಸಬೇಕು, ಐಬ್ರೋ ಶೇಪ್ ಮಾಡಿಸಿಕೋಬೇಕು. ಇವತ್ತಿನಿಂದ ವಾಕ್ ಶುರು ಮಾಡಿಬಿಡ್ತೀನಿ ಪುಟ್ಟಾ" ಎಂದು ಬಡಬಡಿಸಲಾರಂಭಿಸಿದರು. ತಾತ ಸುಮ್ಮನಿರಲಾರದೆ, "ಡಾಕ್ಟ್ರು ವಾಕ್ ಮಾಡಿ ಮಾಡಿ ಅಂತ ಶಂಖ ಹೊಡಕೊಂಡ್ರೂ ಕಿವೀಗೆ ಹೋಗಲಿಲ್ಲ, ಸರಿ ಬಿಡು, ಹೀಗಾದರೂ ಒಳ್ಳೆಯದಾಗಲಿ" ಎಂದರು. ಸುಮಿ, "ಆಗ್ಲಿ ಅಮ್ಮಮ್ಮ, ನೀವು ದಿನಾ ಮೊಸರಿನ ಗಟ್ಟಿ ಭಾಗ ತಗೊಂಡು ಮುಖಕ್ಕೆ ಮಸಾಜ್ ಮಾಡ್ತಾ ಬನ್ನಿ, ಒಳ್ಳೆಯ ಕಾಂತಿ ಬರುತ್ತೆ. ತರಕಾರಿ, ಹಣ್ಣು ಹೆಚ್ಚಿಗೆ ತಿನ್ನಿ, ಬಜ್ಜಿ ಬೋಂಡ ಬಿಡಿ,

ಈಗಲೇ ಶುರುಮಾಡಿ ಮೊಸರು ಮಸಾಜ್. ನಾನು ಕಾಲೇಜಿಗೆ ಹೋಗಿ ಬರ್ತೀನಿ" ಎಂದು ಹೊರಟಳು ಸುಮಿ. ವೆಂಕಜ್ಜಿ ಉತ್ಸಾಹದಿಂದ ಮೊಸರಿನ ಪಾತ್ರೆಯಿಂದ ಸಾರಗಟ್ಟಿ ನಿಂತಿದ್ದ ಗಟ್ಟಿ ಭಾಗ ತೆಗೆದು ಮುಖಕ್ಕೆ ಸವರಿ, ಇಳಿಬಿದ್ದಿದ್ದ ಕೆನ್ನೆಗಳನ್ನು ಮೇಲೆತ್ತುವ ಸಾಹಸ ಮಾಡಿದರು. ಫೇಶಿಯಲ್ ಒಂದ್ಸಲ ಮಾಡಿಸಬೇಕು ಎಂದು ಗೊಣಗಿಕೊಂಡರು. ತಾತ ಚೇಷ್ಟೆ ಮುಂದುವರೆಸುತ್ತ "ಹಾಲಲಿ ಮಿಂದವಳೋ, ದಂತದ ಮೈಯವಳೋ" ಎಂದು ಗುನುಗತೊಡಗಿದರು. ಅಂದಿನಿಂದ ಶುರುವಾಯಿತು ವೆಂಕಜ್ಜಿ ಸ್ಮಾರ್ಟ್ ಆಗುವ ಕೆಲಸ.

ಪಕ್ಕದಲ್ಲೇ ಇದ್ದ ಪಾರ್ಕಿಗೆ ದಾಳ ಮಾಡಿದರು. ಎರಡು-ಮೂರು ತಾಜಾ ಹಸಿ ತರಕಾರಿ ಮತ್ತು ಹಣ್ಣುಗಳನ್ನು ಸುಮಿ ಸದಾ ತಂದಿಡುತ್ತಿದ್ದಳು. ವೆಂಕಜ್ಜಿಯ ಕೆನ್ನಗಳು ತುಂಬಾ ಮೇಲೇರದಿದ್ದರೂ ಮುಖದಲ್ಲಿ ಹೊಸ ರಂಗು ಮೂಡಲಾರಂಭಿಸಿತು. ಕುರುಕಲು ತಿಂಡಿ ಕುರುಕುವುದನ್ನು ಬಂದ್ ಮಾಡಿದರು. ವೆಂಕಜ್ಜಿ ತಿನ್ನದೇ ಇದ್ದುದರಿಂದ ಕುರುಕು ಬಾಯಾಡಿಸುವ ಚಪಲ ತುಂಬಾ ಇದ್ದ ತಾತ ಕೋಪದಿಂದ ಎರಡು ದಿನ ಗೊಣಗುಟ್ಟಿ ಸುಮ್ಮನಾದರು. ಅಜ್ಜಿಯ ಹೊಸ ವಾಕಿಂಗ್ ಗೆಳತಿ ಆಯುರ್ವೇದ ಪಂಡಿತೆ "ದಿನಕ್ಕೆ ಮೂರ್ನಾಲ್ಕು ಎಲೆ ಕರಿಬೇವು ತಿನ್ನುತ್ತಾ ಬನ್ನಿ, ಸಣ್ಣಗಾಗುತ್ತೀರಿ. ಶುಗರ್ರು ಕಡಿಮೆ ಆಗುತ್ತೆ" ಎಂದು ಹೇಳಿದ್ದೇ ತಡ, ಅಜ್ಜಿ ಅಂಗಡಿಯಿಂದ ತಾಜಾ ಕರಿಬೇವು ತರಿಸಿ, ಫ್ರಿಟ್ಜ್‌ನಲ್ಲಿ ಇಟ್ಟುಕೊಂಡು ತಿನ್ನಲಾರಂಭಿಸಿದರು. ಹತ್ತನ್ನೆರೆಡು ದಿನಕ್ಕೆ ಸ್ವಲ್ಪ ಕರಗಿದರು. ಸ್ವಲ್ಪ ತೆಳುವಾದ ಸೊಂಟ ಮುಟ್ಟಿ ಮುಟ್ಟಿ ಸಂತಸಪಟ್ಟರು. ಸುಮಿ ಜೊತೆ ಬ್ಯೂಟಿಪಾರ್ಲರ್‌ಗೆ ಹೋಗಿ ತಲೆಗೆ ಬಣ್ಣ, ಐಬ್ರೋ ಶೇಪಿಂಗ್, ಫೇಶಿಯಲ್ ಎಲ್ಲಾ ಮಾಡಿಸಿಕೊಂಡು ಬಂದಾಗ ತಾತ "ಇವಳು ನನ್ನ ವೆಂಕೂನೇ?" ಎಂದು ಅಚ್ಚರಿಪಟ್ಟರು.

ಸೌಂದರ್ಯ ಸ್ಪರ್ಧೆ ಮೂರ್ನಾಲ್ಕು ದಿನ ಉಳಿದಾಗ ವೆಂಕಜ್ಜಿಗೆ ಟೆನ್ಷನ್ ಹೆಚ್ಚಾಯಿತು. ಸುಮಿ ಅಜ್ಜಿಗೆ ಸೌಂದರ್ಯ ಸ್ಪರ್ಧೆಯಲ್ಲಿ ವಯ್ಯಾರದಿಂದ ನಡೆಯುವ Cat Walking ತೋರಿಸಿಕೊಟ್ಟಳು. ಮನೆಯಲ್ಲಿ ರಿಹರ್ಸಲ್ಲೂ ಆಯಿತು. ಅಜ್ಜಿ ಒಂದೊಂದೇ ಹೆಜ್ಜೆ ಇಡುತ್ತಿದ್ದಂತೆ, ತಾತನ ಎದೆ ಬಡಿತವೂ ಏರುತ್ತಿತ್ತು! ವಾರ್ಷಿಕೋತ್ಸವದ ದಿನ ತಲೆಗೆ ಸ್ನಾನ ಮಾಡಿ, ನವನವೀನವಾಗಿ ಶೋಭಿಸುತ್ತ ತಮ್ಮ ದೇಹಾಲಂಕಾರವನ್ನು ಸುಮಿಗೆ ಒಪ್ಪಿಸಿದರು. ಸುಮಿ ಸುಂದರವಾಗಿ ಹೆರಳು ಹಾಕಿ, ನವಿಲು ಬಣ್ಣದ ರೇಷ್ಮೆ ಸೀರೆಯನ್ನು ಸ್ಟೈಲಾಗಿ ಉಡಿಸಿ, ಪಿನ್ ಮಾಡಿದಳು. ಮಿನಿ, ಮಿಡಿ ಅಥವಾ ಮ್ಯಾಕ್ಸಿಯೋ ಬಿಲ್‌ಕುಲ್ ಒಪ್ಪದೇ ಹೋದುದರಿಂದ ಸೀರೆಯನ್ನೇ ಉಡಿಸಿದಳು. ಕೂಲಿಂಗ್ ಗ್ಲಾಸ್ ಆಡಿಸುತ್ತ ತಾತನಿಗೆ ಬೈ ಬೈ ಹೇಳಿ ಕಾರಿನಲ್ಲಿ ಹೊರಟಾಗ, ನಿಜವಾಗಿ ತನ್ನನ್ನು ಬಿಟ್ಟೇ ಹೋಗುವಳೇನೋ ಎನ್ನುವಷ್ಟು ಸಂಕಟಪಟ್ಟರು ವೆಂಕಯ್ಯ ತಾತ.

ಫಲಿತಾಂಶದ ಬಗ್ಗೆ ವಿವರಿಸಬೇಕಿಲ್ಲ. ಸೀನಿಯರ್ಸ್ ವಿಭಾಗದಲ್ಲಿ ಮೊದಲ ಬಹುಮಾನ ವೆಂಕಜ್ಜಿಯ ಮಡಿಲಿಗೆ ಬಿತ್ತು. ಕಿರೀಟ ಧರಿಸಿ, ವೆಂಕಜ್ಜಿ ವಿಶ್ವಸುಂದರಿಯ ಹಾಗೆ ವಿಶೇ಼ ಭಂಗಿಯಲ್ಲಿ ನಿಂತು ಮೋಹಕ ನಗೆ ಚೆಲ್ಲಿದರು.

ಕೊನೆಯಲ್ಲಿ ಒಂದು ಮಾತು... ಈ ಪ್ರಶಸ್ತಿಗಿಂತಲೂ ಇನ್ನೊಂದು ದೊಡ್ಡ ಪ್ರಶಸ್ತಿ ವೆಂಕಜ್ಜಿಗಾಗಿ ಕಾದಿತ್ತು. ಬಿ.ಪಿ. ಮತ್ತು ಶುಗರ್ ಟೆಸ್ಟ್ ಮಾಡಿಸಿದಾಗ ನಾರ್ಮಲ್‌ಗೆ ಬಂದಿತ್ತು. ಮನೆಯಲ್ಲಿ ಯುವತಿಯ ಹಾಗೆ ಜಿಗಿದಾಡುತ್ತ ಓಡಾಡುತ್ತಿದ್ದ ವೆಂಕುವನ್ನು ನೋಡಿ ವೆಂಕಯ್ಯ ತಾತ "ಇವಳ ಮಂಡಿ ನೋವೆಲ್ಲಿ ಹೋಯಿತು? ಎಂದು ಅಚ್ಚರಿಪಟ್ಟರು. ತಾತ ಅಂದೆಲ್ಲಾ ಏನೇನೋ ಗೊಣಗಾಡುತ್ತಿದ್ದವರು ಮರುದಿನ ಕನ್ನಡಿಯ ಮುಂದೆ ನಿಂತು ಮೀಸೆ ಮತ್ತು ತಲೆಗೆ ಕಪ್ಪು ಬಣ್ಣ ತಿಕ್ಕತೊಡಗಿದ್ದನ್ನು ನೋಡಿ ಸುಮಿ "ವ್ಹಾವ್!" ಎಂದು ಹರ್ಷದಿಂದ ಕೂಗಿದಳು. ಅಜ್ಜಿಯನ್ನು ಕರೆದು ತೋರಿಸಲು ಓಡಿದಳು.

***

ರಕ್ತರಹಿತ ಶಸ್ತ್ರಚಿಕಿತ್ಸೆ – ಅನುಭವ ಕಥನ

ಕಣ್ಣಿನ ಶಸ್ತ್ರ ಚಿಕಿತ್ಸೆಯೆಂಬ ಕೂಸಿಲ್ಲದ ಬಾಣಂತನ

– ಟಿ.ಎಸ್. ಶ್ರವಣ ಕುಮಾರಿ.

ನಾಲ್ಕು ವರ್ಷಗಳ ಹಿಂದೆಯೇ ಅಂದರೆ ಕೊರೋನಾ ಜಮಾನ ಶುರುವಾಗುವುದಕ್ಕೂ ಮುಂಚಿತವಾಗಿಯೇ "ನಿಮ್ಮ ಎರಡೂ ಕಣ್ಣಿಗೂ ಪೊರೆ ಬರ್‍ತಾ ಇದೆ. ಸದ್ಯದಲ್ಲೇ ಶಸ್ತ್ರಚಿಕಿತ್ಸೆ ಮಾಡ್ಬೇಕಾಗ್ಬಹುದು" ಎಂದಿದ್ದರು ತಪಾಸಣೆ ಮುಗಿಸಿದ್ದ ನೇತ್ರವೈದ್ಯರು. 'ಮೋಹದ ಪೊರೆ ಕಳಚಬೇಕಾದ ವಯಸ್ಸಿನಲ್ಲಿ ಕಣ್ಣಿಗೆ ಪೊರೆಯೇ!' ಎಂದುಕೊಂಡವಳು ಎಷ್ಟು ದೂರದವರೆಗೆ ಎಳೆಯಬಹುದು ಎಂದು ತಿಳಿದುಕೊಳ್ಳುವ ಸಲುವಾಗಿ "ಯಾವಾಗ ಮಾಡಿಸ್ಕೋಬೇಕಾಗ್ಬಹುದು?" ಎಂದು ಕೇಳಿದೆ. "ಹೆಚ್ಚೆಂದರೆ ಇನ್ನೊಂದು ಆರೆಂಟು ತಿಂಗಳಲ್ಲಿ. ತೀರಾ ತಡಮಾಡಬೇಡಿ. ಈಗ ಹೊಸ ಕನ್ನಡಕ ಬೇಡ. ಶಸ್ತ್ರಚಿಕಿತ್ಸೆ ಬಗೆಗಿನ ವಿವರಗಳನ್ನು ಇಂದೇ ನಮ್ಮ ಸಲಹಾ ವಿಭಾಗಕ್ಕೆ ಹೋಗಿ ತಿಳಿದುಕೊಳ್ಳಿ" ಎಂದರು. "ಎಷ್ಟು ಖರ್ಚಾಗ್ಬಹುದು ಸರ್" ಎಂದು ಕೇಳಿದೆವು. "ಸಲಹಾ ವಿಭಾಗದವ್ರು ಎಲ್ಲಾ ಹೇಳ್ತಾರೆ" ಎನ್ನುತ್ತಾ, ಅಷ್ಟರಲ್ಲಿ ಒಳಬಂದ ದಾದಿಯೊಂದಿಗೆ "ಮುಂದಿನವ್ರನ್ನ ಕರ್‍ಯಮ್ಮ" ಎಂದರು. 'ಮತ್ತೆ ಮಾತಿಗವಕಾಶವಿಲ್ಲ' ಎಂದುಕೊಂಡು ಹೊರ ಬಂದಿದ್ದೆವು.

'ಬರೀ ಖರ್ಚೆಷ್ಟಾಗತ್ತೆ ಅಂತ ತಿಳ್ಕೊಳಕ್ಕೆ ಪಕ್ಕದ ಕಟ್ಟಡಕ್ಕೆ ಹೋಗುವುದೇಕೆ' ಎಂದು ವಿಚಾರಣಾ ವಿಭಾಗದಲ್ಲಿ "ಶಸ್ತ್ರಚಿಕಿತ್ಸೆ ಆಗ್ಬೇಕೂಂತ ಹೇಳಿದಾರೆ. ಎಷ್ಟು ಖರ್ಚಾಗಬಹುದು" ಎಂದು ಕೇಳಿದಾಗ ಆ ಸಹಾಯಕಿ ನಗುತ್ತಾ "ಅದನ್ನು ಹೇಳಕ್ಕೆ ಬರೋದಿಲ್ಲ. ನಿಮ್ಮ ಸ್ಥಿತಿಯನ್ನು ಅಭ್ಯಸಿಸಿ, ಅದಕ್ಕೆ ಬೇಕಾದ ಪೂರ್ವ ಪರೀಕ್ಷೆಗಳನ್ನೆಲ್ಲಾ ಮಾಡ್ಸಿ, ನೀವು ಯಾವ ತರಹದ ಮಸೂರವನ್ನು; ಯಾವ ಥರದ ಶಸ್ತ್ರಚಿಕಿತ್ಸೆ, ಯಾವ ಡಾಕ್ಟರು ಮಾಡೋದು" ಎಲ್ಲದರ ಮೇಲೆ ದರಗಳು ಬದಲಾಗತ್ವೆ" ಎಂದಳು. "ಹೋಗ್ಲಿ ಕನಿಷ್ಠ; ಗರಿಷ್ಠ ಎಷ್ಟಾಗ್ಬಹುದು? ನಾವು ಹೊಂದಿಸಿಕೊಳ್ಬೇಕಲ್ವಾ" ಎಂದರೆ "ದುಡ್ಡು ಕೊಟ್ಟು ಮಾಡಿಸಿಕೊಂಡ್ರೆ ಬೇರೆ; ವಿಮೆ ಮಾಡಿಸಿಕೊಂಡಿದ್ರೆ ಬೇರೆ; ಬೇರೆ ಬೇರೆ ವಿಮೆಗಳಿಗೆ ಬೇರೆ ಬೇರೆ. ಪಾವತಿ ಮಾಡಿ ವಿಮೆಯಿಂದ ಪುನರ್ಭರಣ ಮಾಡಿಕೊಳ್ಳೋದಾದ್ರೆ ಅದೇ ಬೇರೆ; ಪೂರ್ವ ಅನುಮತಿ ಹಣರಹಿತ ವಿಮಾ ಶಸ್ತ್ರಚಿಕಿತ್ಸೆಯಾದರೆ ಅದಕ್ಕೇ ಬೇರೆ. ಯಾವುದಕ್ಕೂ ಅಲ್ಲೇ ಕೇಳಿ" ಎಂದು ನಗುತ್ತಾ ನಮ್ಮನ್ನು ಸಾಗಹಾಕಿದಳು. 'ಅವರವರ ಕೆಲಸ ಮಾತ್ರ ಅವರದ್ದು, ಇನ್ನೊಬ್ಬರ ವಿಭಾಗದಲ್ಲಿ ತಲೆಯಿರಲಿ; ಉಗುರನ್ನೂ ತೂರಿಸುವುದಿಲ್ಲ' ಎನ್ನುವುದರಿವಾಗಿ 'ಸರಿ, ಮಾಡಿಸಿಕೊಳ್ಳೋ ಕಾಲಕ್ಕೆ ನೋಡಿಕೊಳ್ಳೋಣ; ಈಗಿಂದ ಯಾಕೆ? ಅವತ್ತಿನ ದರ ಏನಿರತ್ತೋ ಅವತ್ತಿನದಲ್ವಾ' ಎಂದುಕೊಂಡು ವ್ಯರ್ಥಾಲಾಪವನ್ನು ನಿಲ್ಲಿಸಿ ಶಸ್ತ್ರಚಿಕಿತ್ಸೆಯ ಆಲೋಚನೆಯನ್ನು ಕೊಡವಿ ಕೊಂಡು ತೆಪ್ಪಗೆ ಮರಳಿದೆವು.

ಕೊರೋನಾ ಕಾಲವೆಂದು ಮತ್ತೆರಡು ವರ್ಷ; ಅದರ ಮೇಲಿನ್ನೊಂದು ವರ್ಷವೂ ಮುಂದೂಡಿಕೊಂಡು ಹೋಯಿತು. ನಾಲ್ಕನೆಯ ವರ್ಷದ ಹೊತ್ತಿಗೆ ಐದಾರು ಅಡಿ ದೂರದಲ್ಲಿ ಇರುವವರ ಆಕಾರ, ಚಹರೆಯಿಂದ ಇಂತವರೇ ಎಂದು ಅಂದಾಜು ಮಾಡುವಂತಾಯಿತು. ನನ್ನ ಪ್ರೀತಿಯ ಓದುವ ಹವ್ಯಾಸ ನಿಂತೇಹೋಯಿತು. ಆಹಾರದ ಪೊಟ್ಟಣಗಳ ಮೇಲಿನ ನಿರ್ದೇಶನಗಳನ್ನು ಓದಿಕೊಳ್ಳಲು ಮೊಬೈಲಿನಲ್ಲಿ ಫೋಟೋ ಹೊಡೆದುಕೊಂಡು ಅದನ್ನು ನಾಲ್ಕಾರುಪಟ್ಟು ವಿಸ್ತರಿಸಿಕೊಂಡು ಓದಿಕೊಳ್ಳುವಂತಾಯಿತು. ದಾರಿಯಲ್ಲಿ ಹೋಗುತ್ತಿದ್ದರೆ ಸಿಗ್ನಲ್ ದೀಪಗಳು ಆರು ಎಂಟು ಬಿಂಬಗಳಾಗಿ ನರ್ತಿಸತೊಡಗಿ, ಅಂಗಡಿಯ ಬೋರ್ಡುಗಳು ಎಷ್ಟೋ ವರ್ಷಗಳಿಂದ ಧೂಳು ಮುಸುಗಿಕೊಂಡಂತೆ ತೋರತೊಡಗಿದವು. ಕಣ್ಣು ಸರಿಯಾಗಿ ಕಾಣದ್ದರಿಂದ ಕಿವಿಯೂ ಸರಿಯಾಗಿ ಕೇಳುತ್ತಿಲ್ಲವೇನೋ ಎನ್ನುವ

ಭ್ರಮೆಯುಂಟಾಗತೊಡಗಿತು! 'ಮೋಹದ ಪೊರೆ ಬಲಿತುಹೋದರೆ ಭಗವಂತನೇ ಸರಿಯಾದ ಶಸ್ತ್ರಚಿಕಿತ್ಸೆ ಮಾಡಿ ಕಣ್ತೆರೆಸುತ್ತಾನೆ. ಇದು ಮಾಮೂಲಿ ಕಣ್ಣಿನ ಪೊರೆ; ಇದಕ್ಕೆ ವೈದ್ಯನೇ ದೇವರು. ಇನ್ನು ಕಾಲ ತಳ್ಳುವಂತಿಲ್ಲ' ಎಂಬ ಸತ್ಯದರಿವಾಯಿತು. ಡಾಕ್ಟರ ಬಳಿ ಹೋದಾಗ "ಮೂರು ವರ್ಷದ ಹಿಂದೇನೇ ಹೇಳಿದೀನಿ. ಹೆಚ್ಚೆಂದರೆ ಇನ್ನಾರು, ಎಂಟು ತಿಂಗಳಲ್ಲಿ ಪೊರೆಯ ಶಸ್ತ್ರಚಿಕಿತ್ಸೆ ಮಾಡಿಸ್ಬೇಕು ಅಂತ. ಈಗ ಕಾಣ್ತಿಲ್ಲ, ವಿಧಿಯಿಲ್ಲ; ಬಂದಿದೀರಿ. ಕಣ್ಣಿನ ನರಗಳನ್ನೆಲ್ಲಾ ಪೊರೆ ಮುಚ್ಚಿಕೊಂಡುಬಿಟ್ಟಿದೆ. ಈಗಿಂದೀಗಲೇ ಸಲಹಾ ವಿಭಾಗಕ್ಕೆ ಹೋಗಿ, ಶಸ್ತ್ರ ಚಿಕಿತ್ಸೆಯ ದಿನಾಂಕವನ್ನು ಗುರ್ತು ಹಾಕಿಸಿಕೊಂಡೇ ಹೋಗಿ" ಎಂದು ಆಗ್ರಹಪೂರ್ವಕವಾಗಿ ಹೇಳಿದಾಗ ಮರುಮಾತಿಲ್ಲದೆ ಸಲಹಾವಿಭಾಗಕ್ಕೆ ಹೋದೆವು.

ಸಲಹೆಗಾರ್ತಿ ಚಂದವಾಗಿ ಮುಗುಳ್ನಗುತ್ತಾ ಯಾವ ಯಾವ ರೀತಿಯ ಶಸ್ತ್ರಚಿಕಿತ್ಸೆಯನ್ನು ಪಡೆದುಕೊಳ್ಳಬಹುದೆಂದು ವಿವರಿಸಿ ನಮ್ಮ ಆಯ್ಕೆಯನ್ನು ಕೇಳಿದಳು. ನಾವು 'ಯಾವ ರೀತಿಯ ಶಸ್ತ್ರಚಿಕಿತ್ಸೆ ಎನ್ನುವುದಕ್ಕಿಂತ ಯಾವ ವೈದ್ಯರು ಮಾಡುತ್ತಾರೆನ್ನುವುದು ಮುಖ್ಯ' ಎಂದು ನಮ್ಮ ಆಯ್ಕೆಯ ಡಾಕ್ಟರ ಹೆಸರನ್ನು ಹೇಳಿದ ಕೂಡಲೇ "ಅವರಾದ್ರೆ ಬರೀ ಲೇಸರ್ ಶಸ್ತ್ರಚಿಕಿತ್ಸೆಯನ್ನು ಮಾತ್ರಾ ಮಾಡೋದು. ಆದ್ರೆ ನಿಮ್ಮ ಕಣ್ಣಿನ ಸ್ಥಿತಿ ಅದಕ್ಕೆ ಸೂಕ್ತವಾಗಿದೆಯೇ ಅಂತ ತಿಳಿದುಕೊಳ್ಳಕ್ಕೆ ಎಲ್ಲಾ ಪರೀಕ್ಷೆಗಳು, ಇ.ಸಿ.ಜಿ, ಸ್ಕ್ಯಾನಿಂಗ್ ಎಲ್ಲಾ ಮಾಡಬೇಕಾಗತ್ತೆ" ಎಂದು ಪಲುಕಿ ಆಯ್ಕೆಯ ಒಂದು ಅವಕಾಶವನ್ನು ಕಡಿಮೆ ಮಾಡಿದಳು. "ನನ್ನ ಕಣ್ಣುಗಳನ್ನು ಮೊತ್ತ ಮೊದಲು ಪರೀಕ್ಷೆ ಮಾಡಿದ ಡಾಕ್ಟರ್ ಎನ್ನುವ ಕಾರಣಕ್ಕೆ ನಾನವರನ್ನು ಆಯ್ಕೆ ಮಾಡಿಕೊಂಡೆ. ಬೇರೆಯವರೂ 'ಅವರು ಬೇಕು' ಅನ್ನಲು ಕಾರಣವೇನು?" ಎಂದು ಕೇಳಿದೆ. "ಇಲ್ಲಿನ ಎಲ್ಲಾ ವೈದ್ಯರೂ ನುರಿತವರೇ. ಆದರೆ ನೀವು ಆಯ್ದುಕೊಂಡಿರುವುದು ವೈದ್ಯರನ್ನಲ್ಲ; ಮಾನವರೂಪಿ ದೇವರನ್ನು. ಅವರ 'ಹೀಲಿಂಗ್ ಟಚ್' ಇದೆಯಲ್ಲ, ಅದು ದೈವದ ಉಡುಗೊರೆ. ಅಂತವರ ಕೈಕೆಳಗೆ ಕೆಲಸ ಮಾಡುತ್ತಿರುವುದೇ ನಮ್ಮ ಪುಣ್ಯದಿಂದ ಎಂದು ನಂಬಿದೀನಿ ನಾನು" ಎಂದಳು ಭಾವುಕಳಾಗಿ ಕೈಯೆರಡನ್ನೂ ಎತ್ತಿ ಮುಗಿಯುತ್ತಾ. 'ಹಾಗಾದರೆ ನನ್ನ ಆಯ್ಕೆ ಸರಿಯಾಗಿರಬಹುದು' ಎಂದುಕೊಂಡು ಬಂದೆ.

ಮರುದಿನ ಎಲ್ಲಾ ಪರೀಕ್ಷೆಗಳೂ ಮುಗಿದು, 'ನಾನು ಶಸ್ತ್ರಚಿಕಿತ್ಸೆಗೆ ಒಳಗಾಗಲು ಫಿಟ್' ಎನ್ನುವುದನ್ನು ಪ್ರಮಾಣೀಕರಿಸಿದ ಮೇಲೆ, ಸಲಹೆಗಾರ್ತಿ ಒಂದೊಂದು ಕಣ್ಣಿಗೂ ಇಷ್ಟು ಖರ್ಚಾಗುತ್ತದೆ ಎನ್ನುವ ವಿವರಗಳನ್ನು ನೀಡಿ, ನನ್ನ ಶಸ್ತ್ರಚಿಕಿತ್ಸೆಗಳ ದಿನಾಂಕವನ್ನು ನಿಗದಿಪಡಿಸಿದಳು. ವಿಮೆ ಕಳೆದು ನಮ್ಮ ಜೇಬಿಗೆ ಬೀಳುವ ಸುಂಕವೆಷ್ಟು ಎಂಬುದನ್ನು ತಿಳಿದುಕೊಳ್ಳಲು ವಿಮಾ ಸಲಹೆದಾರರೆಡೆಗೆ ಬೊಟ್ಟು ತೋರಿಸಿದಳು. ಆಕೆ ಮುಂದಿಟ್ಟ ಅರ್ಜಿಯಲ್ಲಿ ಬೆಟ್ಟಿಟ್ಟ ಕಡೆಯಲ್ಲೆಲ್ಲಾ (ಹೇಗೂ ಓದಲು ಕಣ್ಣು ಕಾಣಿಸುತ್ತಿರಲಿಲ್ಲವಲ್ಲ!) ಅಂದಾಜಿನ ಮೇಲೆ ಸಹಿ ಹಾಕಿ, ಕೇಳಿದ ಮಾಹಿತಿಗಳನ್ನು, ದಾಖಲೆಗಳನ್ನೂ ನೀಡಿ ಬಂದೆವು.

ಶಸ್ತ್ರಚಿಕಿತ್ಸೆಯ ದಿನ ಬೆಳಗ್ಗೆ ಎಂಟು ಗಂಟೆಯೊಳಗೇ ಆಸ್ಪತ್ರೆಯಲ್ಲಿ ಹಾಜರಿದ್ದೆವು. ಇಬ್ಬರು ದಾದಿಯರು ಆದಿನ ಶಸ್ತ್ರಚಿಕಿತ್ಸೆಗೊಳಗಾಗುವ ಪ್ರತಿಯೊಬ್ಬರ ಬಳಿಯೂ ಬಂದು "ಸ್ನಾನ, ತಿಂಡಿ ಆಯಿತೆ? ಯಾವ ಯಾವ ಔಷಧಿಯನ್ನು ತೆಗೆದುಕೊಂಡಿರಿ? ಮರೆತಿದ್ದರೆ ತರಿಸಿಕೊಡುತ್ತೇವೆ" ಎಂದು ವಿಚಾರಿಸಿಕೊಳ್ಳುತ್ತಾ ನನ್ನ ಬಳಿಯೂ ಬಂದು ಕೇಳಿದರು. ನಾನು ತೆಗೆದುಕೊಂಡಿದ್ದ ಔಷಧಿಯ ಪಟ್ಟಿಯನ್ನು ನೆನಪಿಸಿಕೊಂಡು ಹೇಳುತ್ತಾ ಹೋದಾಗ ಐದು, ಆರು ಮಾತ್ರೆಗಳಾದ ಮೇಲೆ ಮುಂದಿನದನ್ನು ಬರೆದುಕೊಳ್ಳುವಾಗ ಅವಳು ನನ್ನನ್ನೊಂದು ವಿಚಿತ್ರ ಪ್ರಾಣಿ ಎನ್ನುವಂತೆ ನೋಡುತ್ತಾ "ಇವಿಷ್ಟನ್ನೂ ಒಂದೇ ಹೊತ್ತು ತೆಗೆದುಕೊಳ್ತೀರಾ?" ಎಂದಳು. "ಹೌದು, ಇನ್ನೂ ಎರಡಿದೆ" ಎಂದು

ಅವುಗಳ ಹೆಸರನ್ನೂ ಹೇಳಿದೆ. ಬರೆದುಕೊಳ್ಳಲು ಇಟ್ಟುಕೊಂಡಿರುವ ಸ್ಥಳ ಸಾಲದೆ ಅವುಗಳನ್ನು ಮಧ್ಯದಲ್ಲೆಲ್ಲೋ ಇರುಕಿಸಿದಳು. ತಿಂಡಿ ತಿಂದು ಬಂದಿಲ್ಲದವರಿಗೆ ತಿಂಡಿಯನ್ನು, ಕುಡಿಯುವವರಿಗೆ ಕಾಫಿ, ಜ್ಯೂಸನ್ನು ತರಿಸಿಕೊಟ್ಟಳು. ಸಕ್ಕರೆ ಮತ್ತು ರಕ್ತದೊತ್ತಡ ಎರಡನ್ನೂ ಪರೀಕ್ಷಿಸಿ ಆತಂಕ ನಿವಾರಕ ಮಾತ್ರೆಯೊಂದನ್ನು ಕೊಟ್ಟಳು. "ನನಗೇನೂ ಆತಂಕವಾಗುತ್ತಿಲ್ಲವಲ್ಲ" ಎಂದಾಗ "ಎಲ್ಲರಿಗೂ ಕೊಡ್ತೀವಿ. ತೊಗೊಳ್ಳಿ" ಎಂದಳು– 'ಅಷ್ಟೊಂದು ಮಾತ್ರೆ ನುಂಗುವಾಗ ಇದೊಂದು ಹೆಚ್ಚೇ' ಎಂದುಕೊಂಡಳೇನೋ; ಮರುಮಾತಾಡದೆ ನುಂಗಿದೆ. ಎಲ್ಲರನ್ನೂ ಆತ್ಮೀಯವಾಗಿ ವಿಚಾರಿಸಿ ಕೊಳ್ಳುತ್ತಿದ್ದ ರೀತಿ ನಿಜಕ್ಕೂ ಖುಷಿ ತರಿಸುತ್ತಿತ್ತು.

ಹಿರಿಯ ವೈದ್ಯರು ಬಂದು ನಮ್ಮ ಕಣ್ತೆರಿಸಿ, ತಾವು ಕಣ್ತೆರೆದು ನೋಡಿ ನಿರ್ದೇಶನಗಳನ್ನು ನೀಡಿ ಹೊರಟರು. ನಂತರ ದಾದಿ ಮೂವರು ಮೂವರ ಗುಂಪುಗಳಾಗಿ ಮಾಡಿ ಒಮ್ಮೆಲೇ ಏಪ್ರನ್ ಕಟ್ಟಿ ಶಸ್ತ್ರಚಿಕಿತ್ಸಾ ಕೊಠಡಿಗೆ ಕಳುಹಿಸ ತೊಡಗಿದಳು. ಹೋದ ಹತ್ತು ನಿಮಿಷಗಳೊಳಗಾಗಿಯೇ ಆಪರೇಶನ್ ಮುಗಿದೇ ಹೋಗುತ್ತದೆಯೇ! ಮೊತ್ತ ಮೊದಲಿಗೆ ಬಂದಿದ್ದ ನಾನು ಕಾಯುತ್ತಲೇ ಇರುವಾಗ ಕೋಣೆಯಲ್ಲಿನ ಜನರೆಲ್ಲಾ ಖಾಲಿಯಾಗತೊಡಗಿದರು. ಅದನ್ನೇ ಕೇಳಿದೆ. "ಡಾಕ್ಟರ್ ಯಾವ ಕ್ರಮದಲ್ಲಿ ಕಳಿಸಬೇಕು ಅಂತ ಬರೆದಿರುತ್ತಾರೋ ಹಾಗೆಯೇ ಕಳಿಸ್ತೀವಿ. ನಿಮ್ಮದು ಕಡೆಯ ಬ್ಯಾಚ್‌ನಲ್ಲಿ" ಎಂದಳು. "ನಾನು ಕಡೆ ಯಾಕೆ?" ಎಂದಾಗ "ಸ್ವಲ್ಪ ಕ್ಲಿಷ್ಟಕರವಾಗಿರೋದನ್ನ ಕಡೆಯಲ್ಲಿಟ್ಟುಕೊಳ್ತಾರೆ. ಸುಲಭವಾಗಿರೋವ್ರದ್ದು ಬೇಗ ಮುಗಿಸಿಕೊಳ್ತಾರೆ" ಅಂದಳು. 'ಮೂರು ವರ್ಷ ತಡಮಾಡಿದ್ದಕ್ಕೆ ಇದನ್ನು ಅನುಭವಿಸಬೇಕಾಗಿದ್ದೆ' ಎಂದುಕೊಂಡು ತೆಪ್ಪಗಾದೆ. ನನ್ನ ಸರದಿಯೂ ಬಂತು.

ಶಸ್ತ್ರಚಿಕಿತ್ಸಾ ಕೊಠಡಿಯ ಹೊರಾವರಣದೊಳಗೆ ಮತ್ತೊಂದು ಸ್ಕ್ಯಾನಿಂಗ್ ಮಾಡಿದ ನಂತರ ಮುಖ್ಯ ಕೊಠಡಿಗೆ ಕಳುಹಿಸಿದರು. ಕಣ್ಣು ಮುಚ್ಚಲಾಗದಂತೆ ಬಂಧಿಸಿ, ಏನೋ ದ್ರಾವಣವನ್ನು ಹಾಕಿ ಇನ್ನೊಮ್ಮೆ ಪರೀಕ್ಷಿಸಿದ ಸಹಾಯಕ ವೈದ್ಯರು, ಮುಖ್ಯ ವೈದ್ಯರಿಗೆ ತಮ್ಮದೇ ಭಾಷೆಯಲ್ಲಿ ಸಂದೇಶವನ್ನು ರವಾನಿಸಿದರು. ಮೇಲಿನ ದೀಪವನ್ನೇ ನೋಡುತ್ತಿದ್ದಾಗ ಅದೇನು ನಡೆಯುತ್ತಿದೆ ಎನ್ನುವುದನ್ನು ಮನಸ್ಸು ಅವಲೋಕಿಸುವ ಹೊತ್ತಿಗೇ ಶಸ್ತ್ರಚಿಕಿತ್ಸೆ ಮುಗಿದೇಹೋಗಿ "ಆಪರೇಶನ್ ಚೆನ್ನಾಗಿ ಆಗಿದೆ. ಹೊರಗಡೆ ಮಿಕ್ಕ ನಿರ್ದೇಶನಗಳನ್ನು ಹೇಳ್ತಾರೆ. ಅರ್ಧ ಗಂಟೆಯ ಮೇಲೆ ಮನೆಗೆ ಹೋಗ್ಬಹುದು" ಎಂದರು ಮುಖ್ಯ ವೈದ್ಯರು. ಇದ್ಯಾವ ಮಾಯೆ! ಎನ್ನುವ ವಿಸ್ಮಯದಲ್ಲಿರುವಾಗಲೇ ಸ್ಟೆಚರ್ ಬಂತು. ಕಣ್ಣಿಗೊಂದು ಕಪ್ಪು ಕನ್ನಡಕವನ್ನು ಏರಿಸಿ ಗಾಲಿಕುರ್ಚಿಗೆ ಇಳಿಸಿ ಕಳಿಸೇಬಿಟ್ಟಳು. ಶಸ್ತ್ರಚಿಕಿತ್ಸೆಯೆಂದರೆ ಇಷ್ಟೂ ಸುಲಭವೇ?!

ನಿರ್ದೇಶನಗಳೊಂದಿಗೆ ದಿನದಲ್ಲಿ ಯಾವ್ಯಾವ ಔಷಧಿಯ ಹನಿಗಳನ್ನು ಎಷ್ಟೆಷ್ಟು ಹೊತ್ತಿಗೆ ಹಾಕಿಕೊಳ್ಳಬೇಕೆಂಬ ಒಂದು ವೇಳಾಪಟ್ಟಿಯನ್ನು ಕಿಟ್‌ನೊಂದಿಗೆ ನೀಡಿ "ಇನ್ನೊಂದು ತಿಂಗಳವರೆಗೆ ಅಡುಗೆಮನೆಯ ಒಲೆಯ ಮುಂದೆ ಹೋಗಬೇಡಿ. ಹೊರಗೆ ಹೋಗುವಾಗ ಕಪ್ಪು ಕನ್ನಡಕವನ್ನು ಧರಿಸಿಯೇ ಇರಿ. ತಲೆಸ್ನಾನ ಮಾಡುವಂತಿಲ್ಲ; ಕಣ್ಣಿನವರೆಗಿನ ಭಾಗಕ್ಕೆ ನೀರನ್ನು ಸೋಕಿಸುವಂತಿಲ್ಲ. ಶ್ರಮದಾಯಕ ಕೆಲಸವಾವುದನ್ನೂ ಮಾಡಬೇಡಿ" ಎಂದು ಸಮೀಕ್ಷೆಗೆ ಬರಬೇಕಾದ ದಿನಾಂಕವನ್ನೂ ಹೇಳಿ ಕಳುಹಿಸಿದರು.

ಹೋಗುವಾಗ ಧೂಳುಮುಸುಕಿ ಮಂಕಾಗಿದ್ದ ಇಡೀ ಜಗತ್ತು ವಾಪಸ್ಸಾಗುವಾಗ ಕಪ್ಪು ಕನ್ನಡಕವಿದ್ದರೂ ಮೈತೊಳೆದು ನಿಂತಂತಿದೆ! ಅಂಗಡಿಯ ಬೋರ್ಡುಗಳೆಲ್ಲಾ ಸ್ಪಷ್ಟವಾಗಿ ಕಾಣುತ್ತಿದೆ! ಸಿಗ್ನಲ್ ದೀಪಗಳು ಎಂಥಾ ಚಂದವಾಗಿ ಕೆಂಪು, ಹಸಿರು, ಹಳದಿ ಬಣ್ಣವನ್ನು ತೋರುತ್ತಾ ನಿಂತಿವೆ! ಅಕ್ಕಪಕ್ಕದವರಷ್ಟೇ ಏನು, ಎಷ್ಟೋ ದೂರದಲ್ಲಿರುವವರೂ ಎಷ್ಟೊಂದು

ಸ್ಪಷ್ಟವಾಗಿ ತೋರುತ್ತಿದ್ದಾರೆ! ಪ್ರತಿ ಅಕ್ಷರವೂ ಸ್ಫುಟವಾಗಿ ಕಾಣುತ್ತಿದೆ... ಇಡೀ ಪ್ರಪಂಚವೇ ಮೂಡಲ ಮನೆಯ ಮುತ್ತಿನ ನೀರಿನ ಎರಕವನ್ನು ಹೊಯ್ದುಕೊಂಡಂತೆ ಸುಂದರವಾಗಿ ನಿಂತಿದೆ. 'ಆ ಹಾಡನ್ನೊಮ್ಮೆ ಹಾಡಿಯೇಬಿಡಲೇ' ಎನ್ನುವಷ್ಟು ಖುಷಿಯಾಗಿಹೋಯ್ತು. 'ಅಕ್ಕಪಕ್ಕದಲ್ಲಿ ಜನರಿದ್ದಾರೆ; ಅವರಿಗೆ ಕಿವಿಗಳೂ ಇವೆ' ಎನ್ನುವುದು ಅರಿವಿಗೆ ಬಂದು ಹಾಗೆಯೇ ಕಷ್ಟಪಟ್ಟು ಬಾಯಿಮುಚ್ಚಿಕೊಂಡು ಸುಮ್ಮನಾದೆ.

ಈಗಪ್ಪಾ ಶುರುವಾಗಿದ್ದು ಕೂಸಿಲ್ಲದ ಬಾಣಂತನ. ಇಲ್ಲಿನವರೆಗೆ ಅಷ್ಟಿಷ್ಟು ಅಡುಗೆಮನೆಯ ಜವಾಬ್ದಾರಿಯನ್ನು ವಹಿಸಿಕೊಳ್ಳುತ್ತಿದ್ದ ನನ್ನವರು ಸಂಪೂರ್ಣವಾಗಿ ಗೃಹಿಣಿಯ ಬಾಧ್ಯತೆಗಳನ್ನು ವಹಿಸಿಕೊಂಡರು. ಕೂತಲ್ಲಿಗೇ ಹೊತ್ತು ಹೊತ್ತಿಗೆ ಕಾಫಿ, ತಿಂಡಿ, ಊಟ ಸಮಸ್ತವೂ. ಅಷ್ಟಲ್ಲದೆ ಔಷಧಿಯ ಹನಿಗಳನ್ನು ಹಾಕುವ ವೇಳಾಪಟ್ಟಿಯನ್ನೂ ಇಟ್ಟುಕೊಂಡು ಸಮಯಾನುಸಾರವಾಗಿ 'ಈಗ ಎ, ಈಗ ಬಿ, ಸಿ, ಡಿ' ಎನ್ನುತ್ತಾ ದಿನವಿಡೀ ಕಣ್ಣುಗಳ ಶುಶ್ರೂಷೆ ಮಾಡತೊಡಗಿದರು. 'ಅಮ್ಮನಂತೆಯೇ ನೋಡಿಕೊಂಡರು' ಎಂದರೆ ಉತ್ಪ್ರೇಕ್ಷೆಯಂತೂ ಖಂಡಿತಾ ಅಲ್ಲ. ಮಗಳು, ತಂಗಿ ದಿನಕ್ಕೊಮ್ಮೆಯಾದರೂ ಬಂದು ವಿಚಾರಿಸಿಕೊಳ್ಳುತ್ತಿದ್ದರು. ಕೆಲಸ ಮಾಡುವಂತಿಲ್ಲ, ಕಣ್ಣಿಗೆ ಶ್ರಮವಾಗುವಂತಿಲ್ಲ. ಉಪಚಾರವೋ ಉಪಚಾರ. ಕೂಸೊಂದು ಪಕ್ಕದಲ್ಲಿರಲಿಲ್ಲ ಎನ್ನುವುದನ್ನು ಬಿಟ್ಟರೆ ಇದಿನ್ನೊಂದು ಬಾಣಂತನವೇ ಸೈ. ಫಲಶ್ರುತಿಯಾಗಿ ತಿಂಗಳಲ್ಲಿ ಎರಡು ಕೇಜಿ ತೂಕವನ್ನು ಸಹಜವಾಗಿ ಹೆಚ್ಚಿಸಿಕೊಂಡಿದ್ದೆ. ಓದುವ ಹವ್ಯಾಸಕ್ಕೆ ನಿಧಾನವಾಗಿ ಮರಳಿದ್ದೆ.

***

ನನ್ನವಳು

– ವೆಂಕಟೇಶ ಕಾಮತ್

ದೂರದಿಂದ ಕಂಡಾಗ ಅವಳು
ಅನಿಸಿದ್ದು ಆಗಬಹುದು ನನಗೆ ಇವಳು
ಹತ್ತಿರ ಬಂದಳು
ವರಿಸಿದಳು
ಆವರಿಸಿದಳು
ಉಸಿರಾದಳು
ಬಸಿರಾದಳು
ಬಾಳ ಹಸಿರಾದಳು
ನನಗೆ ನೆರಳಾದಳು
ನನ್ನ ತಾಯಿಯ ಮಗಳಾದಳು
ನನ್ನ ಮಗಳ ತಾಯಾದಳು
ನಾನು ನಾನಾಗಿರಲಿಲ್ಲ
ಏನಾದೆನೋ... ನನಗೆ ಗೊತ್ತಿಲ್ಲಾ..
ಸೋತೆ... ಸಂಪೂರ್ಣ ಸೋತೆ...
ಆದರೆ ಗೆದ್ದವಳು ಅವಳಾಗಿರಲಿಲ್ಲ
ಗೆಲುವು ನಮಿಬ್ಬರದ್ದೆಂದಳು
ಹೆಮ್ಮೆಯಿಂದ ಹೇಳುವೆ
ಇವಳೇ....
ನನ್ನವಳು, ನನ್ನವಳು
ನನ್ನವಳು...

***

ನೆನಪಾಗಲಿಲ್ಲವೆ?....

– ವೆಂಕಟೇಶ ಕಾಮತ್

ಕೇಳಿದಳಾಕೆ.. ಹೀಗೇ ನನ್ನನು
ನನ್ನ ನೆನಪಾಗಲಿಲ್ಲವೆ?
ಯೋಚಿಸಿದೆ...
ತಲೆಕೆರೆಯುತ್ತಾ... ಹೇಳಿದೆ.

ಗುಟ್ಟಾದ ಮಾತೊಂದ
ನಿನಗಿಂದು ಹೇಳಲೇ....
ಕಿವಿಯ ಮೇಲಿನ ಕೂದಲು ಸರಿಸಿ
ಪಿಸುಗುಟ್ಟಿ...

ಓ ಹೆಂಡತಿ...,
ನಿನ್ನ.. ನೆನಪಾಗಲು
ನಾ...
ನಿನ್ನನು...
ಒಂದಿನಿತು ಮರೆಯಬೇಕಲ್ಲಾ...
ನೆಲೆಸಿರುವೆ ನೀ...
ನನ್ನೊಳಗೆ ನನ್ನ ತನುಮನಗಳಲ್ಲಿ
ನನ್ನ ಜೀವದ ಪ್ರತಿ ಉಸಿರಿನಲ್ಲಿ
ನನ್ನ ಹೃದಯದ ಪ್ರತಿ ಬಡಿತದಲ್ಲಿ....

***

ಅನುಭವ ಕಥನ (ಭಾಗ-2)

ಜೇನುಗೂಡು, ಜೇನುನೊಣಗಳು ಹಾಗೂ ನಾನು

– ಕೆ.ಆರ್. ವೆಂಕಟೇಶ್

(ಭಾಗ-1 ರ ಕಡೆಯ ಸಾಲುಗಳು: ಆಗ ಸುಮಾರು ಏಳೆಂಟು ಜೇನುನೊಣಗಳು ಬಹಳ ರೋಷದಿಂದ ತೆರೆದ ಹಾಲ್, ಕಿಟಕಿಗಳಂದ ಒಳನುಗ್ಗಿದವು. ಜೇನುನೊಣಗಳ ಆ ಉಗ್ರರೂಪ ಅಂದೇ ನಾನು ನೋಡಿದ್ದು. ಅವುಗಳು ಮಾಡುತ್ತಿದ್ದ ರೊಂಯ್ ಎಂಬ ಸದ್ದು ಬಹಳ ಭಯ ಹುಟ್ಟಿಸಿತು. ಆ ಭಯದಲ್ಲಿ ಏನಾಗುತ್ತಿದೆ ಎಂದು ತಿಳಿಯದೆ ಅಡುಗೆಮನೆಗೆ ಓಡಿ ಹೋದೆ..)

ಮುಂದಕ್ಕೆ... ಭಾಗ 2 (ಕೊನೆಯ ಭಾಗ):

ನಾನು ಅಡುಗೆಮನೆಗೆ ಹೋಗಿ ಬಾಗಿಲು ಹಾಕಿಕೊಂಡು ಆತಂಕದಲ್ಲಿದ್ದೆ. ಏಕೆಂದರೆ ಅಮ್ಮನ ರೂಮಿನ ಬಾಗಿಲು ತೆರೆದೇ ಇತ್ತು. ಹಾಲ್‌ನಲ್ಲಿದ್ದ ಜೇನುನೊಣಗಳು ಏನಾದರೂ ಅಮ್ಮನ ರೂಮಿಗೆ ಹೋಗಿಬಿಟ್ಟರೆ ಎಂಬ ಭಯ. ಎಂಬತ್ತು ದಾಟಿರುವ ಅಮ್ಮ ಅದನ್ನು ಹೇಗೆ ಎದುರಿಸಬಹುದು ಎಂಬ ಆತಂಕ. ಅಡುಗೆಮನೆಯಿಂದಲೇ ಆ ಉಗ್ರರೂಪದ ಜೇನುನೊಣಗಳು ರೋಷದಿಂದ ಗೋಡೆಗೆ ಅಪ್ಪಳಿಸುತ್ತಿದ್ದ ಶಬ್ದ ಕೇಳಿಸುತ್ತಿತ್ತು.

ಹದಿನೈದು ನಿಮಿಷ ಅಲ್ಲೇ ಒಳಗೇ ಇದ್ದು ಆಚೆ ಬಂದು ನೋಡಿದರೆ ಇನ್ನೂ ಜೇನುನೊಣಗಳು ಹಾಲ್‌ನಲ್ಲೇ ರೊಂಯ್ ಎಂದು ಶಬ್ದ ಮಾಡುತ್ತಲೇ ಇದ್ದವು. ಅವುಗಳ ಉಗ್ರರೂಪ ಇಳಿದಿರಲಿಲ್ಲ. ಸುಮ್ಮನೆ ಕಾಯುತ್ತಾ ಕುಳಿತರೆ ಏನೂ ಪ್ರಯೋಜನವಿಲ್ಲ ಎಂದು ತಿಳಿದು ಬಚ್ಚಲು ಮನೆಯಲ್ಲಿ ಇದ್ದ ಟವಲ್ ಮುಖಕ್ಕೆ ಸುತ್ತಿಕೊಂಡು ಧೈರ್ಯ ಮಾಡಿ ಹಾಲ್‌ಗೆ ಬಂದು ಸರಸರನೆ ಅಮ್ಮನ ಕೋಣೆಯ ಬಾಗಿಲನ್ನು ಆಚೆಯಿಂದ ಮುಚ್ಚಿ ಜೇನುನೊಣಗಳು ಎದುರು ಗೋಡೆಯ ಮೇಲೆ ಇದ್ದುದನ್ನು ಗಮನಿಸಿ ಹಾಲ್‌ನಲ್ಲಿ ಇರಲಾಗದೆ ವರಾಂಡಕ್ಕೆ ಓಡಿಹೋದೆ.

ಈಗಾಗಲೇ ರಾತ್ರಿ 11 ದಾಟಿತ್ತು. ಮಾರನೆಯ ದಿನದ ದಿನಚರಿಗೆ ಏನು ಮಾಡುವುದು.. ಇವುಗಳು ಬೆಳಗ್ಗೆಯ ಹೊತ್ತಿಗೆ ತಣ್ಣಗಾಗುತ್ತವೆಯೇ? ಆಗದಿದ್ದರೆ ಏನು ಗತಿ ಎಂಬ ಯೋಚನೆ. ಸಾಲದ್ದಕ್ಕೆ ಅಮ್ಮನಿಗೆ ಮಧ್ಯರಾತ್ರಿ ಒಂದೆರಡು ಬಾರಿ ಏಳುವ ಅಭ್ಯಾಸ ಬೇರೆ. ದೇವರೇ ನೀನೇ ಕಾಪಾಡಬೇಕು ಎಂದು ಬೇಡಿಕೊಳ್ಳುತ್ತಾ ನಾನೂ ಮಲಗಿದೆ. ರಾತ್ರಿ ಒಂದು ಬಾರಿ ಈ ಯೋಚನೆಯಿಂದ ನಿದ್ರೆಯಿಂದ ಎಚ್ಚೆತ್ತು ಮೆಲ್ಲಗೆ ಹಾಲ್ ಬಾಗಿಲು ತೆಗೆದು ನೋಡಿದಾಗ ಮೂಲೆಯಲ್ಲಿ ಐದಾರು ಜೇನುನೊಣಗಳು ಕಂಡವು. ಆದರೆ ಅವುಗಳ ರೋಷ ಕೊಂಚ ಕಡಿಮೆಯಾದಂತೆ ತೋರುತ್ತಿತ್ತು. ಏನೇ ಆಗಲಿ ಬೆಳಗ್ಗೆ ನೋಡುವ ಎಂದು ಮತ್ತೆ ಮಲಗಿದೆ. ಬೆಳಗ್ಗೆ ಎದ್ದು ನೋಡಿದಾಗ ರಾತ್ರಿ ಕಂಡಷ್ಟು ಜೇನುನೊಣಗಳು ಕಾಣಿಸಲಿಲ್ಲ. ಬಹುಶಃ ಅವುಗಳನ್ನು ಜೇನುಗೂಡಿನಿಂದ ಕದಲಿಸಿದ ಆ ರಾಸಾಯನಿಕ ಹೊಗೆಯ ಘಾಟಿಗೆ ಅವುಗಳು ಮೆತ್ತಗಾಗಿ ಕೆಳಗೆ ಬಿದ್ದು ಪ್ರಾಣಬಿಟ್ಟಿವೆಯೇನೋ ಎಂಬ ಅನುಮಾನ ಬಂದಿತು. ಅಮ್ಮ ಈಗಾಗಲೇ ಎದ್ದು ಕಾಫಿ ಮಾಡಿಕೊಂಡು ಕುಡಿದಿದ್ದರು. ಅವರ ದೃಷ್ಟಿ ವಯೋಸಹಜವಾಗಿ ಕಡಿಮೆಯಾದ್ದರಿಂದ ಅವರಿಗೆ ಜೇನುನೊಣಗಳು ಕಾಣದೆ ಆರಾಮಾಗಿ ಸೋಫಾ ಮೇಲೆ ಕುಳಿತಿದ್ದರು. ಅದೇನೋ ಆಂಗ್ಲ ಭಾಷೆಯಲ್ಲಿ ಹೇಳುತ್ತಾರಲ್ಲ "ಇಗ್ನೊರೆಂಸ್ ಈಸ್ ಬ್ಲಿಸ್" ಹಾಗಿತ್ತು ಅಮ್ಮನ ಮುಖಭಾವ.

ನಾನು ಮುಖ ತೊಳೆದುಕೊಂಡು ಬಂದು ಕಾಫಿ ಕುಡಿದು ನಂತರ ಮಿಕ್ಕ ಜೇನುನೊಣಗಳು ಎಲ್ಲಿ ಹೋದವು ಎಂದು ಸೋಫಾ ಕೆಳಗಡೆ ಕೂಲಂಕುಷವಾಗಿ ತನಿಖೆ ಮಾಡಿದಾಗ ನಾಲ್ಕೈದು ಜೇನುನೊಣಗಳು ಸ್ವಲ್ಪ ಜೀವ ಇರಿಸಿಕೊಂಡು

ಇನ್ನೇನು ಜೀವ ಬಿಡುವುದಕ್ಕೆ ಸಿದ್ಧವಾಗಿರುವಂತೆ ಕಂಡಿತು. ಗೋಡೆಯ ಮೂಲೆಯಲ್ಲಿದ್ದ ಐದಾರು ಜೇನುನೊಣಗಳು ಕೂಡ ಒಂದು ಗಂಟೆಯೊಳಗೆ ಕೆಳಗೆ ಬಿದ್ದವು. ಕೊಂಚ ನಿರಾಳವಾಯಿತು.

ಮುಂದಿನ ದಿನಚರಿಯನ್ನು ಮುಗಿಸಿ ಬರುವ ಹೊತ್ತಿಗೆ ಕೆಲಸದವಳು ಬಂದಿದ್ದಳು. ಅವಳಿಗೆ ಸೋಫಾ ಕೆಳಗೆ ನೋಡಿ ಸತ್ತಿರುವ ಜೇನುನೊಣಗಳನ್ನು ಗುಡಿಸಿ ಕಸದ ಕವರ್‌ಗೆ ಹಾಕಲು ಹೇಳಿದೆ. ಅವಳು ಹಾಗೆಯೇ ಮಾಡಿದಳು. ಒಂದೆರಡು ಜೇನುನೊಣಗಳಿಗೆ ಇನ್ನೂ ಅರೆಜೀವವಿತ್ತು. ಒಟ್ಟಿನಲ್ಲಿ ಹಾಗೂ ಹೀಗೂ ಆತಂಕವೆಲ್ಲಾ ಹೋಗಿ ಪರಿಸ್ಥಿತಿ ಮಾಮೂಲಿನಂತೆ ಆಯಿತು. ಮನೆಯ ಆಚೆ ಬಲಭಾಗದಲ್ಲಿ ಕಾಂಪೌಂಡ್ ಒಳಗೆ ಒಂದೈವತ್ತು ನೊಣಗಳು ಹಿಂದಿನ ರಾತ್ರಿ ಪಕ್ಕದ ಕಟ್ಟಡದಲ್ಲಿ ನಡೆದ ಕಾರ್ಯಾಚರಣೆಯಿಂದ ಕೆಳಗೆ ಬಿದ್ದು ಸತ್ತಿದ್ದವು. ಅದನ್ನೂ ಗುಡಿಸಿ ಕೆಲಸದವಳು ಆಚೆ ಹಾಕಿದಳು.

ಪಕ್ಕದ ಕಟ್ಟಡದ ಮಾಲೀಕರು ಈಗಾಗಲೆ ಎಂಟು ತಿಂಗಳಲ್ಲಿ ಎರಡು ಬಾರಿ ಜೇನುನೊಣಗಳು ಜೇನುಗೂಡನ್ನು ಪೂರ್ಣ ಪ್ರಮಾಣದಲ್ಲಿ ಕಟ್ಟಿದುದರಿಂದ ಮತ್ತೆ ಅವುಗಳು ಗೂಡು ಕಟ್ಟದಿರಲು ಶಾಶ್ವತವಾದ ಪರಿಹಾರವಿದೆಯೇ ಎಂದು ಹುಡುಕುತ್ತಿದ್ದರು. ಏಕೆಂದರೆ ಅವರ ಕಟ್ಟಡದಲ್ಲಿ ಪಿ.ಯು.ಸಿ ಟ್ಯೂಷನ್ ನಡೆಯುತ್ತಿದ್ದುದರಿಂದ ವರ್ಷವಿಡೀ ನೂರಾರು ವಿದ್ಯಾರ್ಥಿಗಳು ಓಡಾಡುತ್ತಿರುತ್ತಾರೆ. ಮೊದಲನೇ ಬಾರಿ ಏನೂ ಅವಘಡ ಆಗದಿದ್ದರೂ ಎರಡನೆಯ ಬಾರಿ ಆ ಟ್ಯೂಷನ್ ಸೆಂಟರ್‌ನ ಗುಮಾಸ್ತನನ್ನು ಒಂದೆರಡು ಜೇನುನೊಣಗಳು ಆಕ್ರಮಣ ಮಾಡಿ ಕಡಿದು ಅವನ ಬಲಕಣ್ಣಿನ ಪಕ್ಕ ಊದಿಕೊಂಡು ಮುಖ ವಿಕಾರವಾಗಿತ್ತು. ಅವನು ಟೆಟಾನಸ್ ಇಂಜೆಕ್ಷನ್ ಮಾತ್ರೆ ತೆಗೆದುಕೊಂಡು ಮೊದಲಿನ ಸ್ಥಿತಿಗೆ ಬರುವುದಕ್ಕೆ ಒಂದು ವಾರ ಬೇಕಾಯಿತು. ಕಡೆಗೆ ಪಕ್ಕದ ಕಟ್ಟಡದ ಮಾಲೀಕರ ಸಂಬಂಧಿಕರು ಜಿರಳೆ ಹೊಡೆಯುವ ಹಿಟ್ ಔಷಧಿ ಒಟ್ಟು ಒಂದು ಲೀಟರ್‌ನಷ್ಟು 15 ದಿನಗಳ ಅಂತರದಲ್ಲಿ ಎರಡು ಬಾರಿ ಅವುಗಳು ಗೂಡು ಕಟ್ಟಿದ ಜಾಗಕ್ಕೆ ಹೊಡೆಯಿರಿ. ಅವುಗಳು ಅದರ ಘಾಟು ವಾಸನೆಗೆ ಮತ್ತೆ ಅಲ್ಲಿ ಗೂಡು ಕಟ್ಟುವುದಿಲ್ಲ. ಇಲ್ಲದಿದ್ದರೆ ಮತ್ತೆ ಆ ಜಾಗವನ್ನು ಹುಡುಕಿಕೊಂಡು ಬಂದು ಕಟ್ಟಿದರೆ ಮತ್ತದೇ ರಾಮಾಯಣ, ಕಷ್ಟವಾಗುತ್ತದೆ ಎಂದು ಸಲಹೆ ನೀಡಿದರು. ಅವರು ತಮ್ಮ ಹಿಂದಿನ ಅನುಭವದ ಮಾತನ್ನು ಇಲ್ಲಿ ಹೇಳುತ್ತಿದ್ದೇನೆ ಎಂದರು. ಕಟ್ಟಡದ ಮಾಲೀಕರು ಹಾಗೆಯೇ ಮಾಡಿದರು. ಮುಂದಿನ ತಿಂಗಳುಗಳಲ್ಲಿ ಮತ್ತೆ ಅಲ್ಲಿ ಜೇನುಗೂಡು ಕಟ್ಟದಿರಲು ಅವರು ನಿಟ್ಟುಸಿರುಬಿಟ್ಟರು.

ಇಷ್ಟೆಲ್ಲಾ ಆದರೂ ಇಲ್ಲಿಯವರೆಗೆ ನನ್ನ ಈ ಅನುಭವ ಕಥನ ಓದಿದವರಿಗೆ ಏನಪ್ಪಾ ಈಗಾಗಲೇ ಇವನ ಮನೆಯಂಗಳದಲ್ಲಿ ಎರಡು ಬಾರಿ ಹಾಗೂ ಪಕ್ಕದ ಕಟ್ಟಡದಲ್ಲಿ ಎರಡು ಬಾರಿ ಜೇನುಗೂಡು ತಲೆಯೆತ್ತಿ ಜೇನುನೊಣಗಳು ಎಷ್ಟು ಅವಾಂತರ ಮಾಡಿದರೂ ಇವನಿಗೆ ಒಮ್ಮೆಯೂ ಕಡಿಯಲಿಲ್ಲವೇ? ಇಲ್ಲವೆಂದರೆ ಪ್ರಸ್ತುತಿಯ ಆರಂಭದಲ್ಲಿ ಜೇನುನೊಣ ಕಡಿತದ ರುಚಿಯ ಬಗ್ಗೆ ಮಾತನಾಡಿ ಅನುಭವ ಕಥನ ವೆಂದು ಏಕೆ ಹೇಳಿದ? ಎಂದು ಆಶ್ಚರ್ಯವಾಗಬಹುದು. ಹೌದು ಈ ನಾಲ್ಕು ಬಾರಿಯೂ ನಾನು ಅದಕ್ಕೆ ಪ್ರತ್ಯಕ್ಷ ಸಾಕ್ಷಿಯಾಗಿದ್ದರೂ ಸ್ವತಃ ನನಗೆ ಅವುಗಳು ಕಡಿದಿರಲಿಲ್ಲ. ಅವುಗಳ ಕಡಿತದ ರುಚಿಯ ನಾನಿನ್ನೂ ನೋಡಿರಲಿಲ್ಲ.

ಹಾಗಿದ್ದರೆ ಅವುಗಳ ಕಡಿತದ ರುಚಿ ನಾನು ನೋಡಿದ್ದು ಯಾವಾಗ? ಇದೇ ಈ ಕಥನದ ರೋಚಕ ಭಾಗ ಹಾಗೂ ಈ ಅನುಭವ ಕಥನದ ಕ್ಲೈಮ್ಯಾಕ್ಸ್. ಬನ್ನಿ ಕ್ಲೈಮ್ಯಾಕ್ಸ್ ನೋಡುವ ಸಮಯ ಬಂದಿದೆ.

ಈಗ ಎರಡು ವರ್ಷದ ಕೆಳಗೆ ನನ್ನ ಸೋದರಮಾವನ ಮಗಳು ನಿಖರವಾಗಿ 2021 ನವೆಂಬರ್ 7, ಭಾನುವಾರ, ತುಲಾ ಸ್ನಾನಕ್ಕೆ ಕೃಷ್ಣಾಪುರಕ್ಕೆ ನಮ್ಮ ಎರಡು ಮೂರು ಕುಟುಂಬಗಳು ಹೋಗುತ್ತಿವೆಯೆಂದೂ, ನಾನು ಕಾವೇರಿ ದಂಡೆಯಲ್ಲಿ ಇರುವ ಕೃಷ್ಣಾಪುರ ಒಮ್ಮೆಯೂ ನೋಡಿರದ ಕಾರಣ ಜೊತೆಯಲಿ ಬರಬೇಕೆಂದೂ ಒತ್ತಾಯಿಸಿದಳು.

ನನಗೂ ಆಸಕ್ತಿಯಿದ್ದುದರಿಂದ ಒಪ್ಪಿದೆನು. ಒಂದು 14 ಆಸನಗಳ ಟಿಟಿ ಬುಕ್ ಮಾಡಿದ್ದರಿಂದ ನನ್ನನ್ನು ನಮ್ಮ ಮನೆಯ ಹತ್ತಿರದ ಒಂದು ಜಾಗದಿಂದ ಪಿಕಪ್ ಮಾಡಿಕೊಂಡು ಎಲ್ಲರೂ ಮೈಸೂರು ರಸ್ತೆಯ ಮೂಲಕ ಹೊರಟೆವು.

ಟಿ. ನರಸೀಪರ ತಾಲೂಕಿನ ಅಲ್ಲಿಂದ 5 ಕಿಲೋಮೀಟರ್ ದೂರದಲ್ಲಿರುವ ಕೃಷ್ಣಾಪುರಕ್ಕೆ ಬೆಳಗ್ಗೆ 10 ಗಂಟೆಗೆ ಸೇರಿದೆವು. ಅಲ್ಲಿ ಸಂತಾನ ಗೋಪಾಲಕೃಷ್ಣ ದೇವಸ್ಥಾನಕ್ಕೆ ಭೇಟಿ ಕೊಟ್ಟು ದೇವರಿಗೆ ನಮಸ್ಕರಿಸಿ ಮೊದಲೇ ತಿಳಿಸಿ ನಮಗಾಗಿ ತಯಾರಾಗಿದ್ದ ಬೆಳಗಿನ ತಿಂಡಿಯನ್ನು ತಿಂದು ಕಾವೇರಿ ತೀರದಲ್ಲಿ ತುಲಾಸ್ನಾನ ಮಾಡಲು ಎಲ್ಲರೂ ಹೊರಟೆವು. ಕೆಲವರು ಕಾವೇರಿ ದಂಡೆಗೆ ಬಂದು ಬರೇ ನೀರನ್ನು ತಲೆಗೆ ಪ್ರೋಕ್ಷಿಸಿಕೊಳ್ಳುತ್ತೇವೆ. ತುಲಾಸ್ನಾನ ಮಾಡುವುದಿಲ್ಲವೆಂದರು. ಅದರಲ್ಲಿ ನಾನೂ ಒಬ್ಬನಾಗಿದ್ದೆ.

ಸ್ನಾನ ಮಾಡುವವರೆಲ್ಲರೂ ಮೊದಲು ಹೊರಟರು. ನಾವು ಕೆಲವರು ಪ್ರಕೃತಿ ಸೌಂದರ್ಯ ಸವಿಯುತ್ತಾ ಹಸಿರು ಹುಲ್ಲುಗಾವಲಿನ ಭೂಮಿ, ನಂತರ ಬೃಹತ್ ಆಲದ ಮರಗಳನ್ನು ನೋಡುತ್ತಾ ಕಾಲ ಕಳೆದೆವು. ನಂತರ ಒಂದೇ ಪ್ರಾಕಾರದಲ್ಲಿರುವ ಭೂವರಾಹ, ಶ್ರೀನಿವಾಸ, ಹಯಗ್ರೀವ, ಗಣಪತಿ ದೇವಸ್ಥಾನಕ್ಕೆ ಹೋಗಿ ಬಂದೆವು. ಅಲ್ಲಿ ಬೃಹತ್ ಗಾತ್ರದ ಮರಗಳಲ್ಲಿ ಸುಮಾರು ಒಂದು 50 ಮರಗಳಿರಬಹುದು. ಅದರಲ್ಲಿ ಕನಿಷ್ಠ 20 ರಿಂದ 25 ಮರಗಳಲ್ಲಿ ಜೇನು ಗೂಡುಗಳಿದ್ದವು. ಒಂದೊಂದು ಮರದಲ್ಲಿ ಮೂರು ನಾಲ್ಕು ದೊಡ್ಡಗಾತ್ರದ ಗೂಡುಗಳು. ಈ ಗೂಡುಗಳು ಒಂದೊಂದೂ ನಾನು ನಮ್ಮ ಮನೆ ಹಾಗೂ ಪಕ್ಕದ ಕಟ್ಟಡದಲ್ಲಿ ನೋಡಿದ ಗೂಡಿಗಿಂತ ಮೂರರಷ್ಟಿದ್ದವು. ಬಹಳ ಎತ್ತರದಲ್ಲಿ ಕಟ್ಟಿದ್ದರಿಂದ ಕೆಳಗೆ ಓಡಾಡುವ ಜನರಿಗೆ ಅಂತಹ ಅಪಾಯವಿಲ್ಲವೆಂದು ಈಗಾಗಲೇ ಆ ಸ್ಥಳದ ಪರಿಚಯವಿದ್ದವರು ಹೇಳಿದರು.

ಎಲ್ಲರೂ ತುಲಾಸ್ನಾನ ಮುಗಿಸಿ ಶ್ರೀಶ್ರೀ ರಂಗನಾಥ ಬ್ರಹ್ಮತಂತ್ರ ದೇಶಿಕರ ಬೃಂದಾವನದಲ್ಲಿ ಆರಂಭವಾಗಿದ್ದ ಸುದರ್ಶನ ಹೋಮದಲ್ಲಿ ಭಾಗಿಯಾದೆವು. ಹೋಮ ಆರಂಭವಾಗಿ ಒಂದು ಗಂಟೆಯಾಗಿರಬಹುದು. ಯಾರೋ ಭಕ್ತಾದಿಗಳು ಜೋರಾಗಿ ಜಾಗಟೆ ಬಾರಿಸುತ್ತಾ ಒಂದು ಪಂಜನ್ನು ಹಿಡಿದು ಅನತಿ ದೂರದಲ್ಲಿರುವ ಕಂಬಕ್ಕೆ ಸುತ್ತು ಹಾಕುತ್ತಿದ್ದರು. ಆಗ ಅದರ ಪಂಜಿನ ಹೊಗೆ ಅಲ್ಲೇ ಇದ್ದ ಮರದ ಮೇಲೆ ಹೋಗಿ ಹಾಗೂ ಜಾಗಟೆಯ ಶಬ್ದವೂ ಸೇರಿದ್ದರಿಂದ ಮೇಲಿದ್ದ ಜೇನುಗೂಡಿನ ಕೆಲವು ಜೇನುನೊಣಗಳು ಚದುರಿದವು. ಅಲ್ಲಿ ಹತ್ತಿರದಲ್ಲಿದ್ದ ಜನಗಳ ಚೀರಾಟದಿಂದ ಬೃಂದಾವನದ ಸನ್ನಿಧಿಯಲ್ಲಿ ಹೋಮ ನೋಡುತ್ತಿದ್ದವರ ನಮ್ಮ ಕಿವಿಗಳು ಚುರುಕಾದವು. ಏನು ಎಂದು ತಿಳಿಯುವಷ್ಟರಲ್ಲಿಯೇ ಒಬ್ಬ ಸೇವಾಕರ್ತರು ಜೋರಾಗಿ ಓಡುತ್ತಾ ಬಂದು ಜೇನುನೊಣಗಳು ಚದುರಿವೆ ಎಂದು ಕೂಗುತ್ತಾ ತಕ್ಷಣವೇ ಬೃಂದಾವನ ಸನ್ನಿಧಿಯ ಬಾಗಿಲನ್ನು ಒಳಗಡೆಯಿಂದ ಹಾಕಿಕೊಳ್ಳಿ ಎಂದಾಗ ಒಳಗಿದ್ದ ಒಬ್ಬರು ಎದ್ದು ಬೇಗ ಬಾಗಿಲು ಹಾಕಿಕೊಂಡರು. ಆದರೂ ಅಷ್ಟರೊಳಗೆ ಒಂದು ಐದಾರು ಜೇನುನೊಣಗಳು ಒಳಹೊಕ್ಕಿದ್ದವು. ಎಲ್ಲರೂ ತಮ್ಮ ತಮ್ಮ ಶಲ್ಯಗಳನ್ನು, ಕರ್ಚೀಪುಗಳನ್ನು ಕೈಯಲ್ಲಿ ಹಿಡಿದು ಅದೇನಾದರೂ ಹತ್ತಿರ ಬಂದರೆ ಮುಖ ಮುಚ್ಚಿಕೊಳ್ಳಲು ಸಿದ್ಧರಾದರು. ನಾನು ಹಾಗೂ ನನ್ನ ಕಿರಿಯ ಸೋದರಮಾವ ಸನ್ನಿಧಿಯ ಹಿಂಭಾಗಕ್ಕೆ ಓಡಿದೆವು. ಆದರೆ ಹೋಮ ಮಾಡುವ ಪುರೋಹಿತರು ಮಾತ್ರ ಅದು ಬೆಂಕಿಯ ಬಳಿ ಬರುವುದಿಲ್ಲವೆಂದು ಯಾವ

ಆತಂಕವೂ ಇಲ್ಲದೆ ಹೋಮವನ್ನು ನಿರಾಯಾಸವಾಗಿ ನಡೆಸುತ್ತಿದ್ದರು. ಆದರೆ ಆಚೆ ಕಡೆ ಜೇನುನೊಣಗಳು ಒಂದು ಹನ್ನೆರಡು ವರ್ಷದ ಬಾಲಕನ ತಲೆಯ ಮೇಲೆ ಕುಳಿತಾಗ ಅವನು ಭಯದಿಂದ ಕಿರುಚಿದಾಗ ಅವನು ತಂದೆ ಹಾಗೂ ಹೀಗೂ ಓಡಿಸಿದರೆಂದು ಒಳಗೆ ಒಬ್ಬರು ವರದಿ ನೀಡಿದರು. ಹೋಮ ಮಧ್ಯಾಹ್ನ 1.15 ಕ್ಕೆ ಮುಗಿಯಿತು.

ದೇವರ ದಯದಿಂದ ಸನ್ನಿಧಿಯ ಒಳಗಿದ್ದ ಐದಾರು ಜೇನುನೊಣಗಳು ಯಾರಿಗೂ ಏನೂ ಮಾಡದೆ ಮೂಲೆಯಲ್ಲಿ ಸೇರಿದ್ದವು. ಈಗ ಅಲ್ಲೇ ಹತ್ತಿರದ ಭೂವರಾಹ ಸ್ವಾಮಿ ದೇವಸ್ಥಾನದಲ್ಲಿ ಮಹಾಮಂಗಳಾರತಿ ಹಾಗೂ ನಂತರ ಊಟ ಆಯೋಜಿಸಲಾಗಿತ್ತು.

ಅಲ್ಲಿ ಮಹಾಮಂಗಳಾರತಿಗೆ 100+ ಜನ ಸೇರಿದ್ದರು. ಮಂಗಳಾರತಿ ಮುಗಿದ ನಂತರ ದೇವಸ್ಥಾನದ ಹೊರಗೆ ಪ್ರಾಕಾರದಲ್ಲಿ ಪ್ರಸಾದ ವಿತರಣೆ ಮಾಡಲಾಗುತ್ತಿತ್ತು. ನಾವೊಂದು ಏಳೆಂಟು ಜನ ಮೊದಲು ಆಚೆ ಹೋಗಿ ಮಾತನಾಡುತ್ತಾ ಪ್ರಸಾದ ತೆಗೆದುಕೊಂಡು ತಿಂದು ಆಚೆ ನಿಂತಿದ್ದೆವು. ಆಗ ಇದ್ದಕ್ಕಿದ್ದಂತೆ ಸರಿಸುಮಾರು ನೂರು ಜೇನು ನೊಣಗಳು ದೇವಸ್ಥಾನಕ್ಕೆ ದಾಳಿ ಮಾಡಿದವು. ಆ ವಿಶಾಲ ದೇವಸ್ಥಾನದ ಒಳಗಡೆ ಸುಮಾರು 90+ ಜನರಿದ್ದರು. ಆಗ ಅಲ್ಲಿನ ಇಬ್ಬರು ಸೇವಾಕರ್ತರು ದೇವಸ್ಥಾನದ ಎರಡು ಹೆಬ್ಬಾಗಿಲನ್ನು ಒಳಗಡೆಯಿಂದ ಮುಚ್ಚಿಕೊಂಡುಬಿಟ್ಟರು. ಹಾಗೂ ಒಂದಷ್ಟು ನೊಣಗಳು ದೇವಸ್ಥಾನದ ಒಳಗೆ ನುಗ್ಗಿದ್ದವು. ಅವರು ಬಾಗಿಲು ಹಾಕಿಕೊಂಡದ್ದರಿಂದ ನಾವು ಏಳೆಂಟು ಜನ ಆಚೆ ಕಕ್ಕಾಬಿಕ್ಕಿಯಾಗಿ ನೋಡುತ್ತಾ ದೇವಸ್ಥಾನದ ಬಲಭಾಗಕ್ಕೆ ಓಡಿಹೋದೆವು. ಆಗ ಆ ಜೇನುನೊಣಗಳೆಲ್ಲಾ ನಮ್ಮನ್ನು ಅಟ್ಟಿಸಿಕೊಂಡು ಬಂದವು. ನಮ್ಮ ಗುಂಪಲ್ಲಿ ಮೂರು ಜನ ಹೆಂಗಸರು ಸೆರಗನಿಂದ ಸಂಪೂರ್ಣವಾಗಿ ಮುಖ ಮುಚ್ಚಿಕೊಂಡು ನಿಂತರು. ಮಿಕ್ಕವರೆಲ್ಲರೂ ಪಂಚೆ ಶಲ್ಯದಲ್ಲಿ ಇದ್ದುದರಿಂದ ಶಲ್ಯದಿಂದ ಮುಖ ಮುಚ್ಚಿ ಕೊಂಡರು. ನಾನೊಬ್ಬನೇ ಶರ್ಟ್ ಪ್ಯಾಂಟ್ ಹಾಗೂ ನನ್ನ ಟೋಪಿ. ಪ್ರತಿಯೊಬ್ಬರ ಮುಖದ ಮುಂದೆ ಏಳೆಂಟು ಜೇನುನೊಣಗಳು ಬಹಳ ರೋಷದಿಂದ ರೊಂಯ್ ಎಂದು ಶಬ್ದ ಮಾಡುತ್ತಾ ಕುಟುಕಲು ತಯಾರಿಗಿದ್ದಂತೆ ಕಾಣುತ್ತಿದ್ದವು. ಎಲ್ಲರೂ ಬಹಳ ಹೆದರಿದ್ದರು. ಅದರಲ್ಲೂ ಆ ಮೂವರು ಮಹಿಳೆಯರು ಕಿರುಚುತ್ತಿದ್ದರು. ನಾನು ನನ್ನ ಟೋಪಿಯಿಂದ ನನ್ನ ಮುಖ ಮರೆಮಾಚಿದರೂ ಅವುಗಳ ಆ ರಭಸದ ಹಾರಾಟ ತಾಳಲಾರದೆ ಅದು ಕುಟುಕಬಹುದೆಂಬ ಭಯದಿಂದ ಆ ಗುಂಪಿನಿಂದ ನಾನೊಬ್ಬನೇ ಆಚೆ ಹೋಗಿ ಟೋಪಿಯಿಂದ ಮುಖ ಮುಚ್ಚಿಕೊಂಡು ದೇವಸ್ಥಾನದ ಬಾಗಿಲು ತಟ್ಟಿ ಒಳಗೆ ಹೋಗುವ ಯೋಚನೆ ಮಾಡಿದೆ. ಗುಂಪಿನಿಂದ ಕದಲದೆ ಇದ್ದಿದ್ದರೆ ಚೆನ್ನಾಗಿರುತ್ತಿತ್ತೋ ಏನೋ?! ಅಷ್ಟು ಹೊತ್ತಿಗೆ ಆ ಗುಂಪಿನಿಂದ ಒಂದು 20-25 ಜೇನುನೊಣಗಳು ನನ್ನನ್ನು ಅಟ್ಟಿಸಿಕೊಂಡು ಬಂದು ನನ್ನ ತಲೆಯ ಮೇಲ್ಭಾಗ, ಹಣೆ, ಕಣ್ಣುಗಳ ಪಕ್ಕ ಜೋರಾಗಿ ಕುಟುಕಿದವು. ನಾನು ಭಯದಿಂದ ಜೋರಾಗಿ ಚೀರುತ್ತಾ ದಿಕ್ಕಾಪಾಲಾಗಿ ಓಡಲು ಶುರುಮಾಡಿದೆ. ಕಡೆಗೆ ದಿಕ್ಕು ತೋಚದೇ ಮತ್ತೆ ದೇವಸ್ಥಾನದ ಬಳಿ ಬಂದು ಮುಚ್ಚಿದ್ದ ಹೆಬ್ಬಾಗಿಲನ್ನು ಜೋರಾಗಿ ಬಡಿದೆ.

ಯಾರೋ ಬಾಗಿಲನ್ನು ಸ್ವಲ್ಪ ತೆಗೆದಾಗ ನನ್ನ ಸುತ್ತ ಜೇನುನೊಣಗಳು ಇದ್ದದ್ದನ್ನು ನೋಡಿ ಅವರೊಡನೆ ಇದ್ದ ಇನ್ನೊಬ್ಬರು 'ಅಯ್ಯೋ ಬಾಗಿಲು ತೆಗೀಬೇಡಿ, ಅವರೊಡನೆ ಜೇನುನೊಣಗಳು ದೇವಸ್ಥಾನದ ಒಳಗೆ ಬಂದುಬಿಡುತ್ತವೆ' ಎಂದಾಗ ನನಗೆ ಎಲ್ಲಿಲ್ಲದ ಕೋಪ ಬಂದಿತು. ಮೊದಲೇ ಒಂದು ಗುಂಪು ಜೇನುನೊಣಗಳು ನನ್ನನ್ನು ಕಡಿದು ಹಾಹಾಕಾರ ಉಂಟಾಗಿರುವ ಹಿನ್ನೆಲೆಯಲ್ಲಿ ಎಷ್ಟೊಂದು ಕಠೋರ, ಸ್ವಾರ್ಥಿ ಈ ಮನುಷ್ಯ ಎನ್ನಿಸಿತು . ಆಗ ಬಾಗಿಲು ತೆಗೆಯಲು ಬಂದವರು, 'ರೀ.. ಪಾಪ, ಅವರಿಗೆ ಜೇನುನೊಣಗಳು ಕಡಿದಿರುವಂತೆ ಕಾಣಿಸುತ್ತಿದೆ. ಪಾಪ.. ಬರಲಿ ಒಳಗೆ' ಎಂದು ಬಾಗಿಲು ತೆಗೆದು ತಕ್ಷಣ ಹಾಕಿಕೊಂಡರು.

ಒಳಗೆ ಇದ್ದವರೆಲ್ಲಾ ನೆಲದ ಮೇಲೆ ಅಂಗಾತ ಮಲಗಿದ್ದರು. ಕೆಲವರು ಬೋರಲು ಮಲಗಿದ್ದರು. ಇದು ಜೇನು ನೊಣಗಳಿಂದ ತಪ್ಪಿಸಿಕೊಳ್ಳುವ ಉಪಾಯವಂತೆ. ಹೀಗೆ ಮಲಗಿ ಏನಾದರೂ ಹೊದ್ದುಕೊಂಡು ಇದ್ದರೆ ಅವುಗಳ ನೆಲದ ಮಟ್ಟಕ್ಕೆ ಬಂದು ಕಚ್ಚುವುದಿಲ್ಲವಂತೆ.

ನನ್ನನ್ನು ಒಳಗಿದ್ದ ಆ ಕೃಷ್ಣಾಪುರದ ಸ್ಥಳೀಯನೊಬ್ಬ ಕುಳ್ಳಿರಿಸಿ ಒಂದು ಬಾಟಲ್ ನೀರು ಕುಡಿಯಲು ಹೇಳಿ ಏನೂ ಆಗುವುದಿಲ್ಲ, ಹೆಚ್ಚಾಗಿ ಟೆನ್ಷನ್ ಮಾಡಿಕೊಳ್ಳಬೇಡಿ ಎಂದು ಸಮಾಧಾನ ಮಾಡಿದ. ಒಳಗಿದ್ದ ಆ ಜನಸಮೂಹದಲ್ಲಿ ನಾನೊಬ್ಬನೇ ಕೇಂದ್ರ ಬಿಂದು ಆದೆ. ಏನಾದರೂ ಸಾಧನೆ ಮಾಡಿ ಕೇಂದ್ರ ಬಿಂದುವಾಗುವುದು ಸಂತಸ ತರುತ್ತದೆ. ಇದೀಗ ಸರಿಸುಮಾರು 15-20 ಜೇನುನೊಣಗಳಿಂದ ಕಚ್ಚಿಸಿಕೊಂಡು ಕನಿಕರದಿಂದ ಕೇಂದ್ರ ಬಿಂದುವಾಗಿದ್ದು ವಿಪರ್ಯಾಸ. ಕೆಲವರು ಅಯ್ಯೋ ಪಾಪ ಛೇ, ಎಂದೂ ಇನ್ನು ಕೆಲವರು 'ನೀವು ಅಲ್ಲೇ ತಕ್ಷಣ ಅಡ್ಡಡ್ಡ ಕೆಳಗೆ ಮಲಗಿಕೊಂಡು ಬಿಡಬೇಕಾಗಿತ್ತು. ಏಕೆ ಆ ಸ್ಥಳದಿಂದ ಓಡಿ ಬಂದಿರಿ? ಅವುಗಳಿಗೆ ಓಡಿದರೆ ರೋಷ ಹೆಚ್ಚಾಗಿ ಅಟ್ಟಿಸಿಕೊಂಡು ಬಂದು ಕಡಿಯುತ್ತವೆ' ಎಂದರು. ಮೊದಲಬಾರಿ ಯಾರಿಗೆ ಗೊತ್ತಿರುವುದು ಇವೆಲ್ಲ?!. ಹಾಗೂ ಹೀಗೂ ಅಲ್ಲಿಯ ಸ್ಥಳೀಯರಿಬ್ಬರು ನನ್ನ ತಲೆ, ಹಣೆ ಕೆನ್ನೆಯಿಂದ ಸುಮಾರು ಹದಿನೈದು ಮುಳ್ಳುಗಳನ್ನು ತೆಗೆದರು. ವಿಪರೀತ ನೋವಾಗುತ್ತಿತ್ತು. ಮುಖ ಬಹಳ ಕೆಂಪಾಗಾಗಿದೆ ಎಂದು ಎದುರುಗಡೆ ಇರುವವರು ಹೇಳುತ್ತಿದ್ದರು.

ನನ್ನ ಸೋದರಮಾವನ ಮಗಳು ಹಾಗೂ ಇತರ ನೆಂಟರು ಬಹಳ ನೊಂದರು. ನನ್ನ ಸೋದರಮಾವನ ಮಗಳಿಗಂತೂ ತಾನೇ ಕೃಷ್ಣಾಪುರಕ್ಕೆ ಇವನನ್ನು ಕರೆತಂದದ್ದು, ಈಗ ಈ ಸ್ಥಿತಿಗೆ ಪರೋಕ್ಷವಾಗಿ ತಾನೇ ಕಾರಣ ಎಂಬ ಅಪರಾಧಿ ಮನೋಭಾವ ಕಾಡುತ್ತಿತ್ತು.

ಆಗ ಅಲ್ಲಿದ್ದ ಒಬ್ಬರು ನೆಂಟರಿಗೆ ಅಲ್ಲಿನ ಸ್ಥಳ ಬಹಳ ಪರಿಚಯವಿದ್ದುದರಿಂದ ಡಾಕ್ಟರ್‌ಗೆ ಫೋನ್ ಮಾಡಿದರು. ಅವರು ಆಚೆ ಹೋಗಿರುವುದರಿಂದ ಅವರು ಬರುವುದು ಇನ್ನೂ ಒಂದು ಗಂಟೆ ಆಗುವುದು ಎಂದಾಗ ಅಷ್ಟು ಹೊತ್ತಿಗೆ ಊಟ ಮಾಡಿ ಮುಗಿಸಬಹುದು ಎಂದು ನಿರ್ಧಾರವಾಯಿತು.

ನನಗೋ ಜೇನಿನಿಂದ ಕಡಿಸಿಕೊಂಡಿದ್ದೇನೆ ಎಂಬ ಕನಿಕರದಿಂದ ವಿಶೇಷವಾದ ಉಪಚಾರ ಸಿಕ್ಕಿತು. ಆದರೂ ಆ ನೋವಿಗೆ ಹೆಚ್ಚು ಊಟ ಮಾಡಲಾಗಲಿಲ್ಲ. ಊಟ ಮಾಡಿದ ನಂತರ ನಮ್ಮ ನೆಂಟರ ಪರಿಚಯಸ್ಥರ ಮನೆಯಲ್ಲಿ ಡಾಕ್ಟರ್ ಬರುವವರೆಗೆ ವಿಶ್ರಾಂತಿ ತೆಗೆದುಕೊಳ್ಳಲು ಹೇಳಿ ಅವರೆಲ್ಲಾ ಹಾಲ್ ನಲ್ಲಿ ಮಾತನಾಡುತ್ತಿದ್ದರೆ ನಾನು ರೂಮ್ ನಲ್ಲಿ ಮಲಗಿದ್ದೆ. ಅರ್ಧಗಂಟೆ ವಿಶ್ರಾಂತಿ ತೆಗೆದುಕೊಂಡ ನಂತರ ತಿಂದಿದ್ದು ಸರಿಯಾಗಿ ಜೀರ್ಣವಾಗದೆ ವಾಂತಿ ಬರುವಂತಾಯಿತು. ಆಚೆ ಹೋಗಿ ತಿಂದದ್ದನ್ನೆಲ್ಲಾ ಕಕ್ಕುವಂತಾಯಿತು. ಎಲ್ಲರಿಗೂ ಗಾಬರಿ. ಜೇನುಕಡಿತದಿಂದ ಈ ರೀತಿ ಆಗುತ್ತಿದೆಯೇ ಎಂದು.

ಬಾಯಿ ಮುಕ್ಕಳಿಸಿ ಏಲಕ್ಕಿ ಬಾಯಿಗೆ ಹಾಕಿಕೊಂಡು ಮತ್ತೆ ಮಲಗಿದೆ. ಕಡೆಗೆ ಮಧ್ಯಾಹ್ನ 3.30ರ ವೇಳೆಗೆ ಡಾಕ್ಟರ್ ಬಂದು, ತಕ್ಷಣವೇ ಎಲ್ಲಾ ವಿಚಾರಿಸಿ ಮೊಟ್ಟ ಮೊದಲನೆಯದಾಗಿ ನನ್ನ ಬಿಪಿ ಚೆಕ್ ಮಾಡಿದರು. ಅದು ಸರಿಯಾಗೇ ಇತ್ತು. ಏಕೆಂದರೆ ಜೇನುನೊಣಗಳು ಕುಡಿದಾಗ ಆತಂಕಕ್ಕೆ ಬಿಪಿ ಏರುವುದಂತೆ. ಅದೇನೋ ನನಗೆ 15-20 ಜೇನುನೊಣಗಳು ಕಡಿದರೂ ಬಿಪಿ ಏರದ್ದಿದುದು ಆಶ್ಚರ್ಯ.

ಮತ್ತೊಂದು ಆಶ್ಚರ್ಯವೆಂದರೆ ಆ ಡಾಕ್ಟರ್ ಟೆಟಾನಸ್ ಇಂಜೆಕ್ಷನ್ ಬೇಡ, ಅದನ್ನು ತಕ್ಷಣವೇ ನೀಡಬಾರದು. ಅವರಿಗೆ ಕಡಿತದಿಂದ ಅಲರ್ಜಿಕ್ ರಿಯಾಕ್ಷನ್ ಆಗುವುದೇ ಎಂದು ಎರಡು ದಿನ ಗಮನಿಸಿ ನೀಡಬೇಕು. ಇವರಿಗೆ ಚರ್ಮ ಕೆಂಪಗಾಗಿದ್ದರೂ ಅಲರ್ಜಿಯಾದಂತೆ ಸದ್ಯಕ್ಕೆ ಕಾಣುತ್ತಿಲ್ಲ. ಹಾಗಾಗಿ ಮೂರು ತರಹದ ಮಾತ್ರೆಗಳನ್ನು 5 ದಿವಸಕ್ಕೆ ನೀಡುತ್ತಿದ್ದೇನೆ. ಅದನ್ನು ದಿನಕ್ಕೆ ಮೂರು ಬಾರಿ ತೆಗೆದುಕೊಳ್ಳಲಿ. ಈಗ ಸದ್ಯಕ್ಕೆ ಮೂರು ಮಾತ್ರೆಗಳನ್ನು ನುಂಗಿ ಎಂದು ಹೇಳಿದರು. ನಾನು ಹಾಗೆಯೇ ಮಾಡಿದೆ. ಡಾಕ್ಟರ್ ನನಗೆ ಏನೂ ಭಯಪಡಬೇಡಿ ನೀವು ಧೈರ್ಯವಂತರಂತೆ ಕಾಣುತ್ತೀರಿ ಎಂದು ಹುರಿದುಂಬಿಸಿ ಅಲ್ಲಿಂದ ಹೊರಟರು. ಅಲ್ಲಿಗೆ ಬಂದ ಸುಮಾರು ಜನ ನನ್ನನ್ನು ವಿಚಾರಿಸುತ್ತಲೇ ಇದ್ದರು. ನಾನು ಮೊದಲ ಬಾರಿ ಅತಿಥಿಯಾಗಿ ಭೇಟಿ ಕೊಟ್ಟ ಕೃಷ್ಣಾಪುರ ಜೇನುನೊಣಗಳ ಕಡಿತದಿಂದ ನನ್ನನ್ನು ವಿಐಪಿ ಯಾಗಿ ಮಾಡಿತ್ತು.

ಅಲ್ಲಿಂದ 5 ಗಂಟೆಗೆ ಬೆಂಗಳೂರಿಗೆ ಟಿಟಿಯಲ್ಲಿ ಪ್ರಯಾಣ ಬೆಳೆಸಿದೆವು. ಕಿಟಕಿಯಲ್ಲಿ ಎಲ್ಲರೂ ಅರ್ಧ ಗಂಟೆಗೊಮ್ಮೆ ಅದರಲ್ಲೂ ನನ್ನ ಸೋದರಮಾವನ ಮಗಳು ವಿಚಾರಿಸುತ್ತಲೇ ಇದ್ದಳು. ಹಾಗೂ ಹೀಗೂ ಬೆಂಗಳೂರು ತಲುಪಿ ನನ್ನನ್ನು ನಮ್ಮ ಮನೆಗೆ ಒಪ್ಪಿಸಿ ಮಿಕ್ಕಿದವರೆಲ್ಲಾ ವಾಪಸಾದರು. ಎಂಬತ್ತೈದು ದಾಟಿದ ಅಮ್ಮನಿಗೆ ಗಾಬರಿಯಾಗುವುದೆಂದು ನಾನು ಈ ವಿಷಯ ಹೇಳಲಿಲ್ಲ. ಮತ್ತೆ ರಾತ್ರಿ 10 ಗಂಟೆಗೆ ಮೂರ್ನಾಲ್ಕು ಜನ ಫೋನ್ ಮಾಡಿ ವಿಚಾರಿಸಿಕೊಂಡರು.

ಮಾರನೆಯ ದಿನ ಬೆಳಗ್ಗೆ ಎದ್ದಾಗ ಮುಖ ಊದಿಕೊಂಡಿತ್ತು. ಅಮ್ಮನಿಗೆ ಕಣ್ಣಿನ ದೃಷ್ಟಿ ಕ್ಷೀಣಿಸಿದ ಹಿನ್ನಲೆಯಲ್ಲಿ ಅದು ಅವರ ಕಣ್ಣಿಗೆ ಬೀಳಲಿಲ್ಲ. ಆದರೆ ನನ್ನ ಅಕ್ಕನ ಮಕ್ಕಳು ಮನೆಗೆ ಬಂದೊಡನೆಯೇ ನನ್ನನ್ನು ನೋಡಿ ಆಶ್ಚರ್ಯದಿಂದ ಏನಾಯಿತು ಎಂದು ವಿಚಾರಿಸಿದಾಗ ಒಂದು ಮಿನಿ ಸಿನಿಮಾನೇ ಪುನರಾವರ್ತನೆ ಆಯಿತು. 15 ಮುಳ್ಳುಗಳನ್ನು ತೆಗೆದರೂ ಒಂದೆರಡು ಮುಳ್ಳುಗಳು ಹುಬ್ಬಿನ ಮೇಲೆ ಹಾಗೇ ಉಳಿದಿದ್ದವು. ಡಾಕ್ಟರ್ ನನಗೆ ಅದನ್ನು ಬಲವಂತವಾಗಿ ಕೀಳಬೇಡಿ, ಅದಾಗದೇ ಒಂದು ವಾರದೊಳಗೆ ಉದುರಿಹೋಗುತ್ತದೆ ಎಂದಿದ್ದರು. ಹೇಗೋ ಒಂದು ವಾರದಲ್ಲಿ ನನ್ನ ಮುಖ ಮೊದಲಿನಂತೆ ಆಯಿತು.

ಅಬ್ಬಾ! ಅದೇನೋ ಹೇಳುತ್ತಾರಲ್ಲ. ದೇವರು ಯಾರು ಯಾರಿಗೆ ಎಲ್ಲೆಲ್ಲಿ ಯಾವಾಗ ಏನಾಗಬೇಕೆಂದು ಮುಹೂರ್ತ ಇಟ್ಟಿರುತ್ತೋನೋ ತಿಳಿಯದು. ಆದರೆ ಅದು ನಮ್ಮ ಕರ್ಮದಲ್ಲಿದ್ದರೆ ಅದನ್ನು ತೀರಿಸಲೇಬೇಕೆಂಬ ತತ್ವವು ಮನದಟ್ಟಾಯಿತು. ನೋಡಿ ವಿಧಿಯಾಟ ಹೇಗಿದೆ. ಸ್ವತಃ ನಮ್ಮ ಮನೆಯಂಗಳದಿ ಎರಡು ಬಾರಿ, ಪಕ್ಕದ ಕಟ್ಟಡದಲ್ಲಿ ಎರಡು ಬಾರಿ ಜೇನುಗೂಡು ಕಟ್ಟಿದರೂ ಅವುಗಳು ಚದುರಿದಾಗಲೂ ನಾನು ಅವುಗಳ ಕಡಿತದ ರುಚಿ ನೋಡಿರಲಿಲ್ಲ. ಆದರೆ ಇದೀಗ ಬಡ್ಡಿ, ಚಕ್ರಬಡ್ಡಿಯ ಸಮೇತ ನೂರಾರು ಕಿಲೋಮೀಟರ್ ದೂರದ ಕೃಷ್ಣಾಪುರದಲ್ಲಿ ಜೇನು ನೊಣಗಳಿಂದ ಕಡಿಸಿಕೊಂಡ ಅನುಭವವಾಯಿತು.

ಬಾಳೆಯ ಹಣ್ಣನ್ನು ತಿಂದು ಸಿಪ್ಪೆಯನ್ನೆಸೆವರು ಬೀದಿಗೆ. ಎಲ್ಲೋ ನೋಡುತ ಕಾಲಿಟ್ಟು ಜಾರುವನ್ಯರು ಕಷ್ಟವು ಬರುವುದು ಹೀಗೆ ಎಂಬ ಕವಿಯೊಬ್ಬರ ಮಾತುಗಳು ನೆನಪಿಗೆ ಬಂದಿತು. ಯಾರೋ ಹಾಕಿದ ಬೆಂಕಿಯ ಪಂಜಿಗೆ, ಜೇನುನೊಣಗಳು ಚದುರಿ ನಾನು ಕಷ್ಟವನ್ನು ಅನುಭವಿಸಬೇಕಾಯಿತು.

ಇದೇ ನೋಡಿ ನನ್ನ ಅನುಭವ ಕಥನ " ಜೇನುಗೂಡು, ಜೇನುನೊಣಗಳು ಹಾಗೂ ನಾನು".

***

ವರ್ಣೋತ್ಪತ್ತಿ

– ಗಣಪತಿ ಹೆಗಡೆ

ಬಹುಶಃ ಪೂರ್ವಕಾಲದಲ್ಲಿ, ಮನುಷ್ಯರು, ಪ್ರಾಣಿಗಳ ಹಾಗೆ ಪರಸ್ಪರ ಸಂವಹನವನ್ನು, 'ಮೂಕ ಭಾಷೆಯಲ್ಲಿಯೇ' ನಡೆಸುತ್ತಿದ್ದಿರಬೇಕು. ಅದರ ಜೊತೆ ಮೂಕ ಸನ್ನೆಗಳೂ ಸಂವಹನದಲ್ಲಿ ಸಹಕರಿಸುತ್ತಿದ್ದಿರಬಹುದು. ಶತಮಾನಗಳು ಉರುಳಿದ ಮೇಲೆ, ಮನುಷ್ಯನಲ್ಲಿ ಶಬ್ದೋಚ್ಚಾರದ ಪ್ರಕ್ರಿಯೆ ಶುರುವಾಗಿರಬೇಕು.

ಈಗಂತೂ ಯಾವುದೇ ಭಾಷೆಯಿರಲಿ, ಸಂವಹನಕ್ಕೆ, ಅರ್ಥವತ್ತಾದ ಶಬ್ದ ಹಾಗೂ ಸಂಬಂಧಿತ ವಾಕ್ಯ ಬೇಕೇ ಬೇಕು. ಶಬ್ದವೆನ್ನುವದು ಅರ್ಥಪೂರ್ಣವಾದ ಅಕ್ಷರಗಳ ಅಥವಾ ವರ್ಣಗಳ ಗುಂಪು ಎನ್ನುವದು ತಿಳಿದಿರುವದೇ ಆಗಿದೆ. ಶಬ್ದ ಒಮ್ಮೆಲೇ ಉಚ್ಚಾರವಾಗುವದಿಲ್ಲ. ಮೂಲತಃ ಮೊದಲು ಹುಟ್ಟಿಕೊಳ್ಳುವದು ವರ್ಣ. ವರ್ಣಗಳು ಕೂಡಿ ಶಬ್ದ. ಶಬ್ದಗಳು ಕೂಡಿ ವಾಕ್ಯ.

ಆದರೆ, ಕೇಶಿರಾಜನು ಶಬ್ದ ಹುಟ್ಟುವ ಕ್ರಿಯೆ ಹೇಗೆ ಎನ್ನುವದನ್ನು ತಿಳಿಸಿದ್ದಾನೆ.

'ಅನುಕೂಲ ಪವನನಿಂ ಜೀ।
ವನಿಷ್ಟದಿಂ ನಾಭಿಮೂಲದೊಳ್ ಕಹಳೆಯ ಪಾಂ॥ಗಿನವೋಲ್ ಶಬ್ದದ್ರವ್ಯಂ।
ಜನಿಯಿಸುಗುಂ ಶ್ವೇತಮದಱ ಕಾರ್ಯಂ ಶಬ್ದಂ॥'

(ಮಾತನಾಡಬೇಕೆಂಬ ವ್ಯಕ್ತಿಯ ಅಪೇಕ್ಷೆಯಂತೆ, ಅನುಕೂಲವಾದ ಗಾಳಿಯ ಸಹಾಯದಿಂದ ನಾಭಿಮೂಲದಲ್ಲಿ ಕಹಳೆಯ ಅಕಾರದಲ್ಲಿ ಶಬ್ದವೆಂಬ ದ್ರವ್ಯವು ಹುಟ್ಟುತ್ತದೆ. ಅದರ ಬಣ್ಣ ಬಿಳಿ. ಆ ದ್ರವ್ಯದ ಕಾರ್ಯವೇ ಶಬ್ದ)

ಇಲ್ಲಿ ಶಬ್ದ ಎನ್ನುವದನ್ನು ಅಕ್ಷರಕ್ಕೆ ಸಮೀಕರಿಸಿ ಹೇಳಿದ್ದು.

ಇನ್ನೊಂದು ಸೂತ್ರದಲ್ಲಿ,

'ತನು ವಾದ್ಯಂ ನಾಲಗೆ ವಾ।
ದನದಂಡಂ ಕರ್ತೃವಾತ್ಮನವನ ಮನೋವೃ॥
ತ್ತಿನಿಮಿತ್ತಮಾಗಿ ಶಬ್ದಂ।
ಜನಿಯಿಸುಗುಂ ಧವಳವರ್ಣಮಕ್ಷರರೂಪಂ॥

(ದೇಹವೇ ವಾದ್ಯ. ನಾಲಗೆ ಬಾಜನೆ ಮಾಡುವ ಅಂದರೆ ವಾದ್ಯವನ್ನು ನುಡಿಸುವ ಕುಡುಹು (ದಂಡ). ಬಾಜಿಸುವವನು ಆತ್ಮ. ಅವನ ಮನಸ್ಸಿನ ಅಪೇಕ್ಷೆಯಂತೆ ಶಬ್ದವು ಬಿಳಿಯ ಬಣ್ಣದಿಂದ ಅಕ್ಷರದ ರೂಪದಲ್ಲಿ ಉತ್ಪತ್ತಿಯಾಗುತ್ತದೆ.)

ಆತ್ಮ, ಬಿಳಿಯ ಬಣ್ಣದ ದ್ರವ್ಯ, ಆ ದ್ರವ್ಯದ ಕೆಲಸವೇ ಶಬ್ದ, ಇವೆಲ್ಲಾ ಒಂದು ಬಗೆಯ ಗೋಜಲುಗಳ ಹಾಗೆ ಕಾಣಿಸುತ್ತವೆ. ಆತ್ಮ ಅಂದರೆ ಮಾತನಾಡುವ ಮನುಷ್ಯ ಅಂತಿರಬೇಕು. ಬಿಳಿಯ ಬಣ್ಣದ ದ್ರವ್ಯ ಅಂದರೆ ಶುದ್ಧವಾದ ಅಕ್ಷರ ಅಂತಿರಬೇಕು. ಆದರೆ ಶುದ್ಧಾಶುದ್ಧಗಳು, ಅಕ್ಷರ ಹುಟ್ಟುವಾಗಲೇ ಹೇಗೆ ತೀರ್ಮಾನಿಸಲ್ಪಡುತ್ತವೆ?.

ಹೀಗೆ ಹೇಳಿದ ಕೇಶಿರಾಜನು ನಾಭಿಮೂಲದಿಂದ ಅನುಕೂಲ ಗಾಳಿಯಿಂದ ಹುಟ್ಟಿದ ಅಕ್ಷರಗಳು ಬೇರೆ ಬೇರೆ ಸ್ವರೂಪವನ್ನು ತಳೆಯುವದು ಹೇಗೆ ಎನ್ನುವದನ್ನೂ ಹೇಳಿದ್ದಾನೆ.

ಕೊರಲುಂ ಜಿಹ್ವಾಮೂಲಮು।
ಮುರಮುಂ ತಾಳುಗೆಯುಮೋಷ್ಠಮುಂ ನಾಸಿಕೆಯುಂ।
ಶಿರಮುಂ ದಂತಮುಮೆಂದ।
ಕ್ಕರಮುದಯಿಪ ತಾಣಮಾದುವೀ ಪೇೞ್ದೆಂಟುಂ॥

(ಕಂಠ, ನಾಲಿಗೆಯ ಬುಡ, ಎದೆ, ಗಲ್ಲ, ತುಟಿ, ಮೂಗು, ತಲೆ, ಹಲ್ಲು ಹೀಗೆ ಎಂಟು ಸ್ಥಾನಗಳು ಅಕ್ಷರಗಳ ಹುಟ್ಟುವ ಸ್ಥಳಗಳು.)

ಹೀಗೆ ಕಂಠ, ನಾಲಿಗೆಯ ಬುಡ ಮುಂತಾದ ಸ್ಥಳಗಳಲ್ಲಿ ಅಕ್ಷರಗಳು ಹುಟ್ಟಿದಾಗ ಬೇರೆ ಬೇರೆ ಸ್ವರೂಪವನ್ನು ಪಡೆಯುತ್ತವೆ. (ಅ, ಕ, ಪ, ಹೀಗೆ ಬೇರೆ ಬೇರೆ ವರ್ಣಗಳು).

ಆದರೂ ಇಲ್ಲಿ ಅಕ್ಷರಗಳ ಹುಟ್ಟಿಗೆ ಸರಿಯಾದ ವಿವರಣೆ ದೊರೆಯುವದಿಲ್ಲ.

ಸಂಸ್ಕೃತದಲ್ಲಿ ಇನ್ನೂ ಹೆಚ್ಚಿನ ವಿವರಣೆ ದೊರಕುತ್ತದೆ.

"ವಿವಿಧ ಶಬ್ದಗಳ ಸಂಪರ್ಕದಿಂದ ಬಾಯಿಯ ಆಸ್ಯ ಅಥವಾ ಸ್ಥಳಗಳು ಅಥವಾ ಭಾಗಗಳು ಮುಖ್ಯವಾಗಿ ಈ ಕೆಳಗಿನವುಗಳಾಗಿವೆ:–
1. ಕಂಠ 'ಗಂಟಲು', 2. ತಾಲು 'ಅಂಗುಲ', 3. ಮೂರ್ಧ್ವ, 'ತಲೆ', 4. ಹಲ್ಲು, ಹಲ್ಲುಗಳು, 5. ಒಷ್ಠೌ 'ತುಟಿಗಳು', 6. ನಾಸಿಕ 'ಮೂಗು'.

ಸಿದ್ಧಾಂತ ಕೌಮುದಿಯಲ್ಲಿ,

1. ಅಕುಹವಿಸರ್ಜನೀಯಾನಾಂ ಕಂಠಃ.
ಅ, ಆ, ಕವರ್ಗ, ಹ, ವಿಸರ್ಗಃ–ಕಂಠ್ಯಃ (ಕಂಠದಿಂದ ಹುಟ್ಟಿಕೊಳ್ಳುವವು)

2. ಇಚುಯಶಾನಾಂ ತಾಲು.
ಇ, ಈ, ಚವರ್ಗ, ಯ, ಶ–ತಾಲವ್ಯ (ಬಾಯಂಗುಳದ ಮೇಲ್ಭಾಗ ಹಾಗೂ ಮುಂಭಾಗವನ್ನು ಸ್ಪರ್ಶಿಸಿದಾಗ)

3. ಋಟುರಷಾಣಾಂ ಮೂರ್ಧಾ.
ಋ, ೠ, ಟವರ್ಗ, ರ, ಷ–ಮೂರ್ಧನ್ಯಗಳು. (ಬಾಯಂಗುಳದ ಮೇಲ್ಭಾಗದ ಮಧ್ಯಭಾಗ)

4. ಲೃತುಲಸಾನಾಂ ದಂತಾಃ.
ಲೃ, ತವರ್ಗ, ಲ, ಸ–ದಂತ್ಯಗಳು (ನಾಲಿಗೆ ಹಲ್ಲು ಹಾಗೂ ದಂತಗಳಿಗೆ ತಾಗುವದು)

5. ಉಪೂಪದ್ಮಾನೀಯಾನಾಮೋಷ್ಠೌ.

(ಉ, ಊ, ಪವರ್ಗ, ಉಪದ್ಮಾನೀಯಮ್ (ಪ, ಫ ಗಳ ಹಿಂದಿನ ವಿಸರ್ಗೋಚ್ಚಾರ–ಉದಾ: ನಃ ಪ್ರಚೋದಯಾತ್– ಓಷ್ಠ್ಯಗಳು–ತುಟಿಗಳು ಒಂದಕ್ಕೊಂದು ತಾಕುತ್ತವೆ.)

6. ಏದೈತೋಃ ಕಂಠತಾಲು.

ಏ, ಐ ಗಳು ಕಂಠ ಹಾಗೂ ತಾಲು ಇವೆರಡರಿಂದ ಹುಟ್ಟುವವು.

7. ಓದೌತೋಃ ಕಂಠೋಷ್ಠಂ.

ಓ, ಔ ಕಂಠ ಹಾಗೂ ತುಟಿಗಳಿಂದ ಹುಟ್ಟುವವು.

8. ವಕಾರಸ್ಯ ದಂತೋಷ್ಠಂ.

ವಕಾರವು ದಂತ ಹಾಗೂ ಓಷ್ಠದ ಸಹಾಯದಿಂದ.

9. ಜಿಹ್ವಾಮೂಲಿಯಸ್ಯ ಜಿಹ್ವಾಮೂಲಂ.

ಕ, ಖ ಗಳ ಹಿಂದಿನ ಅರ್ಧ ವಿಸರ್ಗವೇ ಜಿಹ್ವಾಮೂಲ. ಉದಾ– ಮನಸಃ ಕಾಮಮಾಕೂತಿಮ್ ಇಲ್ಲಿ ಮನಸಹ್ ಕಾಮಮಾಕೂತಿಮ್ ಎನ್ನಬೇಕು.

10. ಞಮಙಣನಾನಾಂ ನಾಸಿಕಾಚ.

ಞ, ಮ, ಙ, ಣ , ನ ಈ ಅನುನಾಸಿಕಗಳು ಕಂಠಾದಿಗಳು ಹಾಗೂ ಮೂಗು ಉಗಮ ಸ್ಥಾನ.

11. ನಾಸಿಕೋಽನುಸ್ವಾರಸ್ಯ.

ಅನುಸ್ವಾರದ ಉತ್ಪತ್ತಿ ಮೂಗಿನಿಂದ.

ಇತಿ ಸ್ಥಾನಾನಿ.

ಹೀಗೆ, ವರ್ಣಗಳ ಉತ್ಪತ್ತಿ ಹೇಗೆ ಆಗುತ್ತವೆ ಎನ್ನುವ ವಿವರಣೆಯನ್ನು ಕಾಣುತ್ತೇವೆ.

ಙ, ಞ, ಣ, ನ, ಮ ಗಳು ಕ, ಚ, ಟ, ತ, ಪ ಗಳ ಹಾಗೆ ಕಂಠ, ತಾಲು ಮೂಲಗಳ ಜೊತೆಗೆ ಮೂಗಿನ ಸಹಾಯವನ್ನೂ ತೆಗೆದುಕೊಳ್ಳುತ್ತವೆ.

ವರ್ಣಗಳು ಹುಟ್ಟಿಕೊಳ್ಳುವಾಗ ನಾಲಿಗೆಯ ಪಾತ್ರ ಬಹಳ ಮಹತ್ವದ್ದು. ಈಗಲೂ ನಾವು, ಯಾರಾದರೂ ಮಾತನಾಡಲು ತಡವರಿಸಿದಾಗ 'ನಾಲಿಗೆ ಸರಿಯಾಗಿ ಹೊರಳುವದಿಲ್ಲವೇ' ಅಂತ ಕೇಳುತ್ತೇವೆ. ಕಂಠ ಹಾಗೂ ತುಟಿಯಿಂದ ಅಕ್ಷರ ಹೊರಡುವದರ ಜೊತೆಗೆ ಬಾಯಿಯ ಒಳಗಿನ ಬೇರೆ ಬೇರೆ ಸ್ಥಾನಗಳನ್ನು (ತಾಲು, ಮೂರ್ಧ, ದಂತ) ನಾಲಿಗೆ ಸ್ಪರ್ಶಿಸಿದಾಗ ಬೇರೆ ಬೇರೆ ಅಕ್ಷರಗಳು ಹುಟ್ಟಿಕೊಳ್ಳುತ್ತವೆ.

ಇದು ಅಕ್ಷರಗಳು ಹೇಗೆ ಉತ್ಪತ್ತಿಯಾಗುತ್ತವೆ ಎನ್ನುವ ಕೇವಲ ಸ್ಥೂಲವಾದ ಪರಿಚಯ.

"ತುಲ್ಯ ಆಸ್ಯೇ ಪ್ರಯತ್ನೋ ಯಸ್ಯ ವರ್ಣಸ್ಯ ಯೇನ ವರ್ಣೇನ ಸಹ ಸ ಸಮಾನಜಾತೀಯಂ ಪ್ರತಿ ಸವರ್ಣಸಂಜ್ಞೋ ಭವತಿ" ॥

ಯಾವುದರ ಉಚ್ಚಾರಣೆ ಮತ್ತು ಪ್ರಯತ್ನದ ಸ್ಥಳವು ಸಮಾನವಾಗಿರುತ್ತದೆಯೋ ಅವುಗಳನ್ನು ಸವರ್ಣ ಅಥವಾ ಏಕರೂಪದ ಅಕ್ಷರಗಳು ಎಂದು ಕರೆಯಲಾಗುತ್ತದೆ."

(ಮುಖದ ಅಂದರೆ ಬಾಯಿಯ ಪ್ರಯತ್ನದ ಸ್ಥಳವು ಸಮಾನವಾಗಿದ್ದಲ್ಲಿ ಅವು ಸವರ್ಣಗಳು. ಹೀಗೆ ಅ-ಆ, ಇ-ಈ, ಉ-ಊ ಇವು ಸವರ್ಣಗಳು.)

ಸಂಸ್ಕೃತದಲ್ಲಿಯ ಸಂಧಿಯ ಉತ್ಪತ್ತಿಗೂ ಅಕ್ಷರೋತ್ಪತ್ತಿಯ ಮೂಲಕ್ಕೂ ಸಂಬಂಧವಿದೆ.

'ಸವರ್ಣೇ ದೀರ್ಘಃ' ಇದು ಸವರ್ಣದೀರ್ಘ ಸಂಧಿಯ ಸೂತ್ರ. ಅ ಹಾಗೂ ಆ, ಇ ಹಾಗೂ ಈ, ಉ ಹಾಗೂ ಊ ಪರಸ್ಪರ ಪರವಾಗಿದ್ದಲ್ಲಿ ದೀರ್ಘವಾದ ಅಕ್ಷರಗಳೂ ಕಂಠ, ತಾಲು ಹಾಗೂ ಓಷ್ಠ ಗಳಲ್ಲಿ ಹುಟ್ಟುವ ಅಕ್ಷರಗಳೇ ಆಗುತ್ತವೆ.

ಇನ್ನು ಗುಣಸಂಧಿಯನ್ನು ನೋಡೋಣ.

ಭೂತ+ಈಶ್ವರ=ಭೂತೇಶ್ವರ.
ಅ+ಈ (ಕಂಠ+ತಾಲು)=ಏ (ಕಂಠತಾಲುಃ)

ಭಾಂಡ+ಉದರ=ಭಾಂಡೋದರ
ಅ+ಉ (ಕಂಠ+ಓಷ್ಠ)=ಓ(ಕಂಠೋಷ್ಠ)

ವೃದ್ಧಿಸಂಧಿಯಲ್ಲಿ;

ವನ+ಓಷಧಿ=ವನೌಷಧಿ
ಅ+ಓ (ಕಂಠ+ಕಂಠೋಷ್ಠ)=ಔ (ಕಂಠೋಷ್ಠ)

ಲೋಕ+ಏಕ=ಲೋಕೈಕ
ಅ+ಏ(ಕಂಠ+ತಾಲು)=ಐ(ಕಂಠತಾಲು)

(ಎಲ್ಲಾ ಸಂಧಿಗಳಿಗೂ ಈ ನಿಯಮ ಅನ್ವಯಿಸುವದಿಲ್ಲ)

ಈಗ ಹೇಳಿದ,

ಅಕುಹವಿಸರ್ಜನೀಯಾನಾಂ ಕಂಠಃ
ಇಚುಯಶಾನಾಂ ತಾಲುಃ
ಋಟುರಷಾಣಾಂ ಮೂರ್ಧಾ
ಲೃತುಲಸಾನಾಂ ದಂತಃ
ಉಪೂಪಧ್ಮಾನೀಯಾನಾಂ ಓಷ್ಠಂ
ಏದೈತೌ ಕಣ್ಠತಾಲುಃ
ಓದೌತೌ ಕಣ್ಠೋಷ್ಠಂ
ವಕಾರಸ್ಯ ದಂತೋಷ್ಠಂ
ಜಿಹ್ವಾಮೂಲಿಯಸ್ಯ ಜಿಹ್ವಾಮೂಲಂ
ಞಮಙಣನಾಂ ನಾಸಿಕಾ

ನಾಸಿಕೋಽನುಸ್ವಾರಸ್ಯ

ಈ ಸೂತ್ರ 'ಅ' ಕಾರದಿಂದ 'ಳ' ಕಾರದ ವರೆಗಿನ ಅಕ್ಷರಗಳಿಗೆ ಮಾತ್ರ ಅನ್ವಯಿಸಿದ ಹಾಗೆ ಕಾಣಿಸುತ್ತದೆ.

ಆದರೆ ೞ ಹಾಗೂ ಱ ಅಕ್ಷರಗಳು ಮತ್ತು ಫ಼ ಹಾಗೂ ಜ಼್ (ಫ಼ಜ಼ಲ್) ಸಹ ಈ ಸೂತ್ರಗಳ ಹೊರತಾಗಿವೆ.

ಹಾಗೆ ನೋಡಿದರೆ ಎಷ್ಟು ಅಕ್ಷರಗಳು ಇದ್ದಾವೆಯೋ ಅಷ್ಟು ಬಗೆಯಿಂದ ವರ್ಣೋತ್ಪತ್ತಿಯನ್ನು ಗುರುತಿಸಬಹುದು. ಇ ಹಾಗೂ ಈ ತಾಲುವಿನಲ್ಲಿ ಹುಟ್ಟಿಕೊಳ್ಳುತ್ತವೆ ಎನ್ನುವದು ಸ್ಥೂಲವಾಗಿ ಸರಿ. ಇವುಗಳಲ್ಲಿಯೂ ಸೂಕ್ಷ್ಮ ವ್ಯತ್ಯಾಸವನ್ನು ಯಾರಾದರೂ ಗುರುತಿಸಲು ಸಾಧ್ಯ.

ಕೇವಲ ಒಂದು ಅಕ್ಷರದಿಂದ ಇನ್ನೊಂದು ಅಕ್ಷರಕ್ಕೆ ಹೊರಳುವಾಗ ನಾಲಿಗೆ ಹಾಗೂ ತುಟಿ ಎಷ್ಟು ಬದಲಾವಣೆ ಹೊಂದುತ್ತವೆ ಎನ್ನುವದನ್ನು ತಿಳಿದಾಗ, ಶಬ್ದಗಳನ್ನು ಹಾಗೂ ವಾಕ್ಯಗಳನ್ನು ಉಸುರುವಾಗ ನಾಲಿಗೆ ಹಾಗೂ ಬಾಯಿಯ ಶ್ರಮವನ್ನು ಅರ್ಥಮಾಡಿಕೊಳ್ಳಬಹುದು.

ಬಹುಶಃ ಇದಕ್ಕಾಗಿಯೇ 'ಮಾತು ಬೆಳ್ಳಿ ಮೌನ ಬಂಗಾರ' ಅಂತ ಹೇಳಿರಬಹುದು.

***

ನಿನಗಾಗಿ

– ವೆಂಕಟೇಶ ಕಾಮತ್

"ಹೆತ್ತವರು ಇಬ್ಬರು,
ಒಡಹುಟ್ಟಿದವರು ಇನ್ನಿಬ್ಬರು,
ಸಂಬಂಧಿಗಳು,
ಜೊತೆಬೆಳೆದವರು ಹತ್ತು ಹದಿನಾರು.
ನಿನ್ನ ಇವರೆಲ್ಲರನ್ನು ಬಿಟ್ಟು
ನನ್ನ ಇವರೆಲ್ಲರನ್ನು ನನಗಿಂತ ಹೆಚ್ಚಾಗಿ ಪ್ರೀತಿಸಿರುವೆ

ಓಟದಲ್ಲಿ ಕೊನೆಯ ಓಟಗಾತಿಯಾಗಿ ಬಂದು,
ಎಲ್ಲರನ್ನು ಬದಿಗೊತ್ತಿ ಈಗ ನಾನೇ ನಿನ್ನ ಹಿಂದಿರುವೆ

ಹೆಂಡವೇ ಮುಟ್ಟದ ನನ್ನನ್ನು
ಕುಡುಕನ ಹಾಗೆ ಮಾಡಿರುವೆ,
ಏಕೆಂದರೆ..
ಕುಡುಕನಿಗೆ ಯಾವಗಲು ಬೇಕು ಹೆಂಡ ಅತಿ,
ನನಗೂ ಬೇಕೇಬೇಕು ಯಾವಾಗಲೂ ಹೆಂಡತಿ.

ಪುಟ್ಟ ಕನಸೊಂದ ಕಂಡೆ,
ಕಿಕ್ಕಿರಿದ ಜನಸಂದಣಿ
ಎಲ್ಲರ ಕಿವಿಗಡಚಿಕ್ಕುವ ಚಪ್ಪಾಳೆ
ಹಿನ್ನಲೆಯಲಿ ಕೇಳುತಿದೆ
ಇತ್ತಿಚಿನ ಮದುರ ಹಿಂದಿ ಹಾಡು..
"ತುಮ್ಹಿಹೊ ತುಮ್ಹಿಹೊ ಜ್ಹಿಂದಗಿ ತುಮ್ಹಿಹೋ. ,
ನೋಡುತ್ತಿದ್ದಂತೆ ನಿನ್ನನ್ನು ಸ್ಟೇಜಿನ ಮೇಲೆ
ಕರೆದು ಕೊಡುತ್ತಿದ್ದಾರೆ ನಿನಗೆ
ಹೊಳೆಯುತ್ತಿರುವ ಚಿನ್ನದ ಪದಕ..
ಹತ್ತಿರ ಹೋಗಿ ನೋಡಿದಾಗ ಕಂಡಿತು ಅದು
ನಾ ಮಾಡಿಸಿದ ನನ್ನ ಹೃದಯದಾಕಾರದ
ಹೊನ್ನಿನ ಪದಕ

ಮೇಲೆ ಚೆಂದದಿ ಬರೆದಿದೆ
"ಓ, ಹೆಂಡತೀ ನೀನೆಷ್ಟು ಒಳ್ಳೆಯವಳು"

***

ಹೆಜ್ಜೆಗಳು

– ವೆಂಕಟೇಶ ಕಾಮತ್

ನನ್ನ ಪುಟ್ಟ ಕಂದಮ್ಮನ ಪುಟ್ಟ ಪುಟ್ಟ ಪಾದಗಳು
ತಗುಲಿದಾಗ ಮೀಸೆ ಇವಕೆ
ಬರುವುದೊಂದು ನಗೆ ಮುಗಳು..

ಕಲಿತಳವಳು ನಡೆಯಲು ಇಟ್ಟು ಪುಟ್ಟ ಪುಟ್ಟ ಹೆಜ್ಜೆ
ಓಡಾಡಿದಳು ಮನೆ ತುಂಬ ತೊಟ್ಟು ಗಲಗಲ ಗೆಜ್ಜೆ

ಮುದ್ದಿನಿಂದ ಎತ್ತಿ ಹಿಡಿದು ಬಿಟ್ಟೆನಿವಳ ಶಾಲೆಗೆ
ಕಲಿತು ನಲಿತು ಆಗಲೆಂದು ಜಾಣ ಹುಡುಗಿ ನಾಳೆಗೆ
ಹೋಗಲಿಲ್ಲ ಇವಳು ಎಂದೂ ಅಪ್ಪ ಅಮ್ಮನನ್ನು ಬಿಟ್ಟು
ಓದಲಿಲ್ಲ ಎಂದೂ ಇವಳು ಹಗಲು ರಾತ್ರಿ ನಿದ್ದೆ ಕೆಟ್ಟು.

ಓದು ಮುಗಿಸಿ ಒಳ್ಳೆ ಕೆಲಸ ತಾನೇ ಹುಡುಕಿ ಕೊಂಡಳು
ಎಲ್ಲರೊಪ್ಪುವ ಬಾಳಸಂಗಾತಿ ಅವಳೇ ಮೆಚ್ಚಿ ತಂದಳು
ಮೆಹಂದಿ, ಹಳದಿ ಹಾಡು ಕುಣಿತ ಎಲ್ಲ ಸಂತಸ ಅವಳದು
ಕಾಲ್ತೊಳೆವಾಗ ತಡೆಯಲಾಗದೆ ಹರಿದ ಬಳಬಳ ಕಣ್ಣೀರು
ಮಾತ್ರ ನನ್ನದು.

(ಅಪ್ಪನ ದಿನ – Father's Day ಯಂದು
ನಾನು ಅಪ್ಪ – ಬರೆದ್ದದ್ದು ಮಗಳು 'ಅಧಿತಿ')

***

ಮಣಿ ಮನೆ ಕತೆ

– ಪೂರ್ಣಿಮ ಭಗವಾನ್

'ನೀನು ಶ್ಯಾವಿಗೆ ಮಾಡುತ್ತೀಯಾ, ಮರದ ಶಾವಿಗೆ ಮಣೆ ಉಪಯೋಗಿಸುತ್ತಾ ಇದ್ದೀಯಾ, ಊರಿನಲ್ಲಿ ಬೇರೆ ಎಲ್ಲಾ ಸಿಗುತ್ತದೆ. ಹೋಳಿಗೆ ಸಹ ಸಿಗುತ್ತದೆ. ಆದರೆ ಒತ್ತು ಶಾವಿಗೆ ಮಾತ್ರ ಸಿಗುವುದಿಲ್ಲ. ನೀನು ಉಪಯೋಗಿಸದೆ ಇದ್ದರೆ ಊರಿನಲ್ಲಿರುವ ತಮ್ಮನಿಗೆ ಮಾಡಿಕೊಡೋಣ ಎಂದುಕೊಂಡೆ' ಎಂದು ಬಹಳ ದಿನಗಳ ನಂತರ ಮನೆಗೆ ಬಂದ ತಕ್ಷಣ ಮಾತು ಆರಂಭಿಸಿದರು ಪಾತಕ್ಕ. ಕುಶಲೋಪರಿಯನ್ನು ವಿಚಾರಿಸುವ ಸೌಜನ್ಯವೂ ಸಹ ಆ ಕ್ಷಣದಲ್ಲಿ ಅವರಿಗೆ ಮರೆತುಹೋಗಿತ್ತು. ಮನೆಗೆ ಬಂದ ತಕ್ಷಣವೇ ಪಾತಕ್ಕನಿಂದ ಇಂತಹ ವರ್ತನೆ, ಪ್ರಶ್ನೆಯನ್ನು ನಿರೀಕ್ಷಿಸದೆ ಇದ್ದ ಗಂಗಳಿಗೆ ಒಂದು ರೀತಿಯ ದಿಗ್ಭ್ರಮೆಯಾಯಿತು.

ಆದರೂ ತಕ್ಷಣವೇ ಸಾವರಿಸಿಕೊಂಡು, 'ಇಲ್ಲ ಪಾತಕ್ಕ, ಆ ಮಣೆ ಬಹಳ ಸಣ್ಣದು, ಬೇಯಿಸಿದ ಹಿಟ್ಟನ್ನು ಅದರಲ್ಲಿ ಕೇವಲ ಒಂದು ಇಂಚು ಅಗಲ, ಒಂದೂವರೆ ಇಂಚು ಉಂಡೆ ಮಾಡಿ ಹಾಕಬಹುದು. ಅದರಲ್ಲೂ ಅರ್ಧಕ್ಕಿಂತ ಹೆಚ್ಚು ಹಿಟ್ಟು ಶಾವಿಗೆಯಾಗಿ ಬರುವ ಬದಲಿಗೆ ಪಕ್ಕದಿಂದ ಬರುತ್ತಾ ಇತ್ತು. ಮತ್ತೆ ಮತ್ತೆ ಹಿಟ್ಟನ್ನು ಉಂಡೆ ಮಾಡಿ ಮಣೆಯೊಳಗೆ ಹಾಕಿ ಒತ್ತಬೇಕಿತ್ತು. ಅದರಲ್ಲಿ ಶಾವಿಗೆ ಮಾಡಿದರೆ ಕಷ್ಟಪಟ್ಟು ಒಂದು ಗಂಟೆ ಒತ್ತಿದರೆ ಒಬ್ಬರು ಹೊಟ್ಟೆ ತುಂಬಾ ತಿನ್ನಬಹುದು. ಊರಿನಿಂದ ಕೊಟ್ಟು ಕಳಿಸಿದ್ದಾರಲ್ಲ ಎಂದು ಮಣೆ ಕಳುಹಿಸಿದ ಹೊಸದರಲ್ಲಿ ಒಂದೇ ಒಂದು ಭಾನುವಾರ ಅದರಲ್ಲಿ ಶಾವಿಗೆಯನ್ನು ಮಾಡಿ ನಿಮ್ಮ ತಮ್ಮನ ಆಸೆಯನ್ನು ತೀರಿಸಿದೆ. ನನ್ನ ಬಳಿ ಅಷ್ಟೊಂದು ಸಮಯವಾದರೂ ಎಲ್ಲಿತ್ತು. ನಾನು ಸಹ ಕೆಲಸಕ್ಕೆ ಹೋಗಬೇಕಾಗಿತ್ತು. ಸಿಗುವ ಒಂದು ಭಾನುವಾರ ಮನೆ ಸ್ವಚ್ಛಗೊಳಿಸುವ, ಇನ್ನಿತರ ಸಾಮಗ್ರಿಗಳನ್ನು ಹೊಂದಿಸಿಟ್ಟುಕೊಳ್ಳುವ ಒಂದಷ್ಟು ಕೆಲಸಗಳು ಇರುತ್ತವೆ. ಹಾಗಾಗಿ, ನನಗೆ ಅಷ್ಟೊಂದು ವ್ಯವಧಾನ ಸಹ ಇರಲಿಲ್ಲ. ವಾರದಲ್ಲಿ ಒಂದು ದಿನ ನನಗೆ ಸಿಗುವ ಅಲ್ಪ ಸ್ವಲ್ಪ ಬಿಡುವಿನಲ್ಲಿ ನನ್ನ ಅಷ್ಟೊಂದು ಸಮಯ ವ್ಯರ್ಥ ಆದದ್ದು ನೋಡಿ ನಿಮ್ಮ ತಮ್ಮನಿಗೇ ಬೇಜಾರಾಯಿತು. ಅವರೇ ಬೇಕಾದರೆ ಸುಲಭವಾಗಿ ಶಾವಿಗೆ ಮಾಡುವಂತಹ ಚೆನ್ನಾಗಿರುವ, ದೊಡ್ಡದಾದ ಹೊಸ ಮಣೆ ತರೋಣ, ಮಣೆಯನ್ನು ಬೇಕಿದ್ದರೆ ನಮ್ಮ ಸಹೋದರಿಯರಲ್ಲೇ ಯಾರಿಗಾದರೂ ಕೊಟ್ಟುಬಿಡೋಣ ಎಂದರು. ಮಣೆ ವಿಷಯ ನಾನು ಮರೆತೇಬಿಟ್ಟಿದ್ದೆ. ನಾನು ಆಮೇಲೆ ಅದನ್ನು ಉಪಯೋಗಿಸೇ ಇಲ್ಲ. ನಿಮ್ಮ ತಮ್ಮ ಯಾರಿಗೆ ಕೊಟ್ಟರೋ ನಾನೂ ಕೇಳಲಿಲ್ಲ. ಈಗೇನು, ಬಹಳ ಕಡೆ ಸಿಗುತ್ತದೆಯಲ್ಲಾ, ಕೊಂಡು ತಂದರಾಯಿತು' ಎಂದಳು. ಪಾತಕ್ಕ ಅಷ್ಟಕ್ಕೇ ಸುಮ್ಮನಾಗಲಿಲ್ಲ. 'ಲಲಿತಳ ಹತ್ತಿರವೂ ಇಲ್ಲ, ಕಮಲಳ ಬಳಿಯೂ ಇಲ್ಲ. ಲಲಿತಾಳ ಮನೆಯಲ್ಲಿ ದೊಡ್ಡ ಸ್ಟೀಲ್ ಶಾವಿಗೆ ಮಣೆಯೇ ಇದೆ, ಅವಳೇತಕ್ಕೆ ಇದನ್ನು ತೆಗೆದುಕೊಳ್ಳುತ್ತಾಳೆ, ನಾನು ಲಲಿತ, ಕಮಲ ಇಬ್ಬರ ಬಳಿಯೂ ಕೇಳಿದೆ. ಅವರಿಬ್ಬರ ಹತ್ತಿರವೂ ಇಲ್ಲ. ಇನ್ನು ದೊಡ್ಡಕ್ಕನಿಗೆ ಕೈಯಲ್ಲಿ ಬಲವೇ ಇಲ್ಲ. ಮಣೆ ನನ್ನ ಬಳಿಯೂ ಇಲ್ಲ, ನೀವು ಬೇರೆ ಯಾರಿಗಾದರೂ ಕೊಟ್ಟಿರಬಹುದು, ಕೊಟ್ಟು ಮರೆತಿರಬಹುದು' ಎಂದರು.

ಗಂಗಳಿಗೆ ಆ ವಿಷಯದಲ್ಲಿ ಆಸಕ್ತಿ ಇರಲಿಲ್ಲ. ಮದುವೆಯಾದಾಗಲಿಂದಲೂ ಅತ್ತೆ ಮನೆಯಿಂದ ವಸ್ತ್ರ ಒಡವೆ ಎಂದು ಏನೊಂದೂ ಕೊಟ್ಟಿರಲಿಲ್ಲ. ಅವಳೂ ಸಹ ಏನನ್ನೂ ನಿರೀಕ್ಷಿಸಿರಲಿಲ್ಲ. ಮದುವೆಯಲ್ಲಿ ವರನ ಮನೆಯಿಂದ ಕೊಡಿಸಿದ ಸೀರೆಗಳು ಮತ್ತು ತಾಳಿ ಸರ, ಮನೆಯವರಿಗೆ ಮದುವೆಗೆಂದು ತೆಗೆದ ಹೊಸ ಉಡುಗೆತೊಡುಗೆಗಳು, ಇನ್ನಿತರ ಮದುವೆ ಖರ್ಚು ಎಲ್ಲವನ್ನೂ ಗಂಡ ಕಿಶನ್ ಪಿಎಫ್ ಸಾಲ ಪಡೆದು ಮದುವೆಯಾದ ನಂತರ ತಿಂಗಳ ಸಂಬಳದಲ್ಲಿ ಕಟ್ಟುತ್ತಾ ಇದ್ದ ವಿಷಯ ಗಂಗಾಳಿಗೆ ತಿಳಿದಿತ್ತು. ಗಂಗಾ ತನ್ನ ದುಡಿಮೆಯಿಂದಲೇ ಮನೆ ಖರ್ಚನ್ನು ನಡೆಸುತ್ತಿದ್ದಳು.

ಗಂಡನ ಸಂಬಳ ಊರಿಗೆ ಕಳುಹಿಸುವುದಕ್ಕೆ, ಸಾಲಕ್ಕೇ ಸರಿಹೋಗುತ್ತಿತ್ತು. ಗಂಡನ ಮನೆಯಿಂದ ಗುಲಗಂಜಿಯಷ್ಟೂ ಏನನ್ನೂ ಕೊಟ್ಟಿರಲಿಲ್ಲ. ಅಂತಹುದರಲ್ಲಿ ಸರಿಯಾಗಿ ಉಪಯೋಗಕ್ಕೆ ಬಾರದ, ಮುರಿದುಹೋದ, ಬೇರೆಯವರಿಂದ ಪಡೆದ ಮರದ ಚಿಕ್ಕ ಶಾವಿಗೆ ಮಣೆಯನ್ನು ತನ್ನ ಕಡೆಯವರಿಗೆ ನೀಡುವುದು ಅವಳ ಊಹೆಗೂ ನಿಲುಕದ್ದು. ಸುಮ್ಮನೇ ತನ್ನ ಪಾಡಿಗೆ ತಾನು ಇದ್ದವಳನ್ನು ಪಾತಕ್ಕ ಕೆಣಕಿದ್ದರು. ಗಂಗಾಳಿಗೆ ತಡೆಯಲಾರದಷ್ಟು ಕೋಪ ಬಂದರೂ ಸಹ, ಕೋಪವನ್ನು ತೋರಿಸಿಕೊಳ್ಳದೆ ಮಾತು ಬದಲಾಯಿಸಿ ಪಾತಕ್ಕ ಮತ್ತು ಅವರ ಮಗ ಕಿಶೋರನಿಗೆ ತಿಂಡಿ, ಕಾಫಿ ಕೊಟ್ಟು ಉಪಚರಿಸಿ ಕಳುಹಿಸಿದಳು.

ಅದೊಂದು ಸುಖೀ ಸಂಸಾರ. ಸುಖಿ ಎಂದುಕೊಂಡರೆ ಸುಖೀ, ಇಲ್ಲವೇ ಸಾಮಾನ್ಯ ಮಧ್ಯಮ ವರ್ಗದ ಕುಟುಂಬ ಎಂದುಕೊಂಡರೆ ಸಾಮಾನ್ಯ. ಏಕೆಂದರೆ ಬಡತನದ ನಡುವೆಯೂ ಬಾಂಧವ್ಯದ ಬೆಸುಗೆ ತುಸುವೂ ಮಾಸಿರಲಿಲ್ಲ. ಜನಿಸಿದ ಹತ್ತು ಮಕ್ಕಳಲ್ಲಿ ಉಳಿದಿದ್ದು ಎಂಟು ಮಕ್ಕಳು. ನಾಲ್ಕು ಗಂಡು ನಾಲ್ಕು ಹೆಣ್ಣು. ಎಂದೋ ಒಂದು ಕಾಲದಲ್ಲಿ ಮನೆಯಲ್ಲಿ ಬೆಳ್ಳಿ ಬಂಗಾರ ವಿಜೃಂಭಿಸುತ್ತಿತ್ತು. ಬೆಳ್ಳಿಯ ಪಾತ್ರೆಗಳು, ಬಕೆಟ್ಟುಗಳು, ಬಟ್ಟಲುಗಳು, ಊಟದ ತಟ್ಟೆ ಲೋಟಗಳು, ಸೌಟುಗಳು, ಚಮಚಗಳು ಹೀಗೇ. ಅಡಿಗೆ ಮನೆಯ ತುಂಬೆಲ್ಲ ಬೆಳ್ಳಿಯ ಪಾತ್ರೆಗಳದೇ ಸಾಮ್ರಾಜ್ಯ. ಎಲ್ಲೋ ಅಲ್ಲೊಂದು ಇಲ್ಲೊಂದು ಸ್ಟೀಲ್ ಪಾತ್ರೆಗಳು ಸಹ ಮಧ್ಯೆ ಮಧ್ಯೆ ನುಸುಳಿದ್ದವು. ಆಗಿನ್ನೂ ಪ್ಲಾಸ್ಟಿಕ್ ಅಡುಗೆ ಮನೆಗಳನ್ನು ಪ್ರವೇಶಿಸಿರಲಿಲ್ಲ. ಊಟೋಪಚಾರಗಳಿಗೆ ಯಾವುದೇ ಬರವಿರಲಿಲ್ಲ. ಹೊತ್ತು ಹೊತ್ತಿಗೆ ರುಚಿರುಚಿಯಾದ, ಅಚ್ಚುಕಟ್ಟಾದ ಬಿಸಿಬಿಸಿಯಾದ ಅಡುಗೆ ಮಾಡಿಕೊಂಡು ಊಟ ಮಾಡುವುದಷ್ಟೇ ಹೆಂಗಳೆಯರ, ಮಕ್ಕಳ ಕೆಲಸ. ಗಂಡಸು ಒಬ್ಬರೇ ದುಡಿದು ಮಕ್ಕಳ ಜೊತೆಗೆ ಹೆಂಡತಿ ಮತ್ತು ತಮ್ಮ ತಾಯಿಯನ್ನು ಸಾಕುವ ಜವಾಬ್ದಾರಿಯನ್ನು ಸಂತೋಷದಿಂದ ನಿರ್ವಹಿಸುತ್ತಿದ್ದರು. ವ್ಯಾಪಾರ ವ್ಯವಹಾರ ಎಂದ ಮೇಲೆ ಏರಿಳಿತಗಳು ಇದ್ದಿದ್ದೇ. ವ್ಯಾಪಾರದಲ್ಲಿ ನಷ್ಟವನ್ನು ಅನುಭವಿಸಿದ ನಂತರ ಬೇರೆಯವರ ಅಂಗಡಿಯಲ್ಲಿ ಕೆಲಸಕ್ಕೆ ಸೇರಿ ಸಂಸಾರ ನಿರ್ವಹಣೆ ಮಾಡುತ್ತಿದ್ದರು. ಯಾವುದೋ ಕೆಟ್ಟ ದೃಷ್ಟಿಯ ಫಲವೋ ಅಥವಾ ಗಂಡಸಿನ ಬೇಜವಾಬ್ದಾರಿಯುತ ನಡವಳಿಕೆಯೋ, ಅಂದಿನ ಕಾಲದಲ್ಲಿ ಪ್ರಚಲಿತವಿದ್ದ ಲಾಟರಿ ಟಿಕೆಟ್ ಕೊಳ್ಳುವಿಕೆಯೋ, ಕುದುರೆ ಬಾಲಕ್ಕೆ ಹಣ ಕಟ್ಟಿದ ಪರಿಣಾಮವೋ, ಒಟ್ಟಿನಲ್ಲಿ ಮನೆಯ ಆರ್ಥಿಕ ಪರಿಸ್ಥಿತಿ ಕ್ರಮೇಣ ಕುಸಿಯಿತು. ವ್ಯಾಪಾರವೆಂದು ಕೆಲಸದ ಮೇಲೆ ಊರೂರು ಸುತ್ತುತ್ತಾ ಇದ್ದು, ಅದೃಷ್ಟದಾಟವೋ, ದುಷ್ಟ ದುರಭ್ಯಾಸದ ಫಲವೋ ಏನೋ ಆದಾಯದಲ್ಲಿ ಸೋರಿಕೆ ಹೆಚ್ಚಾಗಿ ಮನೆಯಲ್ಲಿದ್ದ ಒಂದೊಂದೇ ಸೌಕರ್ಯಗಳು ನಶಿಸುತ್ತಾ ಹೋದವು. ಪುಣ್ಯವಶಾತ್ ಮಕ್ಕಳು ಸುಂದರವಾಗಿದ್ದು ಬುದ್ಧಿವಂತ ರಾಗಿದ್ದರು. ಹಿರಿಯ ಮಗನನ್ನು ಚಿಕ್ಕಂದಿನಲ್ಲೇ ಹೆಂಡತಿಯ ತವರೂರಿನಲ್ಲಿ ಬಿಟ್ಟಿದ್ದರು. ಬಹುಶಃ ವಯಸ್ಸಿನ ಅಂತರ ಕಡಿಮೆಯಿದ್ದು ಚಿಕ್ಕ ಮಕ್ಕಳನ್ನು ನೋಡಿಕೊಳ್ಳುವುದು ಕಷ್ಟವಾಗುತ್ತದೆ ಎಂದು ಇರಬಹುದು.

ಹಾಗೆಯೇ ಸಾಲಾಗಿ ಹತ್ತು ಮಕ್ಕಳ ಜನನ. ಹೊರುವುದು, ಹೆರುವುದು ಎನ್ನುವ ಹಾಗೆ ಒಂದು ಯಾಂತ್ರಿಕ ಬದುಕು ಪಾತಕ್ಕನ ತಾಯಿ ಲಕ್ಷ್ಮಮ್ಮನದು. ಹಿರಿಯ ಮಗಳು ಕೋಮಲಳು ಇನ್ನೂ ಹದಿನಾಲ್ಕು ಹದಿನೈದರ ಪ್ರಾಯದಲ್ಲಿ ಇದ್ದಾಗಲೇ ಅನುಕೂಲಸ್ಥ ಗಂಡಿನ ಕಡೆಯವರು ತಾವಾಗಿಯೇ ಕೇಳಿಕೊಂಡು ಬಂದಾಗ ಮನೆಯಲ್ಲಿ ಹರ್ಷ ಹೇಳತೀರದು. ಮನೆಯಲ್ಲಿ ಅಳಿದುಳಿದ ಬೆಳ್ಳಿ, ಬಂಗಾರವನ್ನು ವರೋಪಚಾರವೆಂದು ಕೊಟ್ಟು ಹಿರಿಯ ಮಗಳು ಕೋಮಲಳ ಮದುವೆಯನ್ನು ಶಕ್ತ್ಯಾನುಸಾರ ಚೆನ್ನಾಗಿ ಮಾಡಿ ಮುಗಿಸಿದರು.

ಕೋಮಲಳ ನಂತರ ಪಾತಕ್ಕ. ಪಾತಕ್ಕನಿಗೆ ಮದುವೆ ಮಾಡಲು ಸಹ ಅವರ ಮನೆಯಲ್ಲಿ ಏನೂ ಉಳಿದಿರಲಿಲ್ಲ. ಹಾಗಾಗಿ ಪಾತಕ್ಕನ ಮದುವೆ ಸ್ವಲ್ಪ ನಿಧಾನವಾಯಿತು. ದೂರದ ಊರಿನಲ್ಲಿ ಅಷ್ಟೇನೂ ಅನುಕೂಲ ಇಲ್ಲದೇ ಇದ್ದರೂ

ವಾಸ ಮಾಡಲು ಪಿತ್ರಾರ್ಜಿತ ಆಸ್ತಿಯಾಗಿ ಒಂದು ಮನೆಯಿದ್ದು ವಯಸ್ಸಿನಲ್ಲಿ ಪಾತಕ್ಕನಿಗಿಂತಲೂ ಹತ್ತು ವರ್ಷ ಹಿರಿಯನಾದ ವರನೊಂದಿಗೆ ಸರಳವಾಗಿ ಮನೆಯಲ್ಲೇ ಮದುವೆ ಜರುಗಿಸಿದ್ದರು. ಮಕ್ಕಳು ಬುದ್ಧಿವಂತರಾಗಿದ್ದರೂ ಸಹ ಮನೆಯ ಹಣಕಾಸಿನ ಪರಿಸ್ಥಿತಿಯಿಂದ ಯಾರನ್ನೂ ಹೆಚ್ಚಿಗೆ ಓದಿಸಲು ಆಗಿರಲಿಲ್ಲ. ಎರಡನೆಯ ಮಗ ಅನಿಲನಿಗೆ ಅರ್ಧದಲ್ಲೇ ವಿದ್ಯಾಭ್ಯಾಸವನ್ನು ಬಿಡಿಸಿ ಬೆಂಗಳೂರಿಗೆ ಕರೆದುಕೊಂಡು ಬಂದು ಯಾರೋ ನೆಂಟರಿಷ್ಟರ ಕೈಕಾಲು ಹಿಡಿದು ಸಾಧಾರಣ ಉದ್ಯೋಗ ಕೊಡಿಸಿದ್ದರು.

ಜೀವನ ರಥ ಹೇಗೋ ಸಾಗುತ್ತಿತ್ತು. ಮನೆಯ ಪರಿಸ್ಥಿತಿಯನ್ನು ಮನಗಂಡು ಕಿಶನ್ ಚೆನ್ನಾಗಿ ಓದಿ ಬೆಂಗಳೂರಿನ ಫ್ರೀ ಹಾಸ್ಟೆಲ್‌ನಲ್ಲಿ ಇದ್ದುಕೊಂಡು ವಿದ್ಯಾಭ್ಯಾಸ ಮುಂದುವರಿಸಿದ. ಚೆನ್ನಾಗಿ ಓದಿ ಸ್ಕಾಲರ್‌ಶಿಪ್ ಸಹ ಪಡೆದುಕೊಂಡಿದ್ದ. ಸ್ನಾತಕೋತ್ತರ ಪದವಿಯನ್ನೂ ಸಹ ಮುಗಿಸಿದ. ಓದುತ್ತಾ ಇದ್ದಾಗ ಅಷ್ಟು ವರ್ಷಗಳ ಕಾಲ ತನ್ನ ಮನೆಯವರಿಗಾಗಿ ಏನನ್ನೂ ಮಾಡಲು ಸಾಧ್ಯವಾಗಲಿಲ್ಲವಲ್ಲ ಎನ್ನುವ ಕೊರಗು ಅವನನ್ನು ಬಾಧಿಸುತ್ತಿತ್ತು. ಕೆಲಸಕ್ಕೆ ಸೇರಿದ ತಕ್ಷಣ ಸಂಬಳದ ಹಣ ಸೇರಿಸಿ ತಂಗಿಯ ಮದುವೆ ಮಾಡಿದ. ಹೆಚ್ಚು ಕಡಿಮೆ ಮದುವೆಯ ಪೂರ್ತಿ ಖರ್ಚಿನ ಹಣವನ್ನು ಅವನೇ ಕೊಟ್ಟ. ತಂಗಿಯೂ ಬಹಳ ಸುಂದರವಾಗಿ ಇದ್ದುದರಿಂದ ವರನ ಕಡೆಯವರು ವಧುವಿನ ಕಡೆಯಿಂದ ಸ್ವಲ್ಪವೇ ಹಣವನ್ನು ಪಡೆದು, ತಮ್ಮ ಅಂತಸ್ತಿಗೆ ತಕ್ಕಂತೆ ತಮ್ಮ ಊರಿನಲ್ಲಿಯೇ ವೈಭವೋಪೇತವಾಗಿ ಮದುವೆ ಮಾಡಿ ಕೊಂಡಿದ್ದರು. ದೂರದ ಊರಿನಲ್ಲಿ ನಡೆದ ಮದುವೆಗೆ ಕಮಲಳ ಮನೆಯವರು ಮಾತ್ರ ಹೋಗಿ ಬಂದಿದ್ದರು.

ಗಂಗಾಳ ಮದುವೆ ನಿಶ್ಚಿತಾರ್ಥ ನಡೆಯುವ ಮೊದಲೇ ಕಿಶನ್ ಗಂಗಾಳನ್ನು ಭೇಟಿಯಾಗಿ ಮದುವೆಯಾದ ನಂತರ ನನ್ನ ತಂದೆ ತಾಯಿಯರನ್ನು ನಾವೇ ನೋಡಿಕೊಳ್ಳಬೇಕು ಎಂದು ಹೇಳಿದ್ದನು. ಗಂಗಾ ಸ್ನಾತಕೋತ್ತರ ಪದವೀಧರೆ ಯಾದರೂ ವಿಭಕ್ತ ಕುಟುಂಬದಲ್ಲಿ ತಾನಾಯಿತು, ತನ್ನ ಓದಾಯಿತು ಎಂದು ಬೆಳೆದಿದ್ದಳು. ತಂದೆ ತಾಯಿಯರನ್ನು ನೋಡಿಕೊಳ್ಳುವುದು ಮಕ್ಕಳ ಕರ್ತವ್ಯ ಎಂದು ತಿಳಿದಿದ್ದಳು. ಕಿಶನ್ ಹೇಳುತ್ತಿರುವುದರಲ್ಲಿ ಗಂಗಾಳಿಗೆ ಯಾವುದೇ ರೀತಿಯ ವಿಶೇಷವೂ ಕಾಣಿಸಲಿಲ್ಲ. ಅದರ ಅರ್ಥ ಆಗಲು ಮದುವೆಯಾದ ನಂತರ ಬಹಳ ವರ್ಷಗಳೇ ಬೇಕಾದವು.

ಉಂಡು ಉಡಲು ಯಾವುದೇ ರೀತಿಯ ತೊಂದರೆಯಾಗದಂತೆ ಆರಕ್ಕೇಳದೆ ಮೂರಕ್ಕಿಳಿಯದೆ, ತಂದೆ ತಾಯಿಯರಿಗೆ, ಗೆಳತಿಯರಿಗೆ, ಬಂಧುಗಳಿಗೂ ಯಾವುದೇ ಸುಳಿವು ಸಿಗದಂತೆ ಜಾಣತನದಿಂದ ಸಂಸಾರ ನಿರ್ವಹಣೆ ಮಾಡುತ್ತಿದ್ದಳು.

ಮದುವೆ ನಿಶ್ಚಯ ಮಾಡುವ ಮೊದಲೇ ಗಂಗಾಳ ತಂದೆ, ತಾತ ಇಬ್ಬರೂ ವರನ ಮನೆ ನೋಡಲು, ವರನ ಮನೆಯವರಿಗೆ ಮೊದಲೇ ತಿಳಿಸದೆ ಹೋಗಿಬಂದಿದ್ದರು. ಗಂಗಾಳ ತಾತ ಗಂಗಾಳಿಗೆ ಹೇಳಿದ್ದಿಷ್ಟೇ. ಬೇರಾವ ಆಸ್ತಿಯಿಲ್ಲ. ಹುಡುಗನೇ ಆಸ್ತಿ, ನಿನಗೆ ಒಪ್ಪಿಗೆ ಇದೆಯೇ ಎಂದು ಕೇಳಿದ್ದರು. ಸರಳ ಸ್ವಭಾವದ ಗಂಗಾ ಸುಮ್ಮನೆ ತಲೆ ಆಡಿಸಿದ್ದಳು.

ಪಾತಕ್ಕ ಶಾವಿಗೆ ಮಣೆಯ ವಿಷಯ ತೆಗೆದಾಗ ಕಿಶನ್ ಇಹಲೋಕ ತ್ಯಜಿಸಿ ಆಗಿತ್ತು. ಶಾವಿಗೆ ಮಣೆ ಯಾರಿಗೆ ಕೊಟ್ಟಿದ್ದಾರೆಂದು ನಿಮ್ಮ ತಮ್ಮನನ್ನೇ ಹೋಗಿ ಕೇಳಿಕೊಳ್ಳಿ ಎಂದು ಹೇಳುವಂತೆ ಮನ ಹೇಳಿದರೂ ನಾಲಿಗೆ ನುಡಿಯಲಿಲ್ಲ. ಗಂಗಾಳ ಸುಸಂಸ್ಕಾರ ಅಡ್ಡ ಬಂದಿತ್ತು. ವಯಸ್ಸಾದಂತೆಲ್ಲಾ ಬಯಕೆಗಳು ಚಿಗುರುತ್ತಿದ್ದ ಪಾತಕ್ಕನನ್ನು ಕಂಡು ಗಂಗಾಳ ಮನ ಮರುಗಿತು. ಮನಃಪಟಲದಲ್ಲಿ ಬದುಕಿನ ಪುಟಗಳು ಹಾದು ಹೋದವು. ಬದುಕು ಇಷ್ಟೇ ಎನಿಸಿತ್ತು. ಬಹಳಷ್ಟು ಜನರ ಜೀವನದಲ್ಲಿ, ಮನೆಮನೆಗಳಲ್ಲಿ ನಡೆಯುತ್ತದೆ ಮಣೆ ಮನೆ ಕಥೆ

**

ಕಿರು ಪ್ರಸಂಗ

ಶ್ರೇಷ್ಠ ಹೂವುಗಳು

– ರಾಧಿಕಾ ವಿ ಗುಜ್ಜರ್

ಸಂಜೆಯ 6 ಅಥವಾ 6.15ರ ಸಮಯ ಇರಬಹುದು. ಓಣಿಯ ದಾರದ ಮೇಲಿನ ಒಣಗಿದ ಬಟ್ಟೆಗಳನ್ನು ಬಾಚಿಕೊಳ್ಳುತ್ತಿದ್ದೆ. ಎಲ್ಲವನ್ನೂ ಮಡಿಸಿಟ್ಟು ದೀಪ ಹಚ್ಚಬೇಕೆಂದು ಯೋಚಿಸುತ್ತಾ ನನ್ನದೇ ಆದ ಗುಂಗಿನಲ್ಲಿದ್ದವಳಿಗೆ ಗೇಟ್ ಶಬ್ದವಾದಂತೆನಿಸಿ ತಿರುಗಿದೆ. 9 ವರ್ಷ ವಯಸ್ಸಿನಿಂದ ಹಿಡಿದು ಸುಮಾರು 12-13 ವರ್ಷದವರೆಗಿನ ಮಕ್ಕಳು ಗುಂಪುಗೂಡಿ ಗೇಟಿನೆದುರು ನಿಂತಿದ್ದರು. ಎಲ್ಲರ ಕೈಯಲ್ಲೂ ಒಂದು ನೋಟ್ ಪುಸ್ತಕ. ಒಂದಿಬ್ಬರು ಸೈಕಲ್ ಹಿಡಿದು ನಿಂತಿದ್ದರು. ಎಲ್ಲ ಮಕ್ಕಳು ಬಹಳ ಕಳೆ ಕಳೆಯಾಗಿದ್ದರು. ಪುಟಾಣಿ ಏಜೆಂಟ್ 1, 2, 3, 4, 5, 6, 7 ಪ್ಲಸ್ ಎರಡು ಸೈಕಲ್ ಹಿಡಿದ 008 ಮತ್ತು 009. ಹೂಂ... ಒಟ್ಟು 9 ಜನ. ಜೊತೆಯಲ್ಲಿ ಒಬ್ಬ 30 ವರ್ಷದ ಆಸುಪಾಸಿನ ಮಹಿಳೆ. ಆಕೆಯೂ ಮುದ್ದಾಗಿ ಹತ್ತಿ ಬಟ್ಟೆಯ ಸುಂದರ ಸೀರೆ ಧರಿಸಿದ್ದಳು.

ಬಂದೆ, ಬಂದೆ ಎನ್ನುತ್ತಲೇ ಹತ್ತಿರ ಹೋದೆ. ಗುಂಪಿನ ಒಂದು ಹುಡುಗ, "ಮ್ಯಾಮ್ ನಾನು ಸಾರಿ ಕೇಳಲು ಬಂದೆ" ಎಂದ. ನನಗೋ, ಎಲ್ಲ ಅಯೋಮಯ.

ಇವನು ಯಾರು?

ನಾನು ಇವನಿಗೆ ಗೊತ್ತಾ?

ಹ್ಯಾಗೆ ಗೊತ್ತು ?!!

ಯಾವಾಗ ನೋಡಿದ್ದೆ ಈ ಚೋಟಪ್ಪನನ್ನ?

ಉಫ್ ತೆಗಿ ಆ ಕಡೆ. ಈ ಸೋಲಾರ್ ಬುರುಡೆ ತಲೆಗೆ ನೆನಪಾಗಲಿಲ್ಲ, ಅಲ್ಲಲ್ಲ ಪಕ್ ಅಂತ ನೆನಪು ಹೊತ್ಕೊಳ್ಳಲಿಲ್ಲ. ನೋಡಿದ್ದರೆ ತಾನೇ ನೆನಪಾಗೋದು ??!!

"ಮೊದಲು ನೀವೆಲ್ಲ ಯಾರು ಅಂತ ಹೇಳು. ಆಮೇಲೆ, ಯಾಕೆ ಸಾರಿ ಕೇಳೋಕೆ ಬಂದೆ ಅಂತ ಹೇಳು ಆಯ್ತಾ. ಬಾ ಒಳಗೆ, ಬನ್ನಿ ಎಲ್ಲ ಒಳಗೆ" ಎಂದು ಕರೆದು, ಬಟ್ಟೆಗಳನ್ನು ಮೊದಲು ರೂಮಿಗೆ ಹೋಗಿ ಇಟ್ಟು ಬಂದೆ. ಎಲ್ಲರೂ ಹಾಲ್‌ನಲ್ಲಿ ಮುಖ್ಯ ಬಾಗಿಲ ಬಳಿ ಗುಂಪಾಗಿ ನಿಂತಿದ್ದರು. ಅವರ ಜೊತೆ ಇದ್ದ ಮಹಿಳೆ ಮುಂದೆ ಬಂದು, "ನಮಸ್ತೆ ಆಂಟಿ. ನಾನೇ ಇವನನ್ನು ಕರೆದುಕೊಂಡು ಬಂದಿದ್ದು" ಎಂದಳು. ನಗುತ್ತಾ ಎಲ್ಲರಿಗೂ ಕುಳಿತುಕೊಳ್ಳಲು ಹೇಳಿದೆ. ನೀರು ಬೇಕಾ ಕೇಳಿದೆ. ಬೇಡ ಎಂದು ತಲೆ ಅಲ್ಲಾಡಿಸಿದರು. ಎಲ್ಲರ ಮುಖದಲ್ಲೂ ಆತಂಕ.!!??

"ಈಗ ಹೇಳಿ ಏನದು, ಇವನ ಸಾರಿ ಕತೆ" ಎಂದೆ. ಆ ಮಹಿಳೆ ಎದ್ದು ನಿಂತು, "ನಾವೆಲ್ಲ ಇಲ್ಲೇ ಸೇವೆಂಟೀಂತ್ ಕ್ರಾಸಲ್ಲಿರೋ ರಾಮ ಭಜನಾ ಮಂದಿರದಲ್ಲಿ ಪ್ರತೀ ಗುರುವಾರ ಭಗವದ್ಗೀತೆ ಶ್ಲೋಕ ಓದುವ ಹಾಗೂ ಮೋರಲ್ ಸ್ಟೋರೀಸ್ ಹೇಳುವ ಆಕ್ಟಿವಿಟೀಸ್ ಮಾಡುತ್ತೇವೆ. ನಾನು ಬೆಂಗಾಲ್‌ನವಳು. ವರ್ಕಿಂಗ್ ಟೀಚರ್. ನಾನೇ

ಹೇಳಿಕೊಡೋದು. ಮಕ್ಕಳೆಲ್ಲ ತಮಗೆ ತೋಚಿದ ವಸ್ತುಗಳನ್ನು, ತಿಂಡಿಗಳನ್ನು ತರುತ್ತಾರೆ. ಬಿಸ್ಕೆಟ್, ಎಕ್ಸ್ಟ್ರಾ ಪೆನ್ಸ್, ಸ್ನ್ಯಾಕ್ಸ್, ಬುಕ್‌ಮಾರ್ಕ್ಸ್, ಹೂವುಗಳು, ಹಣ್ಣುಗಳು ಹೀಗೆ. ಅದೆಲ್ಲವನ್ನೂ ಅಂದು ಕಲೆಕ್ಟಿವ್ ಆಗಿ ಉಪಯೋಗ ಮಾಡಿ, ತಿಂಡಿಯನ್ನು ಹಂಚಿ ತಿನ್ನುತ್ತೇವೆ. ಅವರೇ ವಾಲಂಟೀರ್ ಮಾಡ್ತಾರೆ. ಮೇಧಾಬೀ ಬಚ್ಚಡ (ಮೇಧಾವಿ ಮಕ್ಕಳು). ಶೇರ್ ಅಂಡ್ ಕೇರ್ ತರಹ. ಇವತ್ತು ಇವನು ಬಹಳ ಬ್ಯೂಟಿಫುಲ್ ಎರಡು ದೊಡ್ಡ ದಾಸವಾಳ ತಂದು ರಾಮನ ಫೋಟೋಗೆ ಡೆಕೋರೆಟ್ ಮಾಡಿದ. ಕೇಳಿದಾಗ, ಅಲ್ಲೇ ಒಂದು ಮನೆಯ ಕಾಂಪೌಂಡಲ್ಲಿ ಬಿಟ್ಟಿತ್ತು. ಕೈಗೆ ಸಿಕ್ಕಿತು. ಕಿತ್ತು ತಂದೆ ಮ್ಯಾಮ್ ಎಂದ. ತಕ್ಷಣ ನಾನು ಹೇಳಿದೆ, ಕೇಳದೆ ಕಿತ್ತು ತರಬಾರದು ಅಂತ. ಅವನಿಗೆ ಬಹಳ ಶೇಮ್ ಅನ್ನಿಸ್ತಿದೆ. ಹಿ ವಾಂಟ್ಸ್ ಟು ಅಪಾಲಜೈಜ್" ಎಂದಳು. ಕೇಳಿ ಕರಗಿಹೋದೆ. ಎಷ್ಟು ಸುಂದರ ಮನಸ್ಸಿನ ಮಗು. ನನ್ನ ತೋಟದ ಗಿಡದ ದಾಸವಾಳ ಆ ಕ್ಷಣ ನಗಣ್ಯ ಎನಿಸಿತು.

ಆ ಹುಡುಗ ಮತ್ತೆ ಎದ್ದು, "ಸಾರಿ ಆಂಟಿ. ನಾನು ನಿಮ್ಮ ಪರ್ಮಿಷನ್ ಕೇಳಿ ಹೂವು ಕೀಳಬೇಕು. ಐ ನೆವರ್ ಡು ಇಟ್ ಅಗ್ಯೆನ್" ಎಂದು ಕೈ ಜೋಡಿಸಿ ತಲೆ ತಗ್ಗಿಸಿದ. 10–15 ಸೇವಂತಿಗೆ ಹೂವುಗಳ ಕವರೊಂದನ್ನು ಮುಂದೆ ಚಾಚಿದ. ಅವನನ್ನು ಹತ್ತಿರ ಕರೆದು, "ಇಟ್ಸ್ ಓಕೆ ಮಗು. ನಿನಗೆ ನಿನ್ನ ತಪ್ಪನ್ನು ಒಪ್ಪಿಕೊಳ್ಳುವ ಮನಸ್ಸಾಯಿತು ಅಲ್ವಾ. ಅದು ಮುಖ್ಯ. ನಿನ್ನ ಪ್ರಾಮಾಣಿಕತೆಗೆ ಈಗ ನಾನು ಪ್ರೈಜ್ ಕೊಡಬೇಕು ಅಲ್ವಾ? ಯು ಪ್ರೂವ್ಡ್ ಯುವರ್ ಆನೆಸ್ಟಿ. ಗುಡ್ ಬಾಯ್. ಯಾವಾಗಲೂ ಹೀಗೇ ಇರು ಪುಟ್ಟ." ಎಂದು ತಲೆ ಸವರಿ ಆಶೀರ್ವದಿಸಿದೆ. "ನೀವೆಲ್ಲ ಗುಡ್ ಫ್ರೆಂಡ್ಸ್. ಅವನು ಸಾರಿ ಕೇಳಲು ನೀವೆಲ್ಲ ಜೊತೆ ನಿಂತಿದ್ದೀರಿ. ಎಲ್ಲಿ, ಎಲ್ಲರೂ ಜೋರಾಗಿ ಕ್ಲಾಪ್ ಮಾಡಿ" ಎಂದೆ. ಮಕ್ಕಳು ಖುಷಿಯಾಗಿ ಚಪ್ಪಾಳೆ ತಟ್ಟಿ ನಕ್ಕರು. ಅದೇನೋ ದೊಡ್ಡ ಅಪರಾಧವಾಯಿತು ನಮ್ಮಿಂದ ಎನ್ನುವಂತೆ ಮೈಯೆಲ್ಲಾ ಮುದುಡಿ ನಿಂತಿದ್ದ ಮಕ್ಕಳು ಕಲಕಲನೆ ಅರಳಿ ಹೂವಾದರು. ಇನ್ನೇನು ಬೇಕು ಹೇಳಿ? ಮನೆಗೆ ಬಂದ ಮಕ್ಕಳ ನಗುವಿಗಿಂತ ದೊಡ್ಡ ಸಿರಿಯಿದೆಯೇ?

ಅವರ ಜೊತೆ ಬಂದಿದ್ದ ಮಹಿಳೆಗೆ ಖುಷಿಯಾಗಿತ್ತು. ಜೊತೆಗೆ ಆಶ್ಚರ್ಯವೂ ಕೂಡಾ. ನೀವು ಹೀಗೆ ಮಕ್ಕಳನ್ನು ಗೌರವಿಸಿ ಆಶೀರ್ವದಿಸಿದ್ದು ಬಹಳ ಒಳ್ಳೆಯ ಮಾದರಿಯಾಯಿತು ಎಂದರು. ನಾನು ಸಹಾ ಆಕೆಯನ್ನು ಅಭಿನಂದಿಸಿದೆ. ಮಕ್ಕಳಲ್ಲಿ ಒಳ್ಳೆಯ ಸಂಸ್ಕಾರಗಳನ್ನು ಬಿತ್ತಿದ್ದೀರಿ ಎಂದು ವಂದಿಸಿದೆ. ಚಾಲೋ ಚಾಲೋ… ಆಲ್ ಈಸ್ ವೆಲ್, ಎನ್ನುತ್ತಾ ಆಕೆ ಮಕ್ಕಳನ್ನು ಕುಳಿತುಕೊಳ್ಳಲು ಹೇಳಿ, ತಾನೂ ಕುಳಿತಳು.

ಅಡುಗೆಮನೆಗೆ ಹೋಗಿ, ಗಾಜಿನ ಭರಣಿ ತಂದು ಎಲ್ಲರಿಗೂ ಖರ್ಜೂರ ಹಂಚಿದೆ. ಸ್ಟೀಲ್ ಡಬ್ಬದಲ್ಲಿ ನನ್ನ ಅಕ್ಕ ಕೊಟ್ಟು ಕಳಿಸಿದ್ದ ಭಾಕರ್ ವಡಿ ಇದ್ದವು. ಅವನ್ನೂ ಹಂಚಿದೆ.

ಆ ಮಗು ನೀಡಿದ ಹೂವುಗಳನ್ನು ದೇವರಿಗೆ ಅರ್ಪಿಸಿ ದೀಪ ಹಚ್ಚಿದೆ. ಎಲ್ಲ ಹೂವುಗಳೂ ಶ್ರೀರಾಮನಿಗೆ ಸಮರ್ಪಣೆಯಾಗಲು ಯೋಗ್ಯವಾಗಿದ್ದವು.

***

ನನ್ನ ಪ್ರೀತಿಯ ಸೀತಾಳ ರಾಜು..

– ವೆಂಕಟೇಶ ಕಾಮತ್

ಎಲ್ಲೊ ಇದ್ದರು.. ಚೆನ್ನಾಗಿದ್ದರು..
ಒಬ್ಬರನೊಬ್ಬರು ಚೆನ್ನಾಗಿ ಅರಿತಿದ್ದರು
ಪ್ರೀತಿಸುವರು ಜಗಳವಾಡುವರು
ಒಬರನೊಬ್ಬರು ಆಡಿಕೊಂಡು ಜೋರಾಗಿ ನಗುವರು..

ಒಬ್ಬರಿಗಾಗಿ ಇನೊಬ್ಬರು ಮಿಡಿಯುವರು
ಕಾಳಜಿ ಪಡುವವರು..
ಮಿತಿ ತಪ್ಪಿದಾಗ ಒಬ್ಬರನೊಬ್ಬರು ಗದರುವವರು
ಕಾಯಿಲೆ ಬಿದ್ದಾಗ ಅರ್ಥೈಸಿ ಒಬ್ಬರನೊಬ್ಬರು
ಬೇರೆಯವರೇಕೆ ಎಂದು ತಾವೇ ನೋಡಿಕೊಳ್ಳುವವರು

ಮುದ್ದಾಗಿ ಕೀಟಲೆ ಮಾಡಿದರೂ
ಒಬ್ಬರು ಇನ್ನೊಬ್ಬರ ಒಳತನ್ನು ಗುರುತಿಸಿ
ಮೆಚ್ಚಿ ಪ್ರೋತ್ಸಾಹಿಸುವರು
ಮಕ್ಕಳು ಬೆಳೆದು ದೂರವಿರುವರೆಂದು
ತಾವೇ ಮಕ್ಕಳಂತೆ ಒಬ್ಬರಿಗಿನ್ನೊಬ್ಬರು ಕಥೆ ಹೇಳಿ
ಜಗಳವಾಡಿ ಸಮಯ ಕಳೆಯುವವರು

ನಾನು ಕೃಷ್ಣನೊಡನೆ
ಕಳೆದೆ ಇವರೊಡನೆ ನಾಲ್ಕು ದಿನ
ಸಿನಿಮಾ ನೋಡಿದೆವು
ಊರೆಲ್ಲ ತಿರುಗಾಡಿದೆವು
ಆಟೋದಲ್ಲಿ ಕಾರಿನ ಸುಖ ಕಂಡೆವು
ಊಟ ಮಾಡಿದೆವು ತಿಂಡಿ ತಿಂದೆವು
ಕಾಫಿ ಮಾತ್ರ ಮತ್ತೆ ಮತ್ತೆ ಕುಡಿದೆವು
ಮೆದುವಾದ ಬ್ರೆಡ್ ತಿಂದೆವು
ಕರುಮ್ ಕುರುಮ್ ಆದ ಪುರಿ.
ಕಲೆಸಿ ತಿಂದೆವು...
ಒಳ್ಳೆಯವರನ್ನು ಆಡಿ ಕೊಂಡಾಡಿದೆವು
ಕೆಟ್ಟವರನ್ನು ಕ್ಯಾಕರಿಸಿ ಉಗಿದೆವು
ಮದುವೆ ಮಾಡಿಸಿದೆವು
ಹುಟ್ಟುಹಬ್ಬದ ಕೇಕು ಕತ್ತರಿಸಿದೆವು
ಸಂಪತ್ತಿನ ಮಕ್ಕಳೊಡನೆ ಮಕ್ಕಳಾದೆವು
ಸಾಂತ್ವನಕ್ಕೆ ಮುದುಕರಾಗಿ ಒಟ್ಟಿಗೇ
ಹೋಗೋಣವೆಂದುಕೊಂಡೆವು

ಯಾವಾಗಲೂ ಇಲ್ಲಿಯೇ ನಮ್ಮೊಂದಿಗಿರಿ ಎಂದರು
ನಾವು ನಿಮ್ಮವರೇ ಎಂದು ಉಡುಪಿಗೂ ಬಂದರು

ಬೆಳಗ್ಗೆ ಆಗಾಗ ವಾಕಿಂಗಿಗೆ ಒಟ್ಟಿಗೇ ಹೋಗುವೆವು
ಮುಂದೆ ಮುಂದೆ ಹೋಗುವ ಸೀತೆಯನ್ನು
ರಾಜು ಹಿಂಬಾಲಿಸುವರು
ಒಮ್ಮೊಮ್ಮೆ..
ಅವರೇ ಮುಂದೆ ಹೋದಾಗ.
ರಾಜುಸ್.... ಎಂದು ಕರೆದೊಡನೆ
ಅಲ್ಲಿಯೇ ನಿಂತು ಕಾಯುವರು
ಹಿಂದಿರುಗಿಯೂ ಬರುವರು

ಕಳೆದ 5ಕ್ಕೆ
ನಮ್ಮನ್ನೆಲ್ಲಾ ಅಗಲಿ...
ನನ್ನ ಪ್ರೀತಿಯ ಸೀತಾಳ ರಾಜು
ದೂರ ಬಹು ದೂರ... ಬಹು ದೂರ...
ಹಿಂಬಾರದ ಊರಿಗೆ ಹೊರಟೇ ಹೋದರು...

ನನ್ನ ಪ್ರೀತಿಯ ಅಕ್ಕ ಸೀತಾ..
ಕರೆದಳು...
ರಾಜು... ರಾಜು.. ರಾಜುಸ್...
....

ರಾಜು ಮತ್ತೊಮ್ಮೆ ಬರಬಾರದೇ...

***


ಪುಸ್ತಕ ಪರಿಚಯ

‘ಬ್ಯಾಂಕರ್ಸ್ ಡೈರಿ’

ಕೃತಿಯ ಲೇಖಕರು; ಡಾ ಶುಭಶ್ರೀ ಪ್ರಸಾದ್

– ಬೆಂ.ಶ್ರೀ. ರವೀಂದ್ರ

ನಮ್ಮ ವೇದಿಕೆಯಲ್ಲಿ ಹಲವಾರು ಪ್ರತಿಭಾವಂತರಿದ್ದಾರೆ. ಅವರಲ್ಲಿ ಸತತ ಕ್ರಿಯಾಶೀಲರಾಗಿ ಕೃತಿರಚನೆ ಮಾತ್ರವಲ್ಲದೆ ಚಿತ್ರಗ್ರಹಣ, ವಾರ್ತಾವಾಚನ, ಕಾರ್ಯಕ್ರಮ ನಿರೂಪಣೆ, ಸ್ವರಚಿತ ಗೀತೆಗಳ ಆಲ್ಬಮ್_ಮೊದಲಾದ ಕಾರ್ಯ ಚಟುವಟಿಕೆಗಳೊಂದಿಗೆ ಸಮಾಜಮುಖಿಯೂ ಆಗಿರುವವರು ಶ್ರೀಮತಿ ಶುಭಶ್ರೀ ಪ್ರಸಾದ್. ಪ್ರಸಕ್ತ ಮಂಡ್ಯದ ಭಾರತೀಯ ಸ್ಟೇಟ್ ಬ್ಯಾಂಕಿನಲ್ಲಿ ಕೆಲಸ ಮಾಡುತ್ತಿದ್ದಾರೆ. ಅಚ್ಚುಕಟ್ಟಾದ ಕೆಲಸಗಾರ್ತಿ ಮತ್ತು ಗ್ರಾಹಕಸ್ನೇಹಿ ಎಂದು ಹೆಸರು ಪಡೆದಿದ್ದಾರೆ. ಕಾರ್ಮಿಕ ಸಂಘದಲ್ಲೂ ಕ್ರಿಯಾಶೀಲೆ. ಕಥೆ, ಕವನ, ಪ್ರಬಂಧ, ಅಂಕಣ, ಪ್ರವಾಸ ಕಥನಗಳು ಶುಭಶ್ರೀ ಲೇಖನದಿಂದ ಹೊಮ್ಮಿವೆ.. 2017ರಲ್ಲಿ “ಕನ್ನಡ ಸಾಹಿತ್ಯದಲ್ಲಿ ದೇಗುಲಗಳ ಪರಿಕಲ್ಪನೆ” ಎಂಬ ಮಹಾಪ್ರಬಂಧಕ್ಕೆ ಮೈಸೂರು ವಿಶ್ವವಿದ್ಯಾನಿಲಯದಿಂದ ಡಾಕ್ಟರೇಟ್ ಪಡೆದಿದ್ದಾರೆ. ಇಲ್ಲಿಯ ತನಕ ಹತ್ತು ಕೃತಿಗಳನ್ನು ಲೋಕಾರ್ಪಣೆ ಮಾಡಿರುವ ಶುಭಶ್ರೀ ಅವರಿಗೆ ಡಾ. ಹೆಚ್.ಡಿ.ಚೌಡಯ್ಯ ರಾಜ್ಯಮಟ್ಟದ ಸಾಹಿತ್ಯ ಪ್ರಶಸ್ತಿಯೂ ಸೇರಿದಂತೆ ಹಲವಾರು ಪ್ರಶಸ್ತಿಗಳು ಸಂದಿದೆ.



ಶುಭಶ್ರೀ ಅವರ ‘ಬ್ಯಾಂಕರ್ಸ್ ಡೈರಿ’ಯ ಪ್ರಸ್ತುತ ಲೇಖನಗಳು ಮೂಲತಃ ಅಂಕಣಗಳ ರೂಪದಲ್ಲಿ, ಮೈಸೂರಿನ “ಆಂದೋಲನ”ದ ಹಾಡುಪಾಡು ಸಾಪ್ತಾಹಿಕ ಪುರವಣಿಯಲ್ಲಿ ಹಾಗೂ “ದಿ ನ್ಯೂಸ್ನಾಪ್” ಅಂತರ್ಜಾಲೀಯ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಅಂಕಣ ಬರೆಹದ ಮಿತಿಯೊಳಗವಿತ 36 ಸ್ವಾರಸ್ಯಪೂರ್ಣ ಚಿತ್ರಲೇಖಗಳು 124+ ಪುಟದ ಪುಟ್ಟ ಪುಸ್ತಿಕೆಯಲ್ಲಿವೆ. ಮನವನ್ನು ಮರಗಟ್ಟಿಸುವ ಘಟನೆಗಳು ಚಚಿತ್ರವಾಗಿ ಕಣ್ಣನ್ನು ತೇವಗೊಳಿಸುತ್ತವೆ. ಓಹ್! ಬ್ಯಾಂಕರ್ಸ್ ಡೈರಿಯಲ್ಲಿ ಕಣ್ಣೀಕೆ ಒದ್ದೆಯಾಯಿತು ಅನ್ನುವಿರಲ್ಲವೇ!

ಕಾಗದದ ಹಣ, ಕಂಪ್ಯೂಟರಿನ ಮುಸುಕು, ಎತ್ತದ ತಲೆ, ಕರಾರುವಾಕ್ ಲೆಕ್ಕ ಮತ್ತು ಕಾನೂನುಗಳಲ್ಲಿ ಮುಳುಗಿದವರು, ಸಾಲ ಪಡೆಯಲೋ, ಬ್ಯಾಂಕಿಗೆ ಸಾಲ ನೀಡಲೋ {ಬ್ಯಾಂಕರ್ ದೃಷ್ಟಿ} ಬಂದವರಾ ಎಂದು ಮಿಂಚುಗಣ್ಣಲ್ಲಿ ಮಣೆಹಾಕಿ ಅಳೆಯುವವರು, ಸಹಜ ಸ್ಪಂದನೆಗಳನ್ನು, ಕೊನೆಪಕ್ಷ ಕೆಲಸದಲ್ಲಿ ಇಟ್ಟಿಲ್ಲದವರು. “ನಂಬಿದಂತಿರಬೇಕು, ನಂಬದಲೆಯಿರಬೇಕು, ಇಂಬರಿದು ಎಚ್ಚರಿರಬೇಕು” {ಮುಂದಿನ ಸಾಲು, ಇಲ್ಲಿ ಬೇಡ} ಎಂಬ ಸರ್ವಜ್ಞವಾಣಿಯಲ್ಲಿ ನಂಬಿಕೆಯಿಟ್ಟು ನಡೆವವರು

> **ಬ್ಯಾಂಕರ್ಸ್ ಡೈರಿ**
> ಲೇಖಕರು; ಡಾ ಶುಭಶ್ರೀ ಪ್ರಸಾದ್
> ಪ್ರಕಾಶಕರು: ಐಡಿಯಲ್ ಪಬ್ಲಿಕೇಷನ್ಸ್, ಮಂಡ್ಯ
> ಪ್ರಕಟಣೆ: 2023. ಪುಟ; 140 ಬೆಲೆ; ರೂ 140/–

ಬ್ಯಾಂಕರುಗಳೆಂಬುದು ಸಾರ್ವತ್ರಿಕ ಅಭಿಪ್ರಾಯ. "ಅಂಕಿ ಸಂಖ್ಯೆಯಕ್ಕರದಿ ತಾಳೆ ಹಾಕುತ್ತ ಬಾಳನಳೆಯುವರು" ಅನ್ನುವವರೂ, "ಸರಿ, ನೀವು ಬಿಡೀಪ್ಪಾ ಬ್ಯಾಂಕಿನವರು" ಅಂತ ಅರ್ಥವಾಗದ ಒಗಟು ಎಸೆಯುವವರು ಜೊತೆಗೆ.

ಇನ್ನು "ಬ್ಯಾಂಕರ್ಸ್ ಡೈರಿ"ಯಲ್ಲಿ ಏನಿರುತ್ತದೆ, ಕಟಬಾಕಿದಾರರ ಪಟ್ಟಿ, ಸಂಭಾವ್ಯ ಠೇವಣಿದಾರರು, ಹೊಸ ವ್ಯಾಪಾರ ನೀಡಬಲ್ಲ ಗ್ರಾಹಕರು, ಜೊತೆಗೆ ಸಾಮಾನ್ಯ ವಿಮೆ, ಜೀವವಿಮೆ ಮತ್ತು ಪರಸ್ಪರ ನಿಧಿಗಳಲ್ಲಿ ಹೂಡಿಕೆ ಮಾಡಬಹುದಾದ ಕುಳಗಳು ಇರುತ್ತಾರೆ ಅನ್ನುವಿರಲ್ಲವೇ!. ಕೆಲವು ಬ್ಯಾಂಕರುಗಳು, ಹಿರಿಯ ಅಧಿಕಾರಿಗಳ ಬೇಟಿ, ಅವರಿಗೆ ನೀಡಬೇಕಾದ ಪರತ್ಮಾಹಿತಿ, ತಾಲ್ಲೂಕು, ಜಿಲ್ಲೆ, ಪ್ರಧಾನ ಕಛೇರಿ ಹಾಗೂ ರಾಜ್ಯಮಟ್ಟದ ಸಭೆಗಳಲ್ಲಿ ಒಪ್ಪಿಸಬೇಕಾದ ಹಿನ್ನುಣಿಕೆ_.. ಇವುಗಳನ್ನು ಬರೆದಿಡಬಹುದು. ಮಲ್ಯ,, ಹರ್ಷದ್ ಮೆಹ್ತಾ, ನೀರವ್ ಮೊದಿ, ಮೆಹುಲ್ಚೋಕ್ಸಿ ಅವರುಗಳ ಹೆಸರು ಸಾಮಾನ್ಯ ಬ್ಯಾಂಕರುಗಳ ಬಳಿ ಇರುವುದಿಲ್ಲ. ಹಾಗಾದರೆ ಶುಭಶ್ರೀ ಏನನ್ನು ದಿನಚರಿಯಲ್ಲಿ ಬರೆದಿದ್ದಾರೆ? ಅದಕ್ಕೆ ಲೇಖಕರೇ ಉತ್ತರ ನೀಡಿದ್ದಾರೆ, "ಬ್ಯಾಂಕು ಎಂಬುದು ಹಣದ ಗಣಿ ಮಾತ್ರವಲ್ಲದೆ ಅನೇಕ ಅನುಭವಗಳ ಗಣಿಯೂ ಹೌದು. ಸುಮಾರು ಮುಮ್ವತ್ತು ವರ್ಷಗಳ ಬ್ಯಾಂಕಿಂಗ್ ಅನುಭವಕ್ಕೆ ನನ್ನೊಳಗಿನ ಸಾಹಿತಿ ಸ್ಪಂದಿಸಿದ್ದೇ ಬ್ಯಾಂಕರ್ಸ್ ಡೈರಿಯ ಹುಟ್ಟಿಗೆ ಕಾರಣವಾಯಿತು"

36 ಲೇಖನಗಳ ಏಕಸ್ರೋತವೆಂದರೆ ಮನದ, ಮಾನವತೆಯ ಮಿಡಿತವಾಗಿದೆ. ಬ್ಯಾಂಕೇ ಆಗಲಿ ಅಥವಾ ಜನ ಸಂಪರ್ಕ/ ಸೇವೆಯಲ್ಲಿ ತೊಡಗಿಕೊಂಡಿರುವ ಯಾವುದೇ ಸಾರ್ವಜನಿಕ ಖಾಸಗಿ ಸಂಸ್ಥೆ/ಉದ್ದಿಮೆಗಳಲ್ಲಿ ಮನುಷ್ಯತ್ವ ಮುಖ್ಯವೆಂಬುದನ್ನು ಲೇಖಕಿಯು ಹೃದಯಸ್ಪರ್ಷಿ ನಿರೂಪಣೆಯಿಂದ ಅಭಿವ್ಯಕ್ತಿಸಿದ್ದಾರೆ. ವಿಶೇಷವಾಗಿ, ಶುಭಶ್ರೀ ಅವರು ಅರೆ ಪಟ್ಟಣವೆನ್ನಬಹುದಾದ ಮಂಡ್ಯ ಮತ್ತು ಸುತ್ತಮುತ್ತಲಿನ ಗ್ರಾಮೀಣ ಪ್ರದೇಶಗಳಲ್ಲಿ ಕೆಲಸ ಮಾಡಿರುವವರು. ನಗರಗಳಂತಲ್ಲದೆ, ಇಂತಹ ಪ್ರದೇಶಗಳಲ್ಲಿ ಜನರು ವಹಿವಾಟುಗಳ ರೇಖೆಯನ್ನು ದಾಟಿದ ಪರಸ್ಪರ ಸಂಬಂಧಗಳೂ ಮುಖ್ಯವಾಗುತ್ತದೆ. ಮುಗ್ದಭಾವಗಳು ಅಲ್ಲಿ ಅರಳುತ್ತವೆ. ಯಾವುದೇ ಮುಚ್ಚುಮರೆಯಿಲ್ಲದೆ ತಮ್ಮ ನೋವುಗಳನ್ನು ಆತ್ಮೀಯರಲ್ಲಿ ಹಿಂಜರಿಕೆಯಿಲ್ಲದೆ ಹಂಚಿಕೊಳ್ಳುತ್ತಾರೆ. ತಮಗೆ ಮಾಡುವ ಸಣ್ಣಪುಟ್ಟ ಸಹಾಯಗಳೂ ಅವರಿಗೆ ಹಿತವಾಗುತ್ತವೆ. ಅವರಿಗೆ ಹಕ್ಕಾಗಿ ಬರುವ ಸವಲತ್ತುಗಳನ್ನು ಒದಗಿಸಿದರೆ ಉಪಕಾರವೆಂದು ಭಾವಿಸುತ್ತಾರೆ. ಕೃತಜ್ಞರಾಗಿರುತ್ತಾರೆ. ಲೇಖಕಿ ಇದೆಲ್ಲಕ್ಕಿಂತ ಹೆಚ್ಚಾದ, ತಮ್ಮ ಕಾರ್ಯಕ್ಷೇತ್ರವನ್ನು ಮೀರಿದ ಪರಸ್ಪರ ವೈಯಕ್ತಿಕ ಮನುಷ್ಯ ಸಂಬಂದಗಳನ್ನು ತಮ್ಮ ಗ್ರಾಹಕರೊಂದಿಗೆ ಬೆಳೆಸಿಕೊಂಡಿದ್ದಾರೆ. ಹಾಗಾಗಿ, ಅಕ್ಕನಂತೆ, ಅಮ್ಮನಂತೆ, ಗೆಳತಿಯಂತೆ ಭಾವಿಸಿ ಗ್ರಾಹಕರು ತಮ್ಮ ನೋವನ್ನು ಹಂಚಿಕೊಂಡಿದ್ದಾರೆ. ಇಂತಹ ಗಟ್ಟಿಪಾಕಗಳು ಇಲ್ಲಿನ ಅಂಕಣಗಳ ಮೂಲಕ ನಮ್ಮ ತಾಟಿಗೆ ಬಂದಿದೆ.

ವ್ಯಕ್ತಿಯೊರ್ವರು ಬ್ಯಾಂಕಿನ ಸಾಲ ಕಟ್ಟಿಲ್ಲ. ಅವರಿಗೆ ಕರೆ ಮಾಡಿದಾಗ ಹೊರಬೀಳುತ್ತದೆ ಭಯಾನಕ ಸತ್ಯ. ಪಿಂಚಣಿಯ ಅರ್ಧಭಾಗ ಔಷಧೋಪಚಾರಕ್ಕೆ ಹೋದರೆ, ಮಿಕ್ಕರ್ಧ ಹೆಂಡತಿಗೆ. ಮೈದುನನ ಮಾತು ಕೇಳಿ, ಕಟ್ಟಿಸಿದ ಮನೆಯಿಂದ ಹೊರಹಾಕಿದ್ದಾರೆ. "ದಯವಿಟ್ಟು ನನ್ನ ಮನೆ ಮಾರಿರಿ. ಸಾಲ ತೀರಿಸಿಕೊಂಡು ಉಳಿದ ಹಣವನ್ನು ನನಗೆ ಕೊಡಿ" ಎನ್ನುತ್ತಾರೆ. ಇದು ಒಂದು ಘಟನೆಯಾದರೆ, ತನ್ನ ಬಳಿ ಇರುವ ಹಣವನ್ನೆಲ್ಲಾ ಮೊಮ್ಮಗಳ ಮದುವೆಗೆ ಕೊಟ್ಟುಬಿಡುವ ಅಜ್ಜಿ ಇನ್ನೊಂದು ಕಡೆ. ಮತ್ತೊಂದು ಮನ ಕಲಕುವ ಘಟನೆ. ಗಂಡ, ಮಕ್ಕಳಿಲ್ಲದ, ಯುಜಿಸಿ ವೇತನ ಪಡೆದು ನಿವೃತ್ತಿಯಾದ ಮಹಿಳೆಗೆ ಉತ್ತಮ ಪಿಂಚಣಿ ಬರುತ್ತಿರುತ್ತದೆ. ಪಿಂಚಣಿಯ ಆಸೆಗೆ ಅವಳ ಅಣ್ಣನ ಮಕ್ಕಳು, ಮನೆಯ ಔಟ್ ಹೌಸಿನಲ್ಲಿ ಕಾಲಿಗೆ ಕಬ್ಬಿಣದ ಸರಪಳಿ ಹಾಕಿ ಕಟ್ಟಿಹಾಕಿರುತ್ತಾರೆ. ಸಹಿ ವ್ಯತ್ಯಾಸವಾಗಿದೆ, ಜೀವನ ಪ್ರಮಾಣಪತ್ರ ಬೇಕೆಂದು ಮನೆಗೆ ಹೋಗುವ ಬ್ಯಾಂಕ್ ಅಧಿಕಾರಿಗೆ, ಗುಟ್ಟನ್ನು ಅರಿಯದ ಮನೆಯ ಮಗುವು

“ಅಲಮ್ಮ ಔಟ್ ಹೌಸ್‌ನಲ್ಲಿದ್ದಾರೆ” ಎಂದು ಹೇಳಬಿಡುತ್ತದೆ. ಅಲ್ಲಿಗೆ ಹೋಗುವ ಬ್ಯಾಂಕ್ ಆಧಿಕಾರಿಯು ಪಿಂಚಣಿದಾರರ ದುಸ್ಥಿತಿಯನ್ನು ಕಣ್ಣಾರೆ ಕಾಣುತ್ತಾರೆ. ಪೋಲಿಸಿಗೆ ತಿಳಿಸಿ. ಅಲಮ್ಮನನ್ನು ಬಿಡುಗಡೆ ಮಾಡಿಸುತ್ತಾರೆ. ಇವುಗಳೆಲ್ಲಾ ಬ್ಯಾಂಕರುಗಳ ಕೆಲಸವಲ್ಲ. ಆದರೆ, ತಮ್ಮ ಬ್ಯಾಂಕಿನ ಕೆಲಸದ ಜವಾಬ್ದಾರಿಯನ್ನು ದಾಟಿ, ಸಾಮಾಜಿಕ ಜವಾಬ್ದಾರಿ ಮತ್ತು ಎಚ್ಚರವನ್ನು ಅವರು ತೋರಿಸುತ್ತಾರೆ. ಕೋರೊನಾ ಸಂದರ್ಭದಲ್ಲಿ, ಬ್ಯಾಂಕಿನ ನೌಕರರೂ, ಕೋರೊನಾ ಯುದ್ಧವೀರರೇ. ಹಲವರು ಕೋರೊನಾಗೆ ಬಲಿಯಾದರು. ಮುಖಗವಸು ಧರಿಸಿ, ದೂರದೂರ ಕುಳಿತು ರಾಷ್ಟ್ರದ ಸೇವೆಯನ್ನು ಮಾಡಿದರು. ಬ್ಯಾಂಕರ್ಸ್ ಡೈರಿ, ಇವುಗಳ ಬಗ್ಗೆ ಬೆಳಕು ಬೀರುತ್ತದೆ.

ಶುಭಶ್ರೀ ಅವರು ಬರೆದಿರುವ ಕೆಲವು ಅಂಕಣಗಳು, ಗಾತ್ರದಲ್ಲಿ ಚಿಕ್ಕದಾದರೂ, ತನ್ನಲ್ಲಿ ಸಣ್ಣಕಥೆ, ನೀಳ್ಗತೆ ಮತ್ತೆ ಕೆಲವು ಕಾದಂಬರಿಯಾಗುವ ಸತ್ವವನ್ನೂ ಹೊದಿವೆ. "ಸಂಬಂಧಗಳ ಮೌಲ್ಯ" ವೆಂಬ ಬರೆಹದಲ್ಲಿ ಈ ರೀತಿಯ ಹಲವಾರು ವಿಷಯಗಳಿವೆ. ಅದರಲ್ಲೊಂದು ಘಟನೆಯಲ್ಲಿ, ನಿವೃತ್ತ ಸಿಪಾಯಿಯೊಬ್ಬರು, ದ್ವಿಚಕ್ರವಾಹನದಿಂದ ಕೆಳಗೆ ಬಿದ್ದು ಮಿದುಳು ಬಳ್ಳಿಯನ್ನು ಮುರಿದುಕೊಳ್ಳುತ್ತಾರೆ. ಸಾಯುವ ಮುನ್ನ ತಮ್ಮ ಪುಟ್ಟ ಕಂದನಿಗೆ ವಿಡಿಯೋ ಮಾಡುತ್ತಾರೆ. ವಿಡಿಯೋದಲ್ಲಿ “ಹಾಯ್ ಚಿನ್ನು, ಪುಟ್ಟೂ. ನಾನು ನಿಮ್ಮಪ್ಪ. ನಿನಗೀಗ ಒಂದು ವರ್ಷ ಎಂಟು ತಿಂಗಳು. ನೀನು ಎಷ್ಟು ಮುದ್ದಾಗಿ ಪಪ್ಪಾ_ ಅನ್ನತ್ತೀಯಾ. ಅದನ್ನು ಕೇಳ ನನಗೆ ಸ್ವರ್ಗ. ಈಗಾಗಲೇ ನನಗೆಬೆಡ್ ಸೋರ್ ಆಗಿದೆ. ತುಂಬ ದಿನ ಇರಲ್ಲ. ನೀ ದೊಡ್ಡವಳಾದಾಗ ನಿಮ್ಮಪ್ಪ ಹೇಗೆ ಇದ್ರು, ಹೇಗೆ ಮಾತಾಡ್ತಾಯಿದ್ರೂ ಅಂತ ಗೊತ್ತಾಗಬೇಕಲ್ಲ ಅದಕ್ಕೇ ಈ ವಿಡಿಯೋ ಮಾಡಿದಿನಿ..” ಅಂತಾರೆ. ಅವರ ಹೆಂಡತಿ, ವಿಡಿಯೊವನ್ನು ಬ್ಯಾಂಕರ್‌ಗೆ ತೋರಿಸುತ್ತಾರೆ. ಅಂತಹ ವಿಶ್ವಾಸ.

ಡೈರಿಯಲ್ಲಿ ಇಂತಹ ಘಟನೆಗಳ ಜೊತೆಗೆ ಹಾಸ್ಯವಿದೆ. ಹರಟೆಯಿದೆ. ಲಘುವಾದ ರಮ್ಯ ಮಾತುಕತೆಗಳಿವೆ. ಈ ರೀತಿಯೂ ಇದೆಯಾ ಅನ್ನಿಸುವ ಘಟನೆಗಳು ಈ ಡೈರಿಯಲ್ಲಿವೆ.

ಮುಖ್ಯವಾಗಿ ನನಗೆ ಕಾಣಿಸಿದ್ದು, ಲೇಖಕಿಯ ಆರೋಗ್ಯಪೂರ್ಣವಾದ ಲೇಖನಿ. ಯವುದೇ ಪೂರ್ವಾಗ್ರಹವಿಲ್ಲದೆ, ಬಡವ ಬಲ್ಲಿದ, ಆ ಧರ್ಮ ಈ ಧರ್ಮ ಅಂತ ನೋಡದೆ ಸೇವೆ ಮಾಡಿದ್ದು, ತನ್ಮೂಲಕ ಎಲ್ಲರ ಪ್ರೀತಿ ವಿಶ್ವಾಸ ಗಳಿಸಿದ್ದು. ಅಷ್ಟೆ ನಿಷ್ಪಕ್ಷಪಾತವಾಗಿ ಘಟನೆಗಳನ್ನು ಚಿತ್ರಿಸಿದ್ದು. ಆಕರ್ಷಣೀಯವಾದ ಓದಿಸಿಕೊಂಡು ಹೋಗುವ ಪಳಗಿದ ಕೈ ಲೇಖಕಿಯದು. ಕಾಗುಣಿತದ ತಪ್ಪುಗಳಿಲ್ಲದೆ, ಅಂದವಾಗಿ ಮುದ್ರಿತವಾಗಿರುವ ಬ್ಯಾಂಕರ್ಸ್ ಡೈರಿಯು ಸುಂದರವಾದ ಘಟನಾವಳಿಗಳಿಗೆ ಹೊಂದುವ ರೇಖಾಚಿತ್ರಗಳಿಂದ ನಮ್ಮ ಮನಸೆಳೆಯುತ್ತದೆ. ಖ್ಯಾತ ಕಥೆಗಾರ ಅಬ್ದುಲ್ ರಶೀದ್ ಅವರ ಬೆನ್ನುಡಿ ಮತ್ತು ಸಾಹಿತಿ ಹಾಗೂ ಸಂಶೋಧಕರಾದ ಕಬ್ಬಿನಾಲೆ ವಸಂತ ಭಾರದ್ವಾಜ ಅವರ ಮುನ್ನುಡಿಯು ಪುಅಸ್ತಕದ ಮೌಲ್ಯವನ್ನು ಹೆಚ್ಚಿಸಿದೆ.

ಶುಭಶ್ರೀ ಅವರು ಪುಸ್ತಕದ ಪಂಚ್ ಲೈನ್ ನಲ್ಲಿ “ಕೂಡು ಕಳೆಯುವ ಬದುಕಿನ ಪುಟಗಳು” ಎಂದು ಹೇಳಿದ್ದಾರೆ. ಹಾಗೆಂದರೇನು? ಕೂಡಿ ಕಳೆದರೆ ಶೂನ್ಯವೇ ಉಳಿಯುವುದು ಅಲ್ಲವೇ? ಹಾಗಾದರೆ ಶೇಷವೇನೂ ಉಳಿಯದ ಬದುಕಿನಲ್ಲಿ, ಇರುವಾಗ ಏನಿರಬೇಕು ಅಂತ ತಮ್ಮ ಬರೆಹದ ಪುಟಗಳಲ್ಲಿ ತೋರಿಸಿದ್ದಾರೆ ಲೇಖಕಿ. ಶುಭಶ್ರೀ ಅವರಿಗೆ ಉತ್ತಮ ಕೃತಿಗಾಗಿ ಅಭಿನಂದನೆಗಳು.

***

ಪ್ರಹಸನ

ಆನಂದ - ಪರಮಾನಂದ

– ಜಿ. ವಿ. ಅರುಣ

ಪಾತ್ರಗಳು : 1. ಸೂತ್ರಧಾರ
2. ಆನಂದ – ಮಧ್ಯವಯಸ್ಸಿನ, ಮಧ್ಯಮ ವರ್ಗದ ಗೃಹಸ್ಥ
3. ಪರಮಾನಂದ – ಆನಂದನ ಸ್ನೇಹಿತ, ಅವನೂ ಮಧ್ಯವಯಸ್ಸಿನ, ಮಧ್ಯಮ ವರ್ಗದ ಗೃಹಸ್ಥ

(ರಂಗಸ್ಥಳದ ಎಡಭಾಗದಲ್ಲಿ ಆನಂದನ ಮನೆಯ ಕೋಣೆ; ಅಲ್ಲಿ ಒಂದೆರಡು ಕುರ್ಚಿ, ಒಂದು ಮೇಜು, ಅದರ ಮೇಲೆ ಒಂದು ಹಳೆಯ ಕಾಲದ ಫೋನ್. ರಂಗಸ್ಥಳದ ಬಲಭಾಗದಲ್ಲಿ ಪರಮಾನಂದನ ಮನೆಯ ಕೋಣೆ; ಅಲ್ಲಿ ಒಂದೆರಡು ಕುರ್ಚಿ, ಒಂದು ಮೇಜು, ಅದರ ಮೇಲೆ ಒಂದು ಹಳೆಯ ಕಾಲದ ಫೋನ್)

ಸೂತ್ರಧಾರ : ಗಜವದನ ಹೇರಂಭ
ನಮ್ಮೆಲ್ಲರ ಕಾಯೋ ದೊರೆಯೇ!
ನೆಮ್ಮದಿ ಸೌಖ್ಯ ನಮಗಿರುವಂತೆ,
ಕೆಮ್ಮು ನೆಗಡಿ ಬರದಿರುವಂತೆ,
ಚೀನೀ ರೋಗವು ಸೀಮೆಯ ದಾಟಿ
ಒಳಗಿನಿತೂ ನುಸುಳದಂತೆ,
ನಿತ್ಯದಿ ಕಾಯೋ ಸತ್ಯದಿ ಕಾಯೋ

ಓ ಆದಿ ವೈದ್ಯೇಶ್ವರನೇ,
ಔಷಧಗಳ ಮಾಲೀಕನೇ
ಗಜವದನ ಹೇರಂಭ
ನಮ್ಮೆಲ್ಲರ ಕಾಯೋ ದೊರೆಯೇ!

ಸೂತ್ರಧಾರ: ಈಗ ಪ್ರಹಸನ, ಆನಂದ – ಪರಮಾನಂದ, ಲೇಖಕರು ಹಾಗೂ ಆನಂದನ ಪಾತ್ರದಲ್ಲಿ ಶ್ರೀ ಜಿ. ವಿ. ಅರುಣ, ಗೃಹಸ್ಥ ಪರಮಾನಂದನ ಪಾತ್ರದಲ್ಲಿ ಬ್ರಹ್ಮಚಾರಿ ಶ್ರೀ ಗುರುರಾಜ ಶಾಸ್ತ್ರೀ;

***

(ಆನಂದನ ಮನೆಯಲ್ಲಿ ಫೋನ್ ರಿಂಗಣಿಸುತ್ತದೆ)

ಪರಮಾನಂದ: *(ಗೊಗ್ಗರು ಧ್ವನಿಯಲ್ಲಿ)* ಹಲೋ_

ಆನಂದ : *(ಗಂಟಲು ಕಟ್ಟಿದ ಧ್ವನಿಯಲ್ಲಿ)* ಹಲೋ_

ಪರಮಾನಂದ: ನಮಸ್ಕಾರ

ಆನಂದ: ನಮಸ್ಕಾರ_?

ಪರ: ಸ್ವಲ್ಪ ಆನಂದಂಗೆ ಫೋನ್ ಕೊಡಿ

ಆನಂ: ನೀವು ಯಾರು ಮಾತಾಡ್ತಾ ಇರೋದು?

ಪರ: ಅವನಿಗೆ ಕೊಡಿಪ್ಪಾ_ ನನ್ನ ಧ್ವನಿ ಕೇಳಿದ ತಕ್ಷಣ ಅವನಿಗೆ ಗೊತ್ತಾಗಿ ಹೋಗುತ್ತೆ!

ಆನಂ: ಹೌದಾ_?

ಪರ: ಖಂಡಿತವಾಗಿ ಹೌದು_

ಆನಂ: ನನಗೆ ಗೊತ್ತಾಗ್ತಿಲ್ವಲ್ಲ!?

ಪರ: ನಿಮಗೆ ಹೇಗೆ ಗೊತ್ತಾಗುತ್ತೆ ಸರ್? ಆನಂದನಿಗಾದರೆ ಗೊತ್ತಾಗುತ್ತೆ!

ಆನಂ: ನಾನೇ ಆನಂದ ಸ್ವಾಮಿ! ತಾವು ಯಾರು ಅಂತ ಈಗಲಾದರೂ ಹೇಳ್ತೀರಾ?

ಪರ: ಹೇ ತಮಾಷೆ ಮಾಡಬೇಡಿ ಸರ್. ಆನಂದನ ಧ್ವನಿ ನನಗೆ ಗೊತ್ತಾಗಲ್ವಾ!?

ಆನಂ: ಖಂಡಿತವಾಗಿ ನಾನೇ ಆನಂದ_ ಯಾರ ಮೇಲೆ ಆಣೆ ಮಾಡಲಿ ಹೇಳಿ ಸ್ವಾಮಿ?

ಪರ: ಆಣೆಗೀಣೆ ಎಲ್ಲ ಏನು ಬೇಡ. *(ಆಶ್ಚರ್ಯದಿಂದ)* ನೀನೇ ಆನಂದ ಏನೋ?

ಆನಂ: ಹೌದು. ನೀವು_?

ಪರ: ನಿನ್ನ ಧ್ವನಿಗೆ ಏನಾಗಿದೆಯೋ? ನಾನು ಪರಮಾನಂದ ಕಣೋ!

ಆನಂ: *(ಆಶ್ಚರ್ಯದಿಂದ)* ಹೌದೇನೋ!... ನಿನ್ನ ಧ್ವನಿಗೆ ಏನಾಗಿದೆಯೋ? ಒಳ್ಳೆ ಗೊಗ್ಗರು ಧ್ವನಿ ಬರ್ತಾ ಇದೆ

ಪರ: ನಿಂಗು ಹಾಗೆ ಕೇಳಸ್ತಾ ಇದೆಯೇನೋ? *(ಸಪ್ಪೆ ಧ್ವನಿಯಲ್ಲಿ)* ನನ್ನ ಹೆಂಡತಿ ನಿನ್ನೆಯಿಂದ ಹಾಗೇ ಹೇಳ್ತಿದಾಳೆ

ಆನಂ: *(ದೃಢವಾದ ಧ್ವನಿಯಲ್ಲಿ)* ಅವರು ನಿನ್ನ ವಿಚಾರದಲ್ಲಿ ಯಾವತ್ತೂ ಸರಿಯಾಗೇ ಹೇಳ್ತಾರಪ್ಪ

ಪರ: ಅದೇನೋ, ಸಮಯ ಸಿಕ್ಕಿದಾಗಲೆಲ್ಲ ನೀನು ಹೀಗೆ ನನ್ನ ಆಡಿಕೊಳ್ಳುವುದು ಇದ್ದೇ ಇದೆ. ಇರಲಿ ಬಿಡು. ನಿನ್ನ ಗಂಟಲಿಗೆ ಏನಾಯ್ತು ಮೊದಲ ಹೇಳು?

ಆನಂ: ಅಯ್ಯೋ ಅದೇನ್ ಕೇಳ್ತಿ. ಸ್ವಯಂಕೃತ ಅಪರಾಧ. ಮೊನ್ನೆ ಮಂಗಳವಾರ ಚಿಕ್ಕ ಕಡಲೇಕಾಯಿ ಪರಿಷೆಗೆ ಹೋಗಿದ್ದೆ. ನಮ್ಮ ಶಾಲಾದಿನಗಳು ನೆನಪಿಗೆ ಬಂತು. ಐಸ್ ತುರಿದು, ಕಡ್ಡಿಮೇಲೆ ಒತ್ತಿಹಿಡಿದು, ಬಣ್ಣಬಣ್ಣದ ಸಕ್ಕರೆನೀರು ಹಾಕಿ ಕೊಡ್ತಾರಲ್ಲ, ಐಸ್‌ಕ್ಯಾಂಡಿ ಅದನ್ನ ಎರಡು ತಿಂದೆ. ಆಮೇಲೆ ನಾಲ್ಕು ನಾಲ್ಕು ಬೋಂಡ, ಮೆಣಸಿನಕಾಯಿ ಬಜ್ಜಿ ತಿಂದೆ. ಹಿಟ್ಟೇನೋ ಆಗತಾನೆ ಕಲಸಿದ್ದರು. ಆದರೆ ಕರಿತಿದ್ದ ಎಣ್ಣೆ ಎರಡು ಮೂರು ದಿನ ಹಳೆಯದು. ಬೇರೆಬೇರೆ ಕಡಲೆಕಾಯಿಗಳನ್ನು ಕೊಂಡು ಮನೆಗೆ ಬರುವ ಹೊತ್ತಿಗೆ ಗಂಟಲು ಕೆರೆತ ಪ್ರಾರಂಭವಾಗಿತ್ತು. ಇನ್ನು ನಿನ್ನ ಸಮಾಚಾರ ಏನು? ಪೂರ್ತಿ ಕಥೆ ಹೇಳಬೇಡ. ನಾಲ್ಕೈದು ವಾಕ್ಯಗಳಲ್ಲಿ ಮುಗಿಸಪ್ಪ.

ಪರ: ಯಾಕೋ ಹೀಗೆ ಹೇಳ್ತಾ ಇದಿಯಾ? ಮೊದಲೆಲ್ಲ ನನ್ನ ಎಲ್ಲಾ ಮಾತನ್ನು ಕೇಳಿಸಿಕೊಳ್ಳುತ್ತಿದ್ದೆ. ಈಗ ನನ್ನ ಮಾತು ನಿನಗೂ ಬೋರ್ ಅನ್ನಿಸ್ತಾ ಇದೆಯಾ?"

ಆನಂ: ಖಂಡಿತ ಇಲ್ಲಪ್ಪ! ನಿನ್ನ ಗಂಟಲಿಗೆ ಹೆಚ್ಚು ಆಯಾಸ ಆಗದೆ ಇರಲಿ ಅಂತ ನಿನ್ನ ಮೇಲೆ ಕಾಳಜಿ ಅಷ್ಟೇ ಕಣಪ್ಪ. ಬೇಜಾರು ಮಾಡ್ಕೋಬೇಡ

ಪರ: ಓ ಹಾಗಾ, ಥ್ಯಾಂಕ್ಸ್. ಮೊನ್ನೆ ನನ್ನ ಮೊಬೈಲ್ ಮುಷ್ಕರ ಹೂಡಿಬಿಡ್ತು. ಸಿಮ್ ಬದಲಾಯಿಸಲು ಮನೆ ಹತ್ತಿರಾನೇ ಇರೋ ಹೊಸ ಮೊಬೈಲ್ ಕಂಪನಿಯ ಮಾರಾಟ ಕೇಂದ್ರಕ್ಕೆ ನಾನು, ನನ್ನ ಹೆಂಡ್ತಿ ಹೋದೆವು. ಒಳಗೆ ವಾತಾನುಕೂಲದ ದೆಸೆಯಿಂದ ತಣ್ಣಗಿತ್ತು. ಕೈಕೊಟ್ಟ ಸಿಮ್ ಮೇಲಿನ ಕೋಪ ಕೂಡ ಒಳಗೆ ಹೋದ ತಕ್ಷಣ ತಣ್ಣಗಾಗಿ ಹೋಗಿತ್ತು. ಅಲ್ಲಿ ಕೃತಕ ನಗೆ ಬೀರುತ್ತಾ ಕಂಪನಿಯ ಸಮವಸ್ತ್ರ ತೊಟ್ಟ ಸ್ವಾಗತಕಾರಿಣಿ ನಮಗೆ ಕುಳಿತುಕೊಳ್ಳಲು ಹೇಳಿದಳು.

ಆನಂ: ಅವಳು ನಿಮಗೆ ಕುಡಿಯಲು ಏನು ಬೇಕು ಸಾರ್ ಅಂದಳಾ.. ಏಯ್, ಅವನ್ನೆಲ್ಲ ಕತ್ತರಿಸಿ ಮುಖ್ಯ ವಿಚಾರಕ್ಕೆ ಬಾ_

ಪರ: ಓ_ ಸರಿ.. ಸರಿ. ನನ್ನ ಸಿಮ್ ವಿಚಾರ ತಿಳಿಸಿದಾಗ, ಮೊಬೈಲ್ ಸಂಖ್ಯೆ ಕೇಳಿದಳು, ಕಂಪ್ಯೂಟರ್ ನೋಡುತ್ತಾ ನನ್ನ ಹೆಸರನ್ನು ಖಾತರಿ ಪಡಿಸಿಕೊಂಡು ಆಧಾರ್ ಸಂಖ್ಯೆ ಹೋಲಿಸಿದಳು

ಆನಂ: ಹೊಸ ಸಿಮ್ ಕೊಡಬೇಕಾದರೆ ಅದೆಲ್ಲ ಆಗಬೇಕಾದ್ದೆ. ನಿನ್ನ ಭಾವಚಿತ್ರ ತೆಗೆದುಕೊಳ್ಳಲ್ವಾ?

ಪರ: ಹೂಂ, ಅದನ್ನೇ ಹೇಳ್ತದ್ದೆ. 'ಸರ್ ನನ್ನ ಮೊಬೈಲಿನಲ್ಲಿ ನಿಮ್ಮ ಮುಖದ ಭಾವಚಿತ್ರ ತಗೊಳ್ತೇನಿ. ಈ ಕಡೆ ಬನ್ನಿ' ಅಂತ ಹೇಳಿ ನನ್ನ ಹೆಂಡತಿ ಪಕ್ಕದಿಂದ ಎಬ್ಬಿಸಿ ಆ ಕಡೆ ನಿಲ್ಲಿಸಿದಳು. ನನಗೆ ಖುಷಿಯೋ ಖುಷಿ. 'ಹೊಸ ಸಿಮ್‌ಗೆ ನಿಮ್ಮ ಭಾವಚಿತ್ರನೂ ಕಳಿಸಿಬಿಡಿ. ಅದೇ ಮೊದಲ ಫೋಟೋ ಆಗ್ಲಿರ್ಲಿ' ಎಂದೆ

ಆನಂ: ಆಹಾ ಬುದ್ಧಿವಂತ ಅಂದ್ರೆ ನೀನೆ ಕಣೋ, ಅವಳು ಗುರಾಯಿಸಿ ಬಯ್ಯಲಿಲ್ವ_?

ಪರ: ಇಲ್ಲ, ಅವಳು ಬೈಲಿಲ್ಲ. ಆದರೆ ನನ್ನ ಹೆಂಡ್ತಿ 'ಅವಳು ಈ ಮೂತಿಯವರಿಗೆ ಹೊಸ ಸಿಮ್ ಕೊಟ್ಟಿದ್ದು ಅಂತ ದಾಖಲು ಮಾಡಲು ತಗೊಂಡ ಭಾವಚಿತ್ರ ಅದು. ಅವಳ ಫೋಟೋ ಬೇಕಂತೆ. ನಂಗೆ ಗೊತ್ತಿಲ್ವ, ಅವಳ ಫೋಟೋ ಜೊತೆ ಅವಳ ಮೊಬೈಲ್ ಸಂಖ್ಯೆನೂ ಸಿಗುತ್ತೆ ಅಂತ ನಿಮ್ಮ ದುರಾಲೋಚನೆ' ಅಂತ ಬೈದ್ಲು.

ಆನಂ: ನಾನು ಆಗಲೇ ಹೇಳಲಿಲ್ವಾ? ನಿನ್ನ ವಿಚಾರದಲ್ಲಿ ಅವರು ಯಾವತ್ತೂ ಸರಿಯಾಗೇ ಹೇಳ್ತಾರೆ

ಪರ: ಏನೋಪ್ಪ, ಆದರೆ ನಮ್ಮ ಜೊತೆ ಮಾತಾಡ್ತಾನೆ, ಆ ಸ್ವಾಗತಕಾರಿಣಿ ನಮ್ಮ ಹಿಂದೆ ನಿಂತವರನ್ನು ನೋಡುತ್ತಾ, ನಮ್ಮನ್ನು ನೋಡಿ ನಕ್ಕಿದ್ದಕ್ಕಿಂತ ಎರಡುಪಟ್ಟು ಹೆಚ್ಚು ಹಲ್ಲು ತೋರಿಸಿ ನಗುತ್ತಾ 'ಒಂದು ನಿಮಿಷ ಇವರದ್ದು ಆಗಿಹೋಯಿತು' ಎಂದು ಹೇಳ್ತಾ ಇದ್ಲು.

ಆನಂ: ಬಹುಶಃ ಅವಳ ಪರಿಚಯದವರು ಯಾರೋ ಇರಬೇಕು

ಪರ: ನಮಗೂ ಮೊದಲು ಹಾಗೆ ಅನ್ನಿಸಿತು. ನನ್ನ ಹೆಂಡ್ತಿ 'ಹಿಂದೆ ತಿರುಗಬೇಡಿ; ಮೊದಲು ನಮ್ಮ ಕೆಲಸ ಆಗಿ ಹೋಗ್ಲಿ' ಎಂದಳು. ಅವಳು ಮೂರನೇ ಸಲ 'ಇನ್ನೊಂದು ಅರ್ಧ ನಿಮಿಷ. ಇವರನ್ನು ಮುಗಿಸಿಬಿಟ್ಟು, ನಿಮ್ಮ ಕಡೆ ಗಮನ ಕೊಡುತ್ತೇನೆ' ಎಂದು ಹಲ್ಲುಗಿಂಜುತ್ತ ಹೇಳಿದಾಗ ನಾನು ಹಿಂದಿರುಗಿ ನೋಡಿದೆ. ಆಗ ನನ್ನ ಹಿಂದೆ ನಿಂತಿದ್ದ ಗಿಡ್ಡ ದೇಹದ, ಪುಟ್ಟ ಕಣ್ಣಿನ, ತೆಳುಹಳದಿ ಬಣ್ಣದ ವ್ಯಕ್ತಿ ಮತ್ತು ಅದೇ ರೀತಿ ಇತರ ಮೂವರು ಕಣ್ಣಿಗೆ ಬಿದ್ದರು. ಅವರನ್ನು ಬಾಯಿಬಿಟ್ಟುಕೊಂಡು ನಾನು ನೋಡುತ್ತಿದ್ದಾಗ, ಅವರೆಲ್ಲ ಕೃತಕ ನಗೆ ಬೀರುತ್ತಾ, ತಲೆಯನ್ನು ಮೇಲೆ ಕೆಳಗೆ ಆಡಿಸಿದರು. ನಾನು ತಲೆ ಆಡಿಸುವುದಕ್ಕೂ ಅವರಲ್ಲಿ ಒಬ್ಬ ಸೀನುವುದಕ್ಕೂ ಸರಿಹೋಯಿತು. ಅವನೇನೋ ಅತ್ತಕಡೆ ತಿರುಗಿ, ತನ್ನ ತೋಳನ್ನು ಅಡ್ಡ ಹಿಡಿದಿದ್ದ. ಅನಂತರ ಅವರೆಲ್ಲ ಕ್ಷಮೆಯಾಚಿಸಿ, ಒಂದು ಹೆಜ್ಜೆ ಹಿಂದೆ ಸರಿದರು. ತಮ್ಮ ಜೇಬಿನಿಂದ ಮಾಸ್ಕ್ ತೆಗೆದು ಮುಖ ಮುಚ್ಚಿಕೊಂಡರು. ಆಮೇಲೆ ಅದೇ ದಿನ ರಾತ್ರಿಯಿಂದ ನನಗೆ ಗಂಟಲು ಕೆರೆತ ಪ್ರಾರಂಭವಾಯಿತು.

ಆನಂ: ಪರಮಾನಂದ, ಈಗ ನನಗೆ ಆತಂಕ ಆಗ್ತಾ ಇದೆ ಕಣೋ. ಅವರು ಚೀನಿಯರೇನೋ?

ಪರ: ನಂಗೆ ತಿಳೀಲಿಲ್ಲಪ್ಪ. ಜಪಾನಿಗಳು, ಕೊರಿಯಾದವರು, ಚೀನಿಯರು, ಯಾಕೆ ನಮ್ಮ ಈಶಾನ್ಯ ಪ್ರದೇಶದವರೆಲ್ಲ ನನಗೆ ಒಂದೇ ತರ ಕಾಣ್ತಾರೆ. ನನ್ನ ಗಂಟಲು ಕೆರೆತ ಪ್ರಾರಂಭವಾದ ಮೇಲೆ ನನ್ನ ಹೆಂಡತಿಗೆ ಅವರು ಚೀನಿಯರೇ ಅಂತ ಮನದಟ್ಟಾಗಿ ಹೋಗಿದೆ. 'ಚೀನಾದಲ್ಲಿ ಅದೆಂತದೋ ಹೊಸ ರೋಗ ಪ್ರಾರಂಭವಾಗಿ ಬೇಗ ಹರಡುತ್ತಿದೆ. ನಮ್ಮ ದೇಶದಲ್ಲಿ ಆ ರೋಗ ಬಂದ ಮೊದಲನೆಯವರು ನೀವೇ ಆಗಿ ಹೋದರಲ್ರಿ' ಅಂತ ಅಳುವುದಕ್ಕೆ ಪ್ರಾರಂಭಮಾಡಿದಳು. ಮನೆಯವರೆಲ್ಲರೂ ನನ್ನನ್ನು ಕೋಣೆಯಲ್ಲಿ ಕೂಡಿ ಹಾಕಿಬಿಟ್ಟಿದ್ದಾರೆ ಕಣಯ್ಯ. ಈಗ 'ಆಂಬುಲೆನ್ಸ್ ತರಿಸ್ತೀವಿ ಆಸ್ಪತ್ರೆಗೆ ಸೇರಿಕೊಳ್ಳಿ' ಅನ್ನೋಕೆ ಪ್ರಾರಂಭ ಮಾಡಿದಾರೆ. ಹೇಗಾದರೂ ಮಾಡಿ ಕಾಪಾಡಯ್ಯ.

ಆನಂ: ನೋಡು ನಮ್ಮ ಡಾಕ್ಟ್ರು ನನಗೆ ಐದು ದಿನಕ್ಕೆ ಆಂಟಿಬಯಾಟಿಕ್ ಕೊಟ್ಟಿದ್ದಾರೆ. ಅವರ ಅಡ್ರೆಸ್ ಕಳಿಸ್ತೀನಿ. ಒಮ್ಮೆ ಭೇಟಿ ಮಾಡು ಅವರು ಏನು ಹೇಳಿದರೆ ಹಾಗೆ ಮಾಡು'

ಪರ: ಆದರೆ ನಾನು ಮನೆಯಿಂದ ಆಚೆ ಕಾಲಿಟ್ಟ ಮೇಲೆ, 'ಪೂರ್ತಿ ಆರೋಗ್ಯವಾಗಿದ್ದೀನಿ' ಅಂತ ಡಾಕ್ಟರ್ ಸರ್ಟಿಫಿಕೇಟ್ ಇಲ್ಲದೆ ಮನೆ ಒಳಗೆ ಬಿಡುವುದಿಲ್ಲ ಅಂತಿದ್ದಾರಪ್ಪ ಮನೆಯವರು. ವಾಲ್ಮೀಕಿಗೆ 'ನಿಮ್ಮ ಪಾಪ

ನಾವು ಹಂಚಿಕೊಳ್ಳಲ್ಲ' ಅಂತ ಅವನ ಮನೆಯವರು ಹೇಳಿದಾಗ ಹೇಗಾಗಿರಬಹುದು ಅನ್ನುವ ಅನುಭವ ನನಗೆ ಆಗಿಹೋಯ್ತಪ್ಪ.

ಆನಂ: ಹಾಗಾದ್ರೆ ಇರೋದು ಒಂದೇ ದಾರಿ. ಆಸ್ಪತ್ರೆಗೆ ಸೇರಿಬಿಡು

ಪರ: *(ಸ್ವಲ್ಪ ದುಃಖದ ಧ್ವನಿಯಲ್ಲಿ)* ಇನ್ನೊಂದು ದಾರಿನೂ ಇದೆ ಕಣಪ್ಪ_

ಆನಂ: ಏನೇನೋ ಕೆಟ್ಟ ಯೋಚನೆ ಮಾಡಬೇಡ_

ಪರ: ನೀನಿರುವಾಗ ನಾನು 'ಆ ಯೋಚನೆಯೆಲ್ಲ' ಯಾಕೆ ಮಾಡಲಿ ಹೇಳು_?

ಆನಂ: ಹಾಗಾದ್ರೆ ಬೇರೆ ಯಾವ ದಾರಿ?

ಪರ: ನೇರವಾಗಿ ನಿಮ್ಮ ಮನೆಗೆ ಬಂದು ನಾಲ್ಕೈದು ದಿನ ಸುಧಾರಿಸ್ಕೊಂಡು, ಆಮೇಲೆ ನಮ್ಮ ಮನೆಗೆ ಹಿಂದಿರುಗುವುದು!

ಆನಂ: ಅದು_ ಅದು_ ನನ್ನ ಹೆಂಡ್ತಿನ ಒಂದು ಮಾತು ಕೇಳಿ, ಆಮೇಲೆ ಫೋನ್ ಮಾಡ್ಲಾ?

ಪರ: *(ಸಂತೋಷದಿಂದ, ದಬಾಯಿಸುವ ಧ್ವನಿಯಲ್ಲಿ)* ಯಾಕಪ್ಪ? ನನ್ನ ಯಾವಾಗಲೂ ಆಡಿಕೊಂಡು, 'ನಮ್ಮನೆಗೆ ನಾನೇ ಯಜಮಾನ' ಅಂತಿದ್ದೆ! ಈಗ ಎಲ್ಲಿಗೆ ಹೋಯ್ತು ನಿನ್ನ ಯಜಮಾನಿಕೆ?

ಸೂತ್ರಧಾರ: *(ಫಲಿತಾಂಶವನ್ನು ಘೋಷಣೆ ಮಾಡುವವರಂತೆ)* ಆನಂದನ ಹುಸಿಹಿರಿಮೆಯ ಉಬ್ಬಿದ ಬೆಲೂನಿಗೆ ಪರಮಾನಂದನ ಈ ಒಂದು ಪ್ರಶ್ನೆಯ ಮುಳ್ಳು ಸರಿಯಾಗಿ ಚುಚ್ಚಿತ್ತು. ಆನಂದನ ಪರಿಸ್ಥಿತಿ ಕಂಡು, ಪರಮಾನಂದನಿಗೆ ಪರಮಾನಂದವಾಗಿತ್ತು!

(ಆನಂದ – ಪರಮಾನಂದ ಪ್ರಹಸನವನ್ನು ಯೂಟ್ಯೂಬ್‌ನಲ್ಲಿ ನೋಡಬಹುದು. ಅದರ ಕೊಂಡಿ: ***https://youtu.be/DuSY0Fe57Jg)***

***

ಸಮನ್ವಯ ಸಮಿತಿ, ಕನ್ನಡವೇ ಸತ್ಯ, ಸಾಹಿತ್ಯ ದಾಸೋಹ ವೇದಿಕೆ

ಸಂಪರ್ಕ ವಿಳಾಸ: ಶ್ರೀ ಬೆಂ.ಶ್ರೀ. ರವೀಂದ್ರ, 'ತವರು', 288, 3ನೆಯ ಮುಖ್ಯ ರಸ್ತೆ, 11ನೆಯ ಅಡ್ಡ ರಸ್ತೆ, 1ನೆಯ ಹಂತ, ವಸಂತ ವಲ್ಲಭ ನಗರ, ವಸಂತಪುರ, ಬೆಂಗಳೂರು – 560 061

ಚರವಾಣಿ: 9448994199 – ಇಮೇಲ್ ವಿಳಾಸ: bsrsbi1954@gmail.com

ಈ ಸಂಚಿಕೆಯ ಸಂಕಲನ, ವಿನ್ಯಾಸ : ಎಸ್. ಶೃಂಗೇಶ್ವರ ಶರ್ಮ –

ಚರವಾಣಿ: 9448291329 – ಇಮೇಲ್ ವಿಳಾಸ: sringeswar.sharma@gmail.com

ಸಾಹಿತ್ಯ ದಾಸೋಹ 220 ನಡೆದ ದಿನಾಂಕ: 16 ಡಿಸೆಂಬರ್ 2023

ಸಂಚಿಕೆಯ ಬಿಡುಗಡೆ ದಿನಾಂಕ: 13 ಜನವರಿ 2024 – ಶನಿವಾರ

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ವೇದಿಕೆ

ಸಾಹಿತ್ಯ ದಾಸೋಹ 220 - ಅಧ್ಯಕ್ಷರ ಅನಿಸಿಕೆಗಳು

– ವೆಂಕಟೇಶ ಕಾಮತ್

ಎಲ್ಲರಿಗೂ ನಮಸ್ಕಾರ. ನೋಡಿಯೋ ಸಾಹಿತ್ಯ ವೇದಿಕೆಯ ಸಂಚಾಲಕರು 220ನೇ ಸಾಹಿತ್ಯ ದಾಸೋಹದ ಅಧ್ಯಕ್ಷತೆ ವಹಿಸಬೇಕೆಂದು ಕೋರಿದಾಗ ನನಗೆ ಸ್ವಲ್ಪ ಅಳುಕು ಉಂಟಾಯಿತು. ಏಕೆಂದರೆ ದೊಡ್ಡ ದೊಡ್ಡ ವಿದ್ವಜ್ಜನರು, ಸಾಹಿತಿಗಳು, ಬರಹಗಾರರು, ಚಿಂತಕರು ತುಂಬಿರುವ ಈ ವೇದಿಕೆಯಲ್ಲಿ, ದಾಸೋಹದಲ್ಲಿ ಪ್ರಸ್ತುತಪಡಿಸುವ ಬರಹಗಳ ವಿಶ್ಲೇಷಣೆ ನನ್ನಿಂದ ಸಾಧ್ಯವೇ ಎಂದು. ಆದರೂ ಸಿಕ್ಕ ಅವಕಾಶವನ್ನು ಬಳಸಿಕೊಳ್ಳುವ ಉದ್ದೇಶದಿಂದ ಒಪ್ಪಿಕೊಂಡು, ದಾಸೋಹದಲ್ಲಿ ಪ್ರಸ್ತುತಪಡಿಸಿದ ಬರಹಗಳೆಲ್ಲವನ್ನೂ ಅವಲೋಕಿಸಿದ್ದೇನೆ. ದಾಸೋಹ ಆರಂಭವಾಗುವುದಕ್ಕೂ ಸಾಕಷ್ಟು ಮುಂಚೆಯೇ ತಮ್ಮ ಲೇಖನಗಳನ್ನು ನನಗೆ ಕಳುಹಿಸಿ, ಅವುಗಳನ್ನು ಪೂರ್ವಭಾವಿಯಾಗಿ ಓದಿಕೊಳ್ಳಲು ಅವಕಾಶ ನೀಡಿದ ಎಲ್ಲ ದಾಸೋಹಿಗಳಿಗೂ ವಂದನೆಗಳು. ತಮ್ಮೆಲ್ಲ ಬರಹಗಳನ್ನು ಕುರಿತಂತೆ ನನ್ನ ಅನಿಸಿಕೆಗಳನ್ನು ಇಲ್ಲಿ ಹಂಚಿಕೊಳ್ಳುತ್ತಿದ್ದೇನೆ.

1. ಶ್ರೀ ಕೆ.ಎನ್. ಭಗವಾನ್ – ನೆನೆದೇನು ಮೊದಲು (ಕವನ)

ಭಗವಾನ್‌ರವರು ಬರೆದಿರುವ 'ನೆನೆದೇನು ಮೊದಲು' ಒಂದು ಕವಿ ನಮನ. ಇದರಲ್ಲಿ ಇವರು ತಮ್ಮದೇ ಶೈಲಿಯಲ್ಲಿ ಮೊದಲಿಗೆ ಎರಡು ಪಂಕ್ತಿ ಮತ್ತೆ ಚತುರ್ಪಂಕ್ತಿಯ ಹದಿನೆಂಟು – ಹೀಗೆ ಒಟ್ಟಿಗೆ 74 ಸಾಲುಗಳ ನಮನದಲ್ಲಿ ಬಿ.ಎಂ.ಶ್ರೀಕಂಠಯ್ಯ, ಬೇಂದ್ರೆ, ಕುವೆಂಪು, ನಿಸ್ಸಾರ್, ರಾಜರತ್ನಂರಿಂದ ನವಪೀಳಿಗೆಯ ಉದಯಶಂಕರ್, ಕಾಯ್ಕಿಣಿಯವರ ಸಿನಿಮಾ ಸಂಗೀತಕ್ಕೂ ನಮನ ಸಲ್ಲಿಸಿರುವರು. ಇಲ್ಲಿ ನನಗೆ ವೈಯಕ್ತಿಕವಾಗಿ ಗಮನ ಸೆಳೆದದ್ದು ನರಸಿಂಹಸ್ವಾಮಿಯವರಿಗೆ ಸಂದ ನಮನ–

"ಮಲ್ಲಿಗೆಯ ಪರಿಮಳವ ನಾಡೆಲ್ಲ ಹರಡುತಲಿ
ಶಿಲೆಯ ಲತೆಯಲು ಇರುವಂತಿಗೆಯ ಬೆಳೆದರು.
ಸಾಲು ದೀಪವ ಹಚ್ಚಿ ನರಸಿಂಹ ಸ್ವಾಮಿಗಳು
ಪ್ರೀತಿ ಬದುಕನು ತೋರಿ ಹೆಜ್ಜೆ ಹಾಕಿದರು."

ಇದು ನಮ್ಮವರೇ ಆದ ಮಹಾಬಲ ಅವರ ಪೂಜ್ಯ ತಂದೆಯವರಿಗೊಂದು ಕವಿ ನಮನ.

ಭಗವಾನ್‌ರವರ ಕವಿತೆ ಮಕ್ಕಳಿಗೆ ಚಿತ್ರ ಕ್ವಿಜ್‌ನಲ್ಲಿ "ಇಲ್ಲಿ ಅಡಗಿರುವ ಹಣ್ಣುಗಳ ಅಥವಾ ಪ್ರಾಣಿಗಳನ್ನು ಗುರುತಿಸಿ" ಅಂದಂತೆ ಒಟ್ಟು ಎಷ್ಟು ಕವಿವರ್ಯರನ್ನು ನಮಿಸಿರಬಹುದು ಎಂದು ಗುರುತಿಸಲು ಹೊರಟರೆ ಎಲ್ಲರಿಗೂ ಬೇರೆ ಬೇರೆಯ ಉತ್ತರಗಳು ಸಿಗಬಹುದು. ಕೊನೆಯದಾಗಿ ಭಗವಾನರು "ತೋಚಿದುದ ಗೀಚಿಹೆನು ಬೇಕಿಲ್ಲ ಕೀರ್ತಿ" ಎಂದು ಮುಗಿಸಿದಾಗ ನನಗೆ ಎದೆ ತುಂಬಿ ಹಾಡಿದೆನು ಹಾಡಿನ 'ಯಾರು ಕಿವಿ ಮುಚ್ಚಿದರೂ ನನಗಿಲ್ಲ ಚಿಂತೆ' ನೆನಪಿಗೆ ಬಂದಿತು. ಭಗವಾನ್‌ರವರೆ, ಚೆಂದ ಬರೆದಿರುವಿರಿ, ಬರೆಯಿರಿ, ಬರೆಯುತ್ತಾ ಇರಿ.

2. ಶ್ರೀ ಬೆಂ.ಶ್ರೀ. ರವೀಂದ್ರ – 'ಬ್ಯಾಂಕರ್ಸ್ ಡೈರಿ' (ಪುಸ್ತಕ ಪರಿಚಯ)

ಇಂದಿನ ದಾಸೋಹದಲ್ಲಿ ಇಬ್ಬರು ಪುಸ್ತಕ ವಿಮರ್ಶೆಗಳನ್ನು ಪ್ರಸ್ತುತಪಡಿಸಿದ್ದಾರೆ. ರವೀಂದ್ರ ಅವರು ಡಾ.ಶುಭಶ್ರೀ ಪ್ರಸಾದ್ ಅವರ ಕೃತಿ 'ಬ್ಯಾಂಕರ್ಸ್ ಡೈರಿ' ಮತ್ತು ಮನೋಹರ ಗೋಖಲೆಯವರು 'ಶ್ರೀ ದೇರಾಜೆ ಸೀತಾರಾಮಯ್ಯ- ನೆನಪು ನೂರೆಂಟು ಗ್ರಂಥ' ಕೃತಿಯ ಬಗ್ಗೆ.

ರವೀಂದ್ರ ಅವರು ಶುಭಶ್ರೀ ಅವರ ಬ್ಯಾಂಕಿಂಗ್ ಅನುಭವಗಳನ್ನೊಳಗೊಂಡ ಒಂದು ಸುಂದರವಾದ ಕಥಾ ಸಂಕಲನವನ್ನು ಬಹಳ ಚೆನ್ನಾಗಿ ಬಣ್ಣಿಸಿದ್ದಾರೆ. ಇಲ್ಲಿ ಮೂಲ ಲೇಖಕರು ಹಾಗೂ ವಿಮರ್ಶಕರು ಇಬ್ಬರೂ ಬ್ಯಾಂಕ್ ವಾತಾವರಣದ ಒಳಹೊರಗಿನ ಆಗುಹೋಗುಗಳ ಬಗ್ಗೆ ಅರಿತುಕೊಂಡವರೇ. ನಾನು ಸಹ ಈ ಬಗ್ಗೆ ಕೆಲವೊಂದು ಅನುಭವಗಳನ್ನು ಹಂಚಿಕೊಂಡಿರುವೆ. ಬ್ಯಾಂಕ್ ಜೀವನದಲ್ಲಿ ಕಾರಣಾಂತರ ತಮ್ಮ ಮನೆಯವರನ್ನು, ನೆರೆಹೊರೆ ಯವರನ್ನು ಬಿಟ್ಟು ದೂರದೂರಿನಲ್ಲಿ ಕಾಲ ಕಳೆಯುವಾಗ ಕೆಲವೊಂದು ಸಂಬಂಧಗಳು ನಮ್ಮ ಮನದಾಳದಲ್ಲಿ ಆಚೊತ್ತಿ ಸದಾ ನೆನಪಲ್ಲಿ ಉಳಯುತ್ತವೆ ಕೆಲವರು ಬ್ಯಾಂಕಿಗೆ ಬಂದು, ಅಲ್ಲಿ ನಾವು ಕಾಣದಾದಾಗ ಪರವಾಗಿಲ್ಲಾ ನಾಳೆ ಬರುತ್ತೇವೆ ಎಂದು ಅಲ್ಲಿರುವ ಬೇರೆಯವರಿಂದ ಸೇವೆ ಸ್ವೀಕರಿಸುವುದೆ ಹೊರಟೇಬಿಡುತ್ತಾರೆ. ಇದೊಂದು ಬಗೆಯ ಬಾಂಧವ್ಯ, ಆತ್ಮೀಯತೆ. ರವೀಂದ್ರರು ಕೃತಿಯಿಂದ ಉಲ್ಲೇಖಿಸಿರುವ ಒಂದೆರಡು ಘಟನೆಗಳು, ಭಾವನೆಗಳ ಮಹಾಪೂರ ಹರಿದು ಕಣ್ಣು ತೇವಗೊಳಸುತ್ತವೆ. ಯಾರೂ ಸ್ವಭಾವತಃ ಕೆಟ್ಟವರಲ್ಲಾ. ಕೆಟ್ಟ ಪರಿಸ್ಥಿತಿ, ವಿಧಿ, ಕೆಟ್ಟದನ್ನು ಹೊರತಂದು ಒಳ್ಳೆಯವವರು ಅರಿಯದೆ ಮಾಡಿರುವ ಪಾಪಗಳನ್ನು ತೊಳೆದು ಉಜ್ವಲವಾದ ಭವಿಷ್ಯವನ್ನು ಕೊಡುತ್ತದೆ ಎಂದು ಸಮಾಧಾನಪಡಬಹುದು.

ರವೀಂದ್ರರ ಕೃತಿ ವಿಮರ್ಶೆ ಓದಿದಾಗ ನಾನು ಕೂಡ ನಮ್ಮ ಅನಿಸಿಕೆಯನ್ನು ವ್ಯಕ್ತಪಡಿಸುವ ಮೊದಲು 36 ಪ್ರಸಂಗಗಳ ಈ ಪುಟ್ಟ ಸಂಕಲವನ್ನೊಮ್ಮೆ ಓದಬೇಕಿತ್ತು ಅನಿಸುತ್ತದೆ. ರವೀಂದ್ರರೇ, ಒಳ್ಳೆಯ ವಿಮರ್ಶೆಗೆ ನಿಮಗೆ ಧನ್ಯವಾದಗಳು. ಶುಭಶ್ರೀ ಪ್ರಸಾದ್‌ರವರಿಗೆ ನಮ್ಮ ಅಭಿನಂದನೆಗಳನ್ನು ತಿಳಸಿ.

3. ವಿಠ್ಠಲ ಇಜೇರಿ – ಮೋಸ ಮಾಡುವವನಿಗೊಬ್ಬ ಗೂಸಾಕೊಡುವವನು (ನೀತಿ ಕತೆ)

ನಾನು ನಮ್ಮ ವೇದಿಕೆಯ ಶ್ರೀ ವಿಠ್ಠಲ್ ಇಜೇರಿಯವರ ದೊಡ್ಡ ಅಭಿಮಾನಿ. ವರುಷಗಳ ಹಿಂದೆ ಇವರು "ಮುಘಲ್ ಎ ಅಝುಮ್" ಚಲನಚಿತ್ರದ ಬಗ್ಗೆ ಬರೆದ ಲೇಖನ ನಾನು ಆ ಬಗ್ಗೆ ಗೂಗಲ್ ಒಳಹೊಕ್ಕು ಬಹಳ ವಿಚಾರವನ್ನು ತಿಳದು ಕೊಂಡೆ.

ಕಥೆ ಹೇಳುವುದು ಕೇಳುವುದು ಬಹಳ ಕಾಲದಿಂದ ನಡೆದು ಬಂದಿರುವ ಸಂಪ್ರದಾಯ. ಹೀಗೆಯೇ ಮಕ್ಕಳಗೆ ನಾವು ಕಥೆ ಹೇಳುತ್ತಿರವಾಗ ಅವು ಹ್ಞೂ ಹ್ಞೂ ಎಂದು ಹ್ಞೂಗುಡುವುದೇ ಒಂದು ಚೆಂದ. ಈಗ ಕಥೆ ಹೇಳಲು ಕೇಳಲು ತಂದೆ ತಾಯಿಯರಿಗೂ, ಮಕ್ಕಳಗೂ ಪುರುಸೊತ್ತಿಲ್ಲ. ನಮ್ಮ ಕಾಲದಲ್ಲಿ ಕಾಮಿಕ್ಸ್ ಅಮರ್ ಚಿತ್ರಕಥಾ ಕೂಡ ಬಂದಿರಲಿಲ್ಲ. ಅವು 'ಚಂದಮಾಮ'ದ ದಿನಗಳು. 'ಚಂದಮಾಮ' ಮಾಸಪತ್ರಿಕೆಯಲ್ಲಿ ಅರ್ಧ ಪುಟ ಚಿತ್ರ, ಅರ್ಧ ಪುಟ ಕಥೆ. ಪುರಾಣದ ಕಥೆಗಳು, ಅರೇಬಿಯನ್ ನೈಟ್ಸ್, ಪರೋಪಕಾರಿ ಪಾಪಣ್ಣ, ಅಕ್ಬರ್ ಬೀರಬಲ್, ತೆನಾಲಿರಾಮ ಮುಂತಾದ ಕಥೆಗಳು ಸುಂದರವಾಗಿ ಮೂಡಿಬರುತ್ತಿದ್ದವು. ನೀತಿ ಕಥೆಗಳು, ಪಂಚತಂತ್ರ ಇವು ಬುದ್ಧಿವಂತರಿಗೆ ಮಾತ್ರವಲ್ಲ,

ಎಂತಹ ಬುದ್ಧಿಮಾಂದ್ಯ ಮಕ್ಕಳಿಗೂ ಸದಾ ನೆನಪಿನಲ್ಲಿ ಉಳಿಯುವಂತೆ ಮತ್ತು ಜಾಣರಾಗಿ ಬದುಕುವ ಬಗ್ಗೆ ಉಪಾಯಗಳನ್ನು ಹೇಳಿಕೊಡುತ್ತಿದ್ದವು.

ಇಜೇರಿಯವರು ಪ್ರಸ್ತುತಪಡಿಸಿದ 'ಮೋಸ ಮಾಡುವವನಿಗೊಬ್ಬ ಗೂಸಾ ಕೊಡುವವನು', ಅನ್ಯಾಯದ ವಿರುದ್ಧ ಮುಗ್ಧನಿಗೆ ತಿರುಗೇಟು ಕೊಡಲು ಹಿತೈಷಿ ಹೇಳಿಕೊಡುವ ಉಪಾಯ. ಇಜೇರಿ ನಮ್ಮ ವೇದಿಕೆಯ ಮುಲ್ಲಾ ನಸ್ರುದ್ದೀನ್ ಎಂದರೆ ನನ್ನ ಮಟ್ಟಿಗೆ ಅದೊಂದು ಹೆಮ್ಮೆ ಕೊಡುವ ಹೇಳಿಕೆ. ಇಜೇರಿಯವರೇ, ನಾವು ಮರೆಯುತ್ತಿರುವ ಇಂತಹ ಕಥೆಗಳನ್ನು ನಮಗೆಲ್ಲಾ ನೆನಪಿಸಿ. ನಮ್ಮಲ್ಲಿ ಬಹಳವೇ ಜನರಿಗೆ ಕಥೆ ಕೇಳುವ ವಯಸ್ಸಿನ ಮೊಮಕ್ಕಳಿರುತ್ತಾರೆ. ಅವರಿಗೆ ಇಂತಹ ಕಥೆಗಳನ್ನು ಹೇಳೋಣ. ನನ್ನ ಮೊಮ್ಮಗ ಇನ್ನೂ ಚಿಕ್ಕ ಮಗು. ಕಥೆ ಹೇಳಲಾಗದು. ಜೋ ಜೋ ಶ್ರೀಕೃಷ್ಣ ಪರಮಾನಂದಾ... ಎಂದು ಹಾಡಿದರೆ ಕೇಳುತ್ತಾನೆ.

4. ಕಮಲಾಕ್ಷಿ ಸಿ ಆರ್. – ಚಮಚಾ.. ಚಮಚಾಗಿರಿ

ನಮ್ಮ ವೇದಿಕೆಯ ಬಹಳಷ್ಟು ಲೇಖಕ ಲೇಖಕಿಯರು ತಮ್ಮ ಬರವಣಿಗೆಯಲ್ಲಿ ನೈಜತೆಯನ್ನು ಎಷ್ಟೊಂದು ತುಂಬಿರುವರೆಂದರೆ ಇವುಗಳು ನಮ್ಮನ್ನು ನೋಡಿಯೇ, ಇಲ್ಲವೆ ನಾವು ಜೀವನದಲ್ಲಿ ಕಂಡ ಸಮೀಪದ ಕೆಲವರನ್ನು ನೆನಪಿಗೆ ಬರುವಂತೆ ಮಾಡುತ್ತಾರೆ. ಇವರ ಚಪಾತಿಯನ್ನು ಚಮಚದಿಂದ ತಿನ್ನುವದನ್ನು ಮರ್ಚೆಂಟ್ ನೇವಿಯಲ್ಲಿ ವಿದೇಶಗಳಲ್ಲೇ ಹೆಚ್ಚಿಗೆ ಸಮಯ ಕಳೆದು ಬರುತ್ತಿದ್ದ ಚಿಕಪ್ಪನ ನೆನಪು ತಂದಿತು. ಅವರು ಬಂದಾಗಲೆಲ್ಲಾ ಒಂದು ಮುಳ್ಳು ಸ್ಪೂನ್ ಫೋರ್ಕ್‌ನಲ್ಲೇ ಎಲ್ಲವನ್ನು ಸಲೀಸಾಗಿ ತಿನ್ನುತ್ತಿದ್ದರು. ಆ ಕಾಲದಲ್ಲಿ ಫೋರ್ಕನ್ನು ಮನೆಯಲ್ಲಿ ಜೋಪಾನವಾಗಿ ಇಡಬೇಕಿತ್ತು. ಇದು ಸುಲಭದಲ್ಲಿ ಸಿಗುತ್ತಿರಲಿಲ್ಲ.

ಇನ್ನು ಅನ್ವರ್ಥನಾಮದ ಚಮಚಾ, ಚಮಚಾಗಿರಿ ಬಗ್ಗೆ ಶೋಧಿಸಿದರೆ ಸಮಂಜಸವಾದದ್ದೇನೂ ದೊರೆಯಲಿಲ್ಲ. ಹೆಚ್ಚಿಗೆ ಯಾರನ್ನಾದರೂ ಹೊಗಳಿ ಕೊಂಡಾಡಿದರೆ ನೀನು ಅವರ ಚಮಚಾ ಅಥವಾ ದೊಡ್ಡ ಚಮಚಾ ಎಂದು ಕೀಟಲೆ ಮಾಡಿ ರೇಗಿಸುತ್ತಾರೆ. ಒಮ್ಮೊಮ್ಮೆ ಹೇಳಿದವರಿಗೆ ಇನ್ನೂ ಸಿಟ್ಟು ಬರಲೆಂದೋ 'ನಮ್ಮ ಅಭಿಮಾನ ಇದ್ದದ್ದೇ, ನಿಮ್ಮ ಲೇವಡಿ ಮಾತು ಬೇಕಿಲ್ಲ' ಎಂದು, 'ನಾನು ಚಮಚಾ ಅಲ್ಲಾ.. ನಾನು ದೊಡ್ಡ ಸೌಟು' ಅನ್ನುವುದು ಇದೆ. ಕಮಲಾಕ್ಷಿ ಅವರು ಹೇಳುವಂತೆ ಚಮಚ ಪುಟ್ಟದಾದರೂ ಚಿತ್ರಾನ್ನ ಬೆರೆಸುವಲ್ಲಿ, ಬಡಿಸುವಲ್ಲಿ ಬಹಳ ಉಪಯುಕ್ತ. ಇನ್ನು ಚಮಚಾಗಿರಿಯ ಕೆಟ್ಟ ಹೆಸರು ಬೇಡಾ...

ಕಮಲಾಕ್ಷಿ ಯವರೇ, ಸುಂದರ ಲೇಖನ ಬರೆದಿರುವಿರಿ, ಬರೆಯುತ್ತಾ ಇರಿ.

5. ಮಹಾಬಲ ಕೆ ಎನ್. – ಬಾಡಿಲೈನ್ (ಕವನ)

ಇತ್ತೀಚಿಗೆ ಮಹಾಬಲರವರು ಆಸ್ಟ್ರೇಲಿಯಾ ಪ್ರವಾಸವನ್ನು ಕೈಗೊಂಡಿದ್ದರು. ಅಲ್ಲಿಯ ಸಿಡ್ನಿ ಕ್ರಿಕೆಟ್ ಮೈದಾನವನ್ನು ಕಂಡಾಗ ಅಲ್ಲಿನ ಚಾರಿತ್ರಿಕ ಹಿನ್ನೆಲೆಯ ಕ್ರಿಕೆಟ್ ಕಂಡ ಈ ಬಾಡಿಲೈನ್ ದಾಳಿಯ ಬಗ್ಗೆ ಬರೆದ ಒಂದು ಸುಂದರ ಪುಟ್ಟ ಕವಿತೆ. "ನಾವಿಲ್ಲಿ ಕೇವಲ ಆಟ ಗೆಲ್ಲಲು ಬಂದವರು ಅಷ್ಟೆ". ನಾವು ಇದನ್ನು ಆಗಾಗ್ಗೆ ಎವ್ರಿಥಿಂಗ್ ಈಸ್ ಫೇರ್ ಇನ್ ಲವ್ ಅಂಡ್ ವಾರ್. ಇಲ್ಲಿ ವಿಜಯ ಒಂದೇ ಗುರಿ. ಗೆಲುವು ಅನುಸರಿಸಿದ ಮಾರ್ಗವನ್ನು ನ್ಯಾಯ ಪೂರ್ಣವಾಗಿಸುತ್ತದೆ ಎಂಬ ಧೋರಣೆಯಲ್ಲಿ ಎದುರಾಳಿಯನ್ನು ಘಾಯಳಾಗಿ ಸೋಲುವಂತೆ ಮಾಡಿದ ಡಗ್ಲಾಸ್

ಜಾರ್ಡಿನ್‌ನ ಚೆಂಡೆಸೆತ ಮುಂದಿನ ದಶಕಗಳಲ್ಲಿ ಚರ್ಚೆಯ ವಿಷಯವಾಯಿತು. 1980ರ ದಶಕದಲ್ಲಿ ಬೆಂಗಳೂರಿಗೆ ಟೆಲಿವಿಷನ್ ಬಂದಿತು. ದೂರದರ್ಶನದ ಒಂದೇ ಚಾನೆಲ್. ಕೆಲಸಮಯದಲ್ಲೇ ಕಲರ್ ಟಿವಿ ಬಂದಾಗ ವಾರದ ಒಂದು ದಿನ ಬುಧವಾರವೋ ಶುಕ್ರವಾರವೋ ಈ ಬಾಡಿಲೈನ್ ಸರಣಿಯನ್ನು ಪ್ರಸಾರ ಮಾಡಲಾಯಿತು. ಬಹಳ ಸುಂದರ ಚಿತ್ರಣ. ಆ ಕೆಂಪು ಚೆಂಡು ರಭಸದಿಂದ ಬಂದು ಬ್ಯಾಟಿಗನ ತಲೆಗೆ ಬಡಿದಾಗ ಆತ ನೆಲಕ್ಕೆ ಉರಳುವುದನ್ನು ಆರಂಭದ ಟೈಟಲ್ ಸಂಗೀತದೊಡನೆ ತೋರಿಸುತ್ತಿದದ್ದು ಈಗಲೂ ನೆನಪಿದೆ. ಈಗ 5-6 ತುಣುಕಿನ ಈ ಸರಣಿ ಲಭ್ಯವಿದೆ ಆಸಕ್ತಿ ಇದ್ದವರು ನೋಡಬಹುದು.

ಮಹಾಬಲರ ಬರವಣಿಗೆ ಬಲು ಸುಂದರ. ನಾನು ಹೋಗಳಬೇಕೆಂದಿಲ್ಲಾ, ಎಲ್ಲರಿಗೂ ಗೊತ್ತಿರುವ ವಿಷಯ. ಮಹಾಬಲರೇ ಬಹಳ ಚೆನ್ನಾಗಿದೆ, ನಿರಂತರ ಬರೆಯುತ್ತಲೇ ಇರಿ.

6. ಮನೋಹರ ಎಂ.ಗೋಖಲೆ – 'ದೇರಾಜೆ ಸೀತಾರಾಮಯ್ಯ ನೆನಪು ನೂರೆಂಟು' (ಸಂಸ್ಮರಣ ಗ್ರಂಥ ಪರಿಚಯ)

ಮನೋಹರ ಗೋಖಲೆಯವರ ಪ್ರಸ್ತುತಿ ಒಂದು ಗ್ರಂಥ ಪರಿಚಯ ಲೇಖನ – "ದೇರಾಜೆ ಸೀತಾರಾಮಯ್ಯ ನೆನಪು ನೂರೆಂಟು ಸಂಸ್ಮರಣ ಗ್ರಂಥ." ಗೋಖಲೆಯವರು ಬಹಳ ಶೃದ್ಧೆಯಿಂದ ಒಬ್ಬ ಯಕ್ಷಗಾನ ಕಲಾವಿದರ ಜೀವನ ಚರಿತ್ರೆಯನ್ನು ಓದಿ ಸುಂದರವಾದ ಸಂಕ್ಷಿಪ್ತವಾದ ವಿಮರ್ಶೆಯನ್ನು ನಮಗೆ ಕೊಟ್ಟಿದ್ದಾರೆ

"ಇವು ಯಕ್ಷಗಾನ ಕಲಾವಿದ ದೇರಾಜೆ ಸೀತಾರಾಮಯ್ಯ ಅವರ ಕುರಿತಾಗಿ ಹಿರಿಯರು ವ್ಯಕ್ತಪಡಿಸಿದ್ದ ಸಾಲುಗಳು. ಇವುಗಳನ್ನು ಇತ್ತೀಚೆಗೆ ಎಡನೀರು ಮಠದಲ್ಲಿ ಬಿಡುಗಡೆಗೊಂಡ "ದೇರಾಜೆ ಸೀತಾರಾಮಯ್ಯ ನೆನಪು ನೂರೆಂಟು" ಗ್ರಂಥದಿಂದ ಆರಿಸಿದವುಗಳಾಗಿವೆ" ಅನ್ನುತ್ತಾ ಗೋಖಲೆಯವರು ಶಿವರಾಮ ಕಾರಂತರು, ಜೀವೀ, ಎಚ್ಚೆಸ್ಕೆ, ಶ್ರೀಕಂಠಯ್ಯ ಮತ್ತಿತರರು ದೇರಾಜೆಯವರ ವ್ಯಕ್ತಿತ್ವವನ್ನು ಹೊಗಳುರುವ ಬಗ್ಗೆ ವಿವರ ನೀಡುತ್ತ 900ಕ್ಕೂ ಹೆಚ್ಚಿನ ಪುಟಗಳಿರುವ ಈ ಗ್ರಂಥದ ಸಾರಾಂಶವನ್ನು ತಿಳಿಸಿದ್ದಾರೆ.

ದೇರಾಜೆ ಸೀತಾರಾಮಯ್ಯನವರು ಯಕ್ಷಗಾನದ ಅಪ್ರತಿಮ ಕಲಾವಿದರು. ತಾಳಮದ್ದಳೆ ಕ್ಷೇತ್ರದ ಪ್ರತಿಭಾಶಾಲಿಗಳು ಮತ್ತು ಅಭಿಜಾತ ಸಾಹಿತಿಗಳು. ಸಂಸ್ಮರಣ ಗ್ರಂಥವು ದೇರಾಜೆ ಅವರ ಸಮಗ್ರ ವ್ಯಕ್ತಿತ್ವವನ್ನು ಸಮರ್ಥವಾಗಿ ಪರಿಚಯಿಸಿದೆ. ಅವರ ಬಹುಶ್ರುತತ್ವ, ಪ್ರತಿಭೆಯ ಹಲವು ಮುಖಗಳು, ಯಕ್ಷಗಾನ ಸಾಹಿತ್ಯಕ್ಕೆ ಅವರಿತ್ತಿರುವ ಅಪೂರ್ವ ಕೊಡುಗೆಯನ್ನು ಗೋಖಲೆಯವರು ಈ ಗ್ರಂಥವನ್ನು ಪರಿಚಯಿಸುವುದರ ಮೂಲಕ ತಿಳಿಸಿದ್ದಾರೆ. 100 ಪುಟಗಳ ಕೃತಿಯನ್ನು ಓದುವುದೇ ಕಷ್ಟವಾದ ಈ ದಿನಗಳಲ್ಲಿ ಇಷ್ಟು ದೊಡ್ಡ ಗ್ರಂಥವನ್ನು ಸಂಪೂರ್ಣವಾಗಿ ಓದಿ ಪರಿಚಯ ಮಾಡಿರುವ ಗೋಖಲೆಯವರು ಅಭಿನಂದನಾರ್ಹರು.

7. ಶೀಲಾ ಅರಕಲಗೂಡು – ಸ್ವಾವಲಂಬನೆ

ನಾ ಮೊದಲೇ ಹೇಳಿರುವಂತೆ ಕೆಲವೊಂದು ಬರಹಗಳು ನಮ್ಮ ಮನಸ್ಸನ್ನು ತಟ್ಟುತ್ತವೆ. ಇವು ನಮ್ಮ ಕೆಲವು ಅನುಭವಗಳೊಂದಿಗೆ ಹೆಣೆದುಕೊಂಡಿರುತ್ತವೆ. ಸ್ವಾವಲಂಬನೆಯ ಮೊದಲರ್ಧ ಜರ್ಮನಿಯಲ್ಲಿ ತಮ್ಮ ಕೆಲಸವೆಲ್ಲವನ್ನು ತಾವೇ ಮಾಡಿಕೊಳ್ಳಬೇಕಲ್ಲಾ ಎನ್ನುವ ಹುಡುಗನ ಮಾತು, ನಾನು ನಮ್ಮ ಮನೆಯ ಬಗ್ಗೆ ಯಾರೊಂದಿಗಾದರೂ

ಹೇಳುವಂತಹ "ನಮ್ಮ ಮನೇಲಿ ಸಸೂತ್ರವಾಗಿ ಎಲ್ಲ ನಡೆಯಬೇಕಾದರೆ ಅತಿ ಮುಖ್ಯ ವ್ಯಕ್ತಿ ಮನೆ ಕೆಲಸದವಳು. ಬೇರೆ ಎಲ್ಲರೂ ಒಬ್ಬರಲ್ಲಾ ಇನ್ನೊಬ್ಬರು ನಡೆಸಿಕೊಂಡು ಹೋಗುತ್ತಾರೆ ಆದರೆ ಮನೆ ಕೆಲಸದವಳಿಲ್ಲದಿದ್ದರೆ ಏನೂ ನಡೆಯದು. ಬೇರೆಯವರೆಲ್ಲಾ ಇವಳೊಬ್ಬಳಿದ್ದರೆ ಅವಳಿಂದ ಮಾಡಿಸಿ ತಾವು ಕೊಂಚ ಅದು ಇದು ಮತ್ತೊಂದು ಮಾಡಿ ನಿಭಾಯಿಸುತ್ತಾರೆ" ಎಂದು ಹೇಳಿದ ಹಾಗಿದೆ.

ಶೀಲಾ ಮುಂದೆ ರಾಮಕೃಷ್ಣ ಹೋಂನ ಭೇಟಿಯ ಬಗ್ಗೆ ಬರೆದಿರುವರು. ಇದು ವಿಶ್ವೇಶ್ವರಪುರಂನಲ್ಲಿದ್ದು, ಶ್ರೀ ಜೀವಿ ಯವರ ಎರಡನೇ ಮನೆ ಎನ್ನಬಹುದು. ಇಲ್ಲಿ ಹುಡುಗರು ಪ್ರೀತಿ ವಿಶ್ವಾಸ ಶಿಸ್ತು ಸ್ವಾವಲಂಬನೆಯ ಮಾದರಿ ಆಗಿದ್ದಾರೆ ಹಲವು ವರುಷಗಳ ಹಿಂದೆ ನಾನು ಇಲ್ಲಿಗೆ ಶ್ರೀ ಜಿ.ವಿ.ಅರುಣರ ತಾಯಿ ಶ್ರೀಮತಿ ಲಕ್ಷ್ಮಮ್ಮನವರ ವೈಕುಂಠ ಸಮಾರಾಧನೆಗೆ ಹೋಗಿದ್ದೆ. ಆಗ ಜೀವಿಯವರ ನಾಲ್ವರು ಮಕ್ಕಳೊಂದಿಗೆ ನಾನು ಬೇರೆ ಬೇರೆಯಾಗಿ ಫೋಟೋ ಹಿಡಿದು ಸಂತಸಪಟ್ಟೆ. ಇನ್ನೊಂದು ವಿಷಯವೆಂದರೆ ಈ ರಾಮಕೃಷ್ಣ ಹೋಂ ಇರುವಲ್ಲೇ ನನ್ನ ಏಳನೇ ತರಗತಿಯವರೆಗಿನ ವಿದ್ಯಾಭ್ಯಾಸ ಮತ್ತು ನನ್ನ ಅಕ್ಕ ಹತ್ತನೇ ತರಗತಿಯವರೆಗೆ ಓದಿದ ಭಾರತೀಯ ವಿದ್ಯಾಭವನ ಶಾಲೆ ಇತ್ತು. ಈಗ ಅವು ನೆಲಸಮಗೊಂಡಿವೆ. ಶೀಲಾ ಅವರ ಪ್ರಸ್ತುತಿ ಸುಂದರವಾದ ನೆನಪುಗಳನ್ನು ತಂದಿತು. ಧನ್ಯವಾದಗಳು ಮೇಡಂ, ಬರೆಯುತ್ತಾ ಇರಿ.

8. ಜಿ.ವಿ. ಅರುಣ – ಆನಂದ ಪರಮಾನಂದ (ಪ್ರಹಸನ)

ಇನ್ನು ಮುಂದಿನ ಪ್ರಸ್ತುತಿ ಒಂದು ಪ್ರಹಸನ. 'ಆನಂದ ಪರಮಾನಂದ'. ಲೇಖಕರು: ಜಿ.ವಿ.ಅರುಣ. ಅಭಿನಯಿಸಿದವರು: ಜಿ.ವಿ.ಅರುಣ ಹಾಗೂ ಗುರುರಾಜ ಶಾಸ್ತ್ರಿ.

ಅರುಣ ಅವರು ಅಧ್ಯಕ್ಷ ಸ್ಥಾನದಲ್ಲಿರುವ ನನಗೆ ತಮ್ಮ ಪ್ರಸ್ತುತಿ ಕಳಿಸಿ ನನ್ನ ಅಭಿಪ್ರಾಯ ಕೇಳಿದಾಗ ನಾನು 'ಇದನ್ನು ಎರಡು ಪಾತ್ರಗಳು ಅಭಿನಯಿಸಿದರೆ ಸೂಕ್ತ. ಒಬ್ಬರೇ ಪ್ರಸ್ತುತಿ ಓದಿದರೆ ಮಿಮಿಕ್ರಿಯಂತೆ ಎರಡು ಸ್ವರಗಳಲ್ಲಿ ಸಂಭಾಷಣೆ ಓದಬೇಕಾಗುತ್ತದೆ' ಅಂದೆ. ಅದರಂತೆ ಅರುಣ ಅವರು ಸೂತ್ರಧಾರನ ಪಾತ್ರವನ್ನೂ ಸೇರಿಸಿ ಶಾಸ್ತ್ರಿಯವರೊಡನೆ ಸುಂದರವಾಗಿ ಪ್ರಸ್ತುತಪಡಿಸಿ ನುರಿತ ಅಭಿನಯವನ್ನು ಪ್ರದರ್ಶಿಸಿದ್ದಾರೆ. ಒಮ್ಮೆ ಚಕ್ಕನೆ ನೋಡಿದಾಗ ಅರುಣರ ಪಾತ್ರದಲ್ಲಿ ಅವರ ಪೂಜ್ಯ ತಂದೆ ಜೀವಿಯವರು ಕಂಡರು. ಅವರು ನನಗೆ ಪರಮಪೂಜ್ಯರು.

ಅರುಣರವರ ಸ್ಕ್ರೀನ್ ಪ್ಲೇ ಸುಂದರವಾಗಿದೆ. ಮನಸ್ಸಿಗೆ ಆನಂದವನ್ನು ಕೊಟ್ಟಿದೆ. ಇದು ನಮ್ಮ ಗೂಗಲ್ ಮೀಟಿಂಗ್‌ನ ಒಂದು ಸಾಧ್ಯತೆಯನ್ನು ತೋರಿಸಿ ಇಂತಹ ಪ್ರಯೋಗಗಳನ್ನು ಆಹ್ವಾನಿಸಿದೆ. ಒಂದು ಕಥೆಯ ಚೌಕಟ್ಟಿಗೆ ಸ್ಕೆಲೆಟನ್ ಕೊಟ್ಟಲ್ಲಿ ಅರುಣ ಅವರು ತಮ್ಮ ಬಿಡುವಿನ ಸಮಯದಲ್ಲಿ ಸಂಭಾಷಣೆಯ ಜೀವ ತುಂಬಬಹುದು. ಅರುಣರವರೆ, ನಿಮ್ಮ ಲೇಖನಿಯಿಂದ ಇಂತಹ ಇನ್ನಷ್ಟು ಕೃತಿಗಳು ಮೂಡಿಬರಲಿ.

9. ಮಾಧುರಿ ಕೃಷ್ಣ – ನಾನೂ, ನನ್ನ ಸಹಪಾಠಿ ಮಿತ್ರನೂ (ಲೇಖನಮಾಲೆ)

ಮಾಧುರಿ ಕೃಷ್ಣ ಅವರ ಸರಣಿ ಬರಹ ಒಂದು ಸುಂದರ ಸುಮದುರ ನೆನಪುಗಳ ಭಂಡಾರ. ನನಗೆ ಇವರ ಬರವಣಿಗೆ ಇಂಗ್ಲಿಷ್‌ನ **PG Wodehouse**ನ ಲಘು ಹಾಸ್ಯಮಿಶ್ರಿತ ಬರಹದಂತೆ ಮನಸ್ಸಿಗೆ ಸಂತಸಕೊಡುವಂತಹ ಒಂದು ಅನುಭವ. ಇಲ್ಲಿ ಎಲ್ಲರೂ ನಾವು ದಿನನಿತ್ಯ ಕಾಣುವ ಅಕ್ಕಪಕ್ಕದವರೇ. ಕೀಟಲೆ ಮಾಡುವುದು, ಮುನಿಸಿನ ವರ್ತನೆ,

ಎಲ್ಲಕ್ಕೂ ಗಾಢವಾದ ಮಿತ್ರತ್ವದ ಲೇಪನ. ಇವರ ಬರಹ ಒಂದು **mood elevator** ಎನ್ನಬಹುದು. ಒಮ್ಮೊಮ್ಮೆ ಗೆಳೆತನದ ಒಂದು ಲೋಕಕ್ಕೆ ನಮ್ಮನ್ನು ಕೊಂಡೊಯ್ಯುತ್ತಿತ್ತು. ಈ ಪ್ರಸ್ತುತಿಯು ಈ ಸರಣಿಯ ಕೊನೆಯ ಕಂತು ಎಂದು ಸ್ವಲ್ಪ ಬೇಸರ ಮತ್ತು ನಾಯಕನ ಖಿನ್ನತೆ ಹೇಳದೆ ಇದ್ದ ಹಿನ್ನಲೆಯ ಕಥೆ. ಕೆಲವು ದುಃಖದ ತಂತಿ ಮೀಟಿದರೂ ಒಟ್ಟಿನಲ್ಲಿ ಸುಖಾಂತ. ಮಾಧುರಿಯವರೇ ಚೆಂದ ಬರೆಯುತ್ತೀರಿ. ಇನ್ನೊಂದೆರಡು ಮಿತ್ರರ ಬಗ್ಗೆಯೂ ಬರೆಯಿರಿ, ನಾವೆಲ್ಲಾ ಓದುತ್ತೇವೆ.

10. ಸರಸ್ವತಿ ನಟರಾಜ್ – ವಾಸ್ತವ

ಮುಂದಿನ ಪ್ರಸ್ತುತಿ ಸರಸ್ವತಿ ನಟರಾಜ್ ಬರೆದಿರುವ ಮಕ್ಕಳ ಮನಸ್ಸನ್ನು ತೋರಿಸುವ "ವಾಸ್ತವ". ಮಕ್ಕಳ ಮನಸ್ಸು ಮುಗ್ಧ. ಶಾಲೆಯಲ್ಲಿ ತರಗತಿಯಲ್ಲಿ ರ್‍ಯಾಂಕ್ ಪಡೆದಂತೆ ಪ್ರತಿಯೊಂದೂ ಸ್ಪರ್ಧಾಮನೋಭಾವ. ಬಡತನ ಕಷ್ಟ ಅರಿಯದ ವಿಷಯ. ತನ್ನ ಗೆಳೆಯನು ಕೊಟ್ಟ ಅತಿ ಕಡಿಮೆಯ ದಾನದ ಮಹತ್ವ, ಸ್ವಾಭಿಮಾನ, ಮನೆಯಲ್ಲಿನ ಜವಾಬ್ದಾರಿ, ಕಿಶೋರನ ಮೇಲಿನ ಈರ್ಷೆ ಮನುವಿನಲ್ಲಿ ಬದಲಾಗಿ ಜೀವನದ ಮೌಲ್ಯಗಳನ್ನು ಬಾಲ್ಯದಲ್ಲಿ ಅರಿಯುವುದು ಕಥೆಯ ಸಾರಾಂಶ. ಸರಸ್ವತಿ ನಟರಾಜರೇ, ಒಳ್ಳೆಯ ಪ್ರಸ್ತುತಿ. ಅಭಿನಂದನೆಗಳು.

11. ಡಾ. ಸತ್ಯವತಿ ಮೂರ್ತಿ – ನಾವು ಏಳು ಜನ (ಕವನ)

ಇದು ವಿಲಿಯಂ ವರ್ಡ್ಸ್‌ವರ್ಥ್‌ರ (**William Wordsworth 1770-1850**) ಬೆಲ್ಲಾಡ ಕಾವ್ಯಶೈಲಿಯ ಇಂಗ್ಲಿಷ್ ಕವಿತೆಯ ಕನ್ನಡ ಅನುವಾದ. ಒಂದು ಸುಂದರ ಕವಿತೆ.

ಒಂದು ಅನುವಾದಿತ ಕವಿತೆಯ ಭಾವಾರ್ಥ ಮೈಗೂಡದೆ ತನ್ನ ನೈಜ ಸೌಂದರ್ಯವನ್ನು ಗಂಭೀರತೆಯನ್ನು ಕಳೆದುಕೊಳ್ಳುವ ಸಂಭವವೇ ಹೆಚ್ಚು. ಅನುವಾದಕ/ಕಿ ಓದುತ್ತಿರುವ ಅನುವಾದಿತ ಕವಿತೆಯ ಚೌಕಟ್ಟು ಕಾಲ ಸಂಸ್ಕೃತಿ ಆಚಾರ ವಿಚಾರ ಸಮುದಾಯದ ನುಡಿಕಟ್ಟುಗಳ ಅರಿವಿನೊಂದಿಗೆ ಓದುಗನಿಗೆ ಮೂಲ ಮಹಾಕವಿಯ ಭಾವಾರ್ಥವನ್ನು ತನ್ನದೇ ಪರಿಸರದ ಆಡುಮಾತು ನಡೆನುಡಿಗೆ ಹೊಂದಿಕೊಂಡು ಚೆಂದ ಕಾಣುವುದೇ? ಇಲ್ಲಿ ಆಡು ಮಾತಲ್ಲಿ ಹೇಳುವುದಾದರೆ ಈ ಅನುವಾದವನ್ನು ಉಸರಿಸುವಾಗ ಬಂದ ಶಬ್ದಗಳು, ಉಂಟಾದ ಭಾವನೆಗಳು ಪೂಜ್ಯ ವಿಲಿಯಂ ವರ್ಡ್ಸವರ್ತ್‌ನ ದಿವ್ಯ ಆತ್ಮಕ್ಕೆ ಸಂತಸ ಕೊಡಲಿ. ತಪ್ಪು ಮಾಡಿದಾಗ ಇಂಗ್ಲೀಷ್ ಜನ ಹೇಳುತ್ತಾರೆ:

"His body will turn in his grave, If he hears this" (ಹಿಸ್ ಬಾಡಿ ವಿಲ್ ಟರ್ನ್ ಇನ್ ಹಿಸ್ ಗ್ರೇವ್, ಇಫ್ ಹಿ ಹೀಯರ್ಸ್ ದಿಸ್ – ಅವನು ಇದನ್ನು ಕೇಳದಲ್ಲಿ ಅವನ ಹೂತಿಟ್ಟ ದೇಹ ತನ್ನ ಪೆಟ್ಟಿಗೆಯಲ್ಲಿ ಶಾಂತಿ ಕಳೆದು ಹೊರಳಾಡುತ್ತದೆ).

ನಾನು ಸಲ್ಲದ ಅನುವಾದಗಳಗೊಂದು ಉದಾಹರಣೆ ಹೇಳದೆನಷ್ಟೆ. ಡಾ. ಸತ್ಯವತಿಯವರ ಅನುವಾದ ಬಹಳವೇ ಸುಂದರ.

ಮತ್ತೆ ಮತ್ತೆ ಕೇಳುತ್ತಾನೆ ಅವ ನೀವು ಎಷ್ಟು ಜನ
ಧೃತಿಗೆಡದೆ ಬರುತ್ತಿತ್ತು ಮತ್ತೆ ಮತ್ತೆ ಅದೇ ಮುಗ್ಧ ಉತ್ತರ
ನಾವು… ನಾವು ಏಳು ಜನ…

ಕಾಲ 1798 – 28ನೇ ವಯಸ್ಸಿನಲ್ಲಿ ವರ್ಡ್ಸ್‌ವರ್ತ್ ತಾನು ಕಂಡ ಗುಂಗುರು ಕೂದಲಿನ ಎಂಟು ವರುಷದ ಮುಗ್ಧ ಬಾಲೆಯೊಡನೆ ನಡೆಸಿದ ಸಂಭಾಷಣೆ, ಹಿಂದಿರುವ ದುಃಖದ ಕಥೆಗಳು, ಹಿಮ ತುಂಬಿದ ಜಾಗಗಳು, ಮನೆಯ

ಅಂಗಳದ ಹಿಂದಿರುವ ಸ್ಮಶಾನದ ನೆಲದ ಕೆಳಗೆ ಮಲಗಿರುವ ಹುಡುಗಿಯ ಅಕ್ಕ ಜೇನ್ ಮತ್ತೆ ಕೆಲಸಮಯದ ನಂತರ ಹಿಮದೊಡನೆ ಆಡಿ ನಿಮೋನಿಯಾಗೆ ಬಲಿಯಾದ ಅಣ್ಣ ಜಾನ್... ಅವರಿನ್ನೂ ತನ್ನೊಂದಿಗೆ ಇದ್ದಾರೆ ಎನುತ್ತಾಳೆ ಮುಗ್ದ ಮನಸ್ಸಿನ ಹುಡುಗಿ.

'ವೀ ಆರ್ ಸೆವೆನ್' ಎಂಬುದು ವರ್ಡ್ಸ್‌ವರ್ತ್‌ನ ಹತ್ತು ಅತ್ಯುತ್ತಮ ಕವಿತೆಗಳಲ್ಲಿ ಒಂದೆಂದು ಗುರುತಿಸಲಾಗಿದೆ. ಇದನ್ನು ಗೂಗಲ್ ಕೆದಕಿ ಹುಡುಕಿದರೆ ನೂರಾರು ಅಂಕಣಗಳು, ಚಿತ್ರಗಳು ದೊರೆಯುತ್ತವೆ. ಸತ್ಯವತಿಯವರು ಈ ಬಗ್ಗೆ ತಮ್ಮ ಸಂಶೋಧನೆ ನಡೆಸಿ ಹಲವು ಹದಿನಾರು... ಇಪ್ಪತ್ತಾರು ಕವಿತೆಗಳ ಸಂಕಲನವೊಂದನ್ನು ನಮ್ಮೆಲ್ಲರಿಗೆ ಕೊಡಲೆಂದು ಆಶಿಸುತ್ತೇನೆ. ಈ ಪ್ರಸ್ತುತಿಗೆ ಅಭಿನಂದನೆಗಳು, ಧನ್ಯವಾದಗಳು.

12. ನಾಗರತ್ನ ಚಂದ್ರಶೇಖರ್ – ಥ್ಯಾಂಕ್ಸ್‌ಗಿವಿಂಗ್ ಮತ್ತು ಬ್ಲಾಕ್ ಫ್ರೈಡೆ

ಇದೊಂದು ಪ್ರವಾಸ ಕಥನ. ನಾಗರತ್ನ ಅವರು ದೂರದ ಅಮೆರಿಕೆಯಲ್ಲಿ ವರುಷಕೊಮ್ಮೆ ಆಚರಿಸುವ ಥ್ಯಾಂಕ್ಸ್‌ಗಿವಿಂಗ್ ಹಾಗೂ ಬ್ಲಾಕ್ ಫ್ರೈಡೆಯ ಬಗ್ಗೆ ಅಲ್ಲಿಯ ಮಾಲ್‌ಗಳಲ್ಲಿ ನಡೆಯುವ ಸೇಲ್, ಮನೆಮನೆಗಳಲ್ಲಿ ಆಚರಿಸುವ ಪಾರ್ಟಿಗಳು, ಇವುಗಳ ಹಿನ್ನೆಲೆ, ನಡೆದುಬಂದ ದಾರಿ, ಎಲ್ಲದರ ಬಗ್ಗೆ ಶೋಧಿಸಿ ಬರೆದಿರುವ ಪ್ರವಾಸ ಕಥನವಾಗಿತ್ತು. ಕೆಲವೊಂದು ಫೋಟೋಗಳು ಇದ್ದಲ್ಲಿ ಲೇಖನ ಇನ್ನಷ್ಟು ಕಳೆ ಕಟ್ಟುತ್ತಿತ್ತು ಎನಿಸಿತು.

ಇದೊಂದು ಸಂಸ್ಕೃತಿ, ನಮ್ಮಲ್ಲಿಯ ನವರಾತ್ರಿ ಹೋಳಿ ಮತ್ತಿತರ ಸಂಭ್ರಮಗಳಂತೆ. ನಮ್ಮಲ್ಲಿ ಎಷ್ಟಿದ್ದರೂ ಸಾಲದು. ಈಗ ಅಲ್ಲಲ್ಲಿ ಫೆಬ್ರವರಿ 14ಕ್ಕೆ ವ್ಯಾಲೆಂಟೈನ್ ಡೇ ಮತ್ತು ಕೆಲವೆಡೆ ಅಕ್ಟೋಬರ್ ತಿಂಗಳ ಕೊನೆಯಲ್ಲಿ ಹೋಲೋವೀನ್. ದೆವ್ವ ಪಿಶಾಚಿಗಳಂತೆ ವೇಷಭೂಷಣ ಧರಿಸಿ ಮಕ್ಕಳು ಮತ್ತೆ ನನ್ನಂತೆ ಬೆಳೆಯಲು ಒಪ್ಪದ ಮುದಿ ಮಕ್ಕಳು ಎಲ್ಲರೂ ಸಂಭ್ರಮಿಸುತ್ತಾರೆ. ಇವುಗಳ ಹಿಂದೆ ಸುಂದರ ಕಥೆಗಳೂ ಇವೆ. ನಾಗರತ್ನ ಅವರು ಬಹಳ ಮಾಹಿತಿ ಒದಗಿಸಿದ್ದಾರೆ. ಇವರು ಹೀಗೆಯೇ ಇನ್ನೂ ಹಲವು ಸ್ಥಳಗಳು ಮತ್ತು ಆಚರಿಸುವ ಪದ್ಧತಿಗಳ ಬಗ್ಗೆ ಒಂದು ಪ್ರವಾಸ ಕಥನ ಬರೆದು ಆ ಸಂಕಲನವನ್ನು ನಮ್ಮೊಂದಿಗೆ ಹಂಚಿಕೊಳ್ಳಲೆಂದು ಆಶಿಸುತ್ತೇನೆ. ನಾಗರತ್ನ ಚಂದ್ರಶೇಖರ್‌ರವರ ಒಂದು ಒಳ್ಳೆಯ ವರ್ಣರಂಜಿತ ಪ್ರಸ್ತುತಿಗಾಗಿ ಅಭಿನಂದನೆಗಳು.

13. ಕೆ.ಆರ್.ವೆಂಕಟೇಶ್ – ಜೇನುಗೂಡು ಜೇನುನೊಣಗಳು ಹಾಗೂ ನಾನು

ಕೆ.ಆರ್.ವೆಂಕಟೇಶ್‌ರವರು ಬರಹದ ಮೊದಲ ಭಾಗವನ್ನು ಹಿಂದಿನ ದಾಸೋಹದಲ್ಲಿ ಪ್ರಸ್ತುತಪಡಿಸಿದ್ದರು. ಇವರು ನನ್ನ ಅಧ್ಯಕ್ಷತೆಯನ್ನು ಗೌರವಿಸಿ, ಹಿಂದಿನ ದಾಸೋಹದಲ್ಲಿ ನಾನು ಭಾಗವಹಿಸದೇ ಇದ್ದುದರಿಂದ ನನ್ನ ಅವಗಾಹನೆಗೆ ತಮ್ಮ ಬರಹದ ಮೊದಲಾರ್ಧವನ್ನೂ ಕಳುಹಿಸಿದ್ದರು. 'ಮನೋಹಂಸ' ವೆಂಕಟೇಶ್ ಅವರ ಲೇಖನ ತುಸು ದೀರ್ಘ ಎನಿಸಿದರೂ ಒಂದು ಕದನ ಸಾಹಸ ಅಡ್ವೆಂಚರ್ ಡ್ರಾಮಾದಂತೆ ಸಾಗುತ್ತದೆ. ಇಲ್ಲಿ ಮಲೆನಾಡಿನ ಸುಂದರ ವಾತಾವರಣ, ಗುಡ್ಡಗಾಡು ನಡುವಿನ ದೇವಸ್ಥಾನ, ಅಲ್ಲಲ್ಲಿ ಗೂಡು ಕಟ್ಟಿರುವ ಜೇನುನೊಣಗಳು, ಅವುಗಳ ಆಕ್ರಮಣ ನನಗೆ 1978ರಲ್ಲಿ ನಾನು ನೋಡಿದ **'Swarm'** ಆಂಗ್ಲಚಿತ್ರವನ್ನು ನೆನಪಿಗೆ ತಂದಿತು. ಇಲ್ಲಿ ವಿಜ್ಞಾನಿಯೋರ್ವನ ಪ್ರಯೋಗದ ದುಷ್ಪರಿಣಾಮವಾಗಿ ಜೇನುನೊಣಗಳ ಹಿಂಡುಹಿಂಡುಗಳು ನಗರವಾಸಿಯರನ್ನು ಕೊಲ್ಲುತ್ತವೆ. ಇದೊಂದು ಹೊರರ್ರ್ ಚಿತ್ರ. ವೆಂಕಟೇಶ್ ಅವರ ಚಿತ್ರಣ ಸುಂದರವಾಗಿದೆ. ಮನೆಯ ಸುತ್ತಮುತ್ತಲಲ್ಲಿ ನೊಣ ಕಡಿತದಿಂದ ಪಾರಾದ ಬಡಪಾಯಿ ದೂರದೂರಿನಲ್ಲಿ ಗ್ರಹಚಾರವೆಂಬಂತೆ ಕಾಡಿಸಿಕೊಳ್ಳುವುದು ವಿಪರ್ಯಾಸ. ಹೀಗಾದ್ರೆ ಮನೆ

ಹತ್ತಿರಾನೆ ಕಡಿಸಿಕೊಳ್ಳಬಹುದಿತ್ತೇನೋ ಎಂಬ ಒಂದು ಕೀಟಲೆಯ ಮಾತು ಬೇರೆ. ವೆಂಕಟೇಶರ ಬರಹ, ವ್ಯಾಕರಣ ಜೋಡಣೆ, ಮಂಡನೆ ಎಲ್ಲವೂ ಸುಂದರವಾಗಿವೆ. ತುಸು ದೀರ್ಘವೆನ್ನಬಹುದು. ವೆಂಕಟೇಶರೆ, ಅಭಿನಂದನೆಗಳು.

14. ಗಿರಿಜಾ ರಾಜ್ – ಮನಸ್ಸಿದ್ದರಾಯಿತು, ವಯಸ್ಸೇನು ಮಾಡೀತು

ಗಿರಿಜಾ ರಾಜ್ ಅವರ ಪ್ರಸ್ತುತಿ 'ಮನಸ್ಸಿದ್ದರಾಯಿತು ವಯಸ್ಸೇನು ಮಾಡೀತು' ಒಂದು ಲಘು ಹಾಸ್ಯ ಬರಹ. ಇದನ್ನು ಒಬ್ಬ ವಯಸ್ಸಾದ ಸೀನಿಯರ್ ಆರ್ಟಿಸ್ಟ್ ತೆಗೆದುಕೊಂಡು ಒಂದು ಒಳ್ಳೆ ಕಿರುಚಿತ್ರ ಮಾಡಬಹುದು. ಇದನ್ನು ಓದುವಾಗ ಇದರ ನಾಯಕಿಯ ಪಾತ್ರ ಮೊದಮೊದಲು ನನ್ನ ಅಮ್ಮನ ಹೋಲಿಕೆ ಕಂಡರೂ ಕೊನೆಗೆ ಈ ಸುಪ್ನಾತಿ ಸುಬ್ಬಮ್ಮ ನನ್ನನ್ನೇ ಹೋಲುತ್ತಾಳೆ ಎನಿಸಿತು. ನನಗೂ ಎಲ್ಲಿಲದ ಉತ್ಸಾಹ ಎಲ್ಲದರಲ್ಲೂ. ಅದರೊಡನೆ ಗಿರಿಜಾರವರ ಮಧುರ ಕಂಠದಿಂದ "ಹಾಲಲ್ಲಿ ಮಿಂದವಳೋ..." ಚಿತ್ರಣ ಸುಂದರವಾಗಿ ಮೂಡಿದೆ. ಅಂತ್ಯದಲ್ಲಿ ಸಸ್ಪೆನ್ಸ್, ಅರೋಗ್ಯ ಸುಧಾರಣೆ. ನಮ್ಮ ವಯಸ್ಸಲ್ಲಿ ಹೆಚ್ಚಿಗೆ ನಾವು ಡಾಕ್ಟರ್ ಬಳಿ ಹೋಗಿ ರಾಶಿ ಮಾತ್ರೆ ನುಂಗಿ ದಿನ ಕಳೆಯುತ್ತೇವೆ. ಒಂದು ಅದ್ಭುತದಂತೇ ನಾವು ಮಾಡುವ ವ್ಯಾಯಾಮ ಕಸರತ್ತು ಡಾನ್ಸ್ ನಮ್ಮ ಅರೋಗ್ಯ ಸುಧಾರಿಸುವಂತೆ ಮಾಡಿದಲ್ಲಿ ಒಂದು ಚಮತ್ಕಾರವಲ್ಲವೇ. ಗಿರಿಜಾ ರಾಜ್ ಅವರೇ, ಸುಂದರ ಬರಹ. ಅಭಿನಂದನೆಗಳು.

15. ಟಿ.ಎಸ್.ಶ್ರವಣಕುಮಾರಿ – ಕಣ್ಣಿನ ಶಸ್ತ್ರಚಿಕಿತ್ಸೆಯೆಂಬ ಕೂಸಿಲ್ಲದ ಬಾಣಂತನ

ಶ್ರವಣಕುಮಾರಿ ಅವರು ಬಹಳ ಸುಂದರ ಬರಹಗಾರ್ತಿ ಮತ್ತು ನಮ್ಮೆಲ್ಲರ ಮೆಚ್ಚಿನ ಲೇಖಕಿ. ಕೆಲವೊಂದು ಕಥಾಸಂಕಲನಗಳನ್ನು ಹೊರತಂದಿದ್ದಾರೆ. 'ಕಣ್ಣಿನ ಶ್ರಸ್ತ್ರಚಿಕಿತ್ಸೆಯೆಂಬ ಕೂಸಿಲ್ಲದ ಬಾಣಂತನ' – ಇದು ಅವರ ಲೇಖನಿಯಿಂದ ಹೊರಬಂದ ಡೈರಿಯ ಪುಟಗಳ ಲಘು ಹಾಸ್ಯಲೇಪಿತ ಲೇಖನ. ವರುಷಗಳ ಹಿಂದೆ ಇವರು ಬರೆದ 'ಬಂಗಲೆ ಮನೆ'ಯನ್ನು ತನ್ನ ಐಪ್ಯಾಡ್‌ನಲ್ಲಿ ಓದುತ್ತಿದ್ದ ಅಮ್ಮನ ಫೋಟೋ ನಾನು ಫೇಸ್ಬುಕ್‌ನಲ್ಲಿ ಹಾಕಿದ್ದೆ. ನೋಡಿ ಬಹಳ ಜನ ಪ್ರತಿಕ್ರಿಯಿಸಿದ್ದರು. ಈಗ ಎರಡು ವರುಷದಿಂದ ಅಮ್ಮನ ಅರೋಗ್ಯ ಕೆಟ್ಟಿದೆ. ಮೊದಲು ಶ್ರವಣ ಕುಮಾರಿಯವರನ್ನು ಕಂಡು ಬಹಳ ಚೆನ್ನಾಗಿ ಬರೆಯುತ್ತೀರಿ ಎಂದು ಹೇಳಬೇಕೆಂದು ಅನ್ನುತ್ತಿದ್ದರು ಅಮ್ಮ. ಕಣ್ಣಿನ ಶಸ್ತ್ರಚಿಕಿತ್ಸೆ.. ಸುಂದರ ಬರಹ ನನಗೂ ಪ್ರೋತ್ಸಾಹ ಕೊಟ್ಟಿತು. ಮಲಗಿದೆಡೆಯೆ ಶಸ್ತ್ರಚಿಕಿತ್ಸೆ ಮಾಡಲಾಗುವುದಾದರೆ ಅಮ್ಮನ ಕಣ್ಣಿನ ಪರೆ ತೆಗೆಸಬೇಕು ಅನಿಸಿತು. ನೋಡೋಣ.

ಕೆಲವೇ ನಿಮಿಷದ ಶಸ್ತ್ರಚಿಕಿತ್ಸೆಯ ನಂತರ ಡಿಸ್ಚಾರ್ಜ್ ಆಗಿ ಬಂದಮೇಲೆ ಮನೆಯವರ ಕಾಳಜಿ, ಶುಶ್ರೂಷೆ, ಪ್ರೀತಿ. ಸುಂದರವಾದ ಚಿತ್ರಣ. ಶ್ರವಣಕುಮಾರಿಯವರೇ ಅಭಿನಂದನೆಗಳು ನಿಮ್ಮ ಸುಂದರವಾದ ಪ್ರಸ್ತುತಿಗಳು ದಾಸೋಹದ ಕಳೆ ವರ್ಧಿಸುತ್ತವೆ.

16. ಮಾಲತಿ ಶ್ರೀನಿವಾಸನ್ – 'ಕಾಲಾಯ ತಸ್ಮೈ ನಮಃ' ಮತ್ತು 'ಕಳೆಯಿತು ಇಪ್ಪತ್ತೊಮ್ಮರರ ಸಂಭ್ರಮ' (ಎರಡು ಕವನಗಳು)

ಮಾಲತಿ ಶ್ರೀನಿವಾಸನ್‌ರವರು ಈ ದಾಸೋಹದಲ್ಲಿ ಪ್ರಸ್ತುತಪಡಿಸಿದ ಎರಡು ಕವನಗಳ ಪೈಕಿ ಒಂದನ್ನು ವಾಚಿಸಿ ಮತ್ತೊಂದನ್ನು ಸುಶ್ರಾವ್ಯವಾಗಿ ಹಾಡಿದರು.

"ಕಾಲ ನಿನ್ನ ಗತಿಯ ಪರಿಯೇನು ಅಚ್ಚರಿಯ
ಮೂಡಿಸಿದರೊಮ್ಮೆ ಗಮ್ಯ ತಲುಪುವ
ಸಂತಸ ತರುವುದು ಮತ್ತೊಮ್ಮೆ. "

ಮುಂದೆ

"ನಿನ್ನ ಮಾಯಾ ಲೋಕ ಏನೆಲ್ಲ ತೋರಿಸಿತು
ಇಲ್ಲವಾಗಿಸಿತು ತುಂಬಿದೆಲ್ಲವ, ಶೂನ್ಯದೆಡೆ
ಸೆಳೆದಿತ್ತು. ಹಿರಿಯರಿಗೆ ಹತ್ತಿರದವರಿಗೆ ಹೇಳ
ವಿದಾಯ, ಸಿದ್ದಳಾಗಿಹೆ ನಾನಿಂದು ಮುಂದಿನ
ಪಯಣಕ್ಕೆ"

ಹೌದು, ಕಾಲಕ್ಕೆ ಒಂದು ದೊಡ್ಡ ನಮಸ್ಕಾರ. ಒಮ್ಮೊಮ್ಮೆ ಅಚ್ಚರಿ, ಮಗದೊಮ್ಮೆ ಸಂತಸ ಸೃಷ್ಟಿಸಿಹುದು ಮಾಯಾಲೋಕ ಎಂದ ಲೇಖಕಿ ತಾನು ಯಾವುದಕ್ಕೂ ಸಿದ್ಧಳಾಗಿರುವೆ ಎನ್ನುತ್ತಾರೆ. ಹೌದಲ್ಲವೇ ...

ಇನ್ನು ಸುಶ್ರಾವ್ಯವಾಗಿ ಹಾಡಿದ 'ಕಳೆಯಿತು 23ರ ಸಂಭ್ರಮ' ಕವನ. ಈ ಹೆಸರು ಹಾಗೂ ಮೊದಲ ಸಾಲು ಅದೇನೋ ಏಕೋ 1967ರ ಪುಟ್ಟಣ್ಣ ಕಣಗಾಲರ ಬೆಳ್ಳಿಮೋಡ ಚಿತ್ರದಲ್ಲಿ ಪಿ.ಬಿ. ಶ್ರೀನಿವಾಸ್ ಹಾಡಿದ 'ಒಡೆಯಿತು ಒಲವಿನಾ ಕನ್ನಡಿ' ಹಾಡನ್ನು ನೆನಪಿಗೆ ತಂದಿತು.

ನೋಡು ನೋಡುತ್ತಾ 2023 ಕಳೆದೇಹೋಯಿತು. ನಾನೊಮ್ಮೆ ರವೀಂದ್ರರಿಗೆ 'ನಮ್ಮ ಎಷ್ಟೊಂದು ನೋಡಿಯೋ ಕಾರ್ಯಕ್ರಮಗಳು, ಪುಸ್ತಕ ಬಿಡುಗಡೆ ಮುಂತಾದ ಬಹಳ ಚೆಂದದ ಕಾರ್ಯಕ್ರಮಗಳನ್ನು ಮಾಡಿರುವೆವು. ಒಂದು ಸಂಕ್ಷಿಪ್ತ ವರದಿ ಮಾಡೋಣವೇ' ಎಂದೆ. ಯಾರಿಗೂ ಪುರಸೊತ್ತಿಲ್ಲಾ. ಅಂತೂ ಮುಗಿಯಿತು 23ರ ಸಂಭ್ರಮ, ತಂದಿತು 24ರ ಸಂಭ್ರಮ. *(2023ರ ಎಲ್ಲ ಕಾರ್ಯಕ್ರಮಗಳ ವರದಿ ಈ ಸಂಚಿಕೆಯಲ್ಲಿದೆ-ಸಂ)*

ಸುಂದರ ಪ್ರಸ್ತುತಿ ಮತ್ತು ಸುಶ್ರಾವ್ಯ ಹಾಡುಗಾರಿಕೆಗಾಗಿ ಮಾಲತಿಯವರಿಗೆ ಅಭಿನಂದನೆಗಳು. ಮುಂದುವರೆಯಲಿ ನಿಮ್ಮ ಸುಂದರ ಬರಹಗಳು.

17. ಗಣಪತಿ ಹೆಗಡೆ: ವರ್ಣೋತ್ಪತ್ತಿ:

ನಾನು ಶಾಲೆಯಲ್ಲಿದ್ದಾಗಿನ ಪಠ್ಯಪುಸ್ತಕದ ಒಂದು ಸಾಲು ನೆನಪಿಗೆ ಬರುತ್ತದೆ. 'ನೀರಿಳಿಯದ ಗಂಟಲಲ್ಲಿ ಕಡುಬು ತುರುಕಿದಂತಾಯ್ತು' – ಇದನ್ನು ಕವಿ ಮುದ್ದಣ ಹೆಂಡತಿ ಮನೋರಮೆಗೆ ಹೇಳುವ ಮಾತು. ಮುದ್ದಣ್ಣ ನಂದಳಿಕೆ ಎಂಬ ಉಡುಪಿಯ ಸಮೀಪದ ಊರಿನ ಕವಿ ಲೇಖಕ. ಗೌರವಾರ್ಥವಾಗಿ ಇಂದು ಕೂಡ ಉಡುಪಿಯ ಮುಖ್ಯ ರಸ್ತೆಯನ್ನು ಕವಿಮುದ್ದಣ ಮಾರ್ಗ ಎಂದೇ ಕರೆಯುತ್ತಾರೆ. ನಾವು ಕಲಿಯುವಾಗ ಮಾಥ್ಸ್ ಅಥವಾ ಗಣಿತ ನಮಗೆ ನೂರಕ್ಕೆ ನೂರು ಅನ್ನುವಾಗ ಎಲ್ಲಿಲ್ಲದ ಪ್ರೀತಿ. ಪ್ಯೂರ್ ಮ್ಯಾಥೆಮ್ಯಾಟಿಕ್ಸ್ ಎಂಬುದು ಬಂದಾಗ ನಮಗೆ ಏನೂ ಅರ್ಥವಾಗದು ಅನಿಸುವುದಿದೆ. ಆದರೆ ಈ ಪ್ಯೂರ್ ಮ್ಯಾಥೆಮ್ಯಾಟಿಕ್ಸನ್ನು ಜಾಮೂನು ತಿನ್ನುವಂತೆ ಖುಷಿ ಖುಷಿಯಾಗಿ ಬಿಡಿಸುವವರು ಬಹಳವೇ ಇರುತ್ತಾರೆ. ನಮಗೆ ಎಲ್ಲೊ ಸಂಸ್ಕೃತದಲ್ಲಿ ಪಾಣಿನಿಯ ಡಮರಿನಿಂದ ಶಬ್ದಗಳು ಹೊರಬಂದ ಕಥೆಯ ನೆನಪು. ಹೆಗಡೆಯವರ 'ವರ್ಣೋತ್ಪತ್ತಿ' ಒಮ್ಮೆ ಓದಿದ ನನಗೆ ಅರ್ಥವಾಯಿತೇನೆಂದರೆ ಇದು ಕಬ್ಬಿಣದ ಕಡಲೆ, ಇನ್ನು 3-4 ಬಾರಿ ಓದಿದರೂ ಅರ್ಥವಾಗದು ಎಂದು.

ಏನೆಂದು ತಿಳಿಯದೆ ಇದ್ದಾಗ ವೈದ್ಯರು ಸ್ಪೆಷಲಿಸ್ಟ್‌ರಿಗೆ ಕಳಿಸುವಂತೆ ಗಣಪತಿ ಹೆಗಡೆಯವರ ವರ್ಣೋತ್ಪತ್ತಿಯನ್ನು ದೂರ ಅಮೆರಿಕೆಗೆ ಶ್ರೀಮತಿ ರತ್ನಾ ಮೂರ್ತಿಯವರಿಗೆ ಕಳುಹಿಸಲಾಯಿತು. ರತ್ನಾ ಅವರು ಹೀಗೆ ಹೇಳುತ್ತಾರೆ :

'ಶ್ರೀ ಗಣಪತಿ ಹೆಗಡೆಯವರು ವೇದಿಕೆಯ ಅತ್ಯಂತ ಕ್ರಿಯಾಶೀಲ ಲೇಖಕರು. ಛಂದಸ್ಸು, ವ್ಯಾಕರಣ, ಸಂಸ್ಕೃತ, ಕನ್ನಡ ಸಾಹಿತ್ಯಗಳ ಆಳವಾದ ಅಧ್ಯಯನ ಮಾಡಿರುವವರು. ತಾಳಮದ್ದಲೆಯ ಅರ್ಥಧಾರಿಗಳಾಗಿಯೂ ಹೆಸರು ಮಾಡಿರುವವರು. ಧಾರಾವಾಹಿಯಾಗಿ ಇದೇ ವೇದಿಕೆಯಲ್ಲಿ ಹರಿದುಬಂದ ದ್ರೋಣ ಪೌರಾಣಿಕ ಕಾದಂಬರಿ, ಇದೇ ಕನ್ನಡ ರಾಜ್ಯೋತ್ಸವದ ತಿಂಗಳು ಪೂರ್ತಿ ಆದಿಕವಿ ಪಂಪನಾದಿಯಾಗಿ ಕನ್ನಡದ ಹೆಸರಾಂತ ಮೇರು ಕವಿಗಳಾದಿಯಾಗಿ, ಹಲವಾರು ಪ್ರತಿಭಾವಂತ ಅಜ್ಞಾತ ಕವಿಗಳ ಬಗ್ಗೆಯೂ ಪಾತಾಳಗರಡಿ ಹಾಕಿ ಅತ್ಯಮೂಲ್ಯವಾದ ವಿಷಯ ಕಲೆಹಾಕಿ ಲೇಖನಮಾಲೆಯನ್ನೂ, ಸಂಗ್ರಹ ಯೋಗ್ಯವಾದ ಮತ್ತೂ ಹಲವಾರು ಸರಣಿ ಲೇಖನಗಳನ್ನೂ ಕೊಟ್ಟಿರುವವರು. ಪ್ರತಿ ಸಾಹಿತ್ಯ ದಾಸೋಹದ ಅವರ ಪ್ರಸ್ತುತಿಗಳೂ ಸಾಹಿತ್ಯಾಭ್ಯಾಸಿಗಳಿಗೆ ಬಹಳ ಉಪಯುಕ್ತ ವೆನಿಸುವ ಬರಹಗಳಿಂದ ಕೂಡಿರುತ್ತವೆ. ವ್ಯಾಕರಣದ ಬಗೆಗಿನ ಲೇಖನ ಮಾಲೆಯ ಮುಂದುವರೆದ ಭಾಗವಾಗಿ ಮೂಡಿಬಂದಿರುವುದು ವರ್ಣೋತ್ಪತ್ತಿಯ ಬಗೆಗಿನ ಲೇಖನ. ಸಂವಹನ ಮಾಧ್ಯಮವಾದ ಶಾಬ್ದಿಕವಾದ ಮತ್ತು ಮೌಖಿಕವಾದ ಭಾಷೆಯಿನ್ನೂ ರೂಪುಗೊಂಡಿರದ ಕಾಲದ ಮೂಕಭಾಷೆಯಿಂದ ಆರಂಭಿಸಿ ಶಬ್ದೋಚ್ಚಾರದ ಆರಂಭಿಕ ಕಾಲ, ಅದು ಕ್ರಮೇಣ ಬೆಳವಣಿಗೆ ಹೊಂದಿರಬಹುದಾದ ಪ್ರಕ್ರಿಯೆಯ ವಿಶ್ಲೇಷಣೆ ಮಾಡುತ್ತ ಮೊದಲಿಗೆ ವರ್ಣಗಳು, ವರ್ಣಗಳಿಂದ ವಾಕ್ಯ ಇವುಗಳು ಬೆಳೆದುಬಂದಿರಬಹುದಾದ ಬಗೆಯನ್ನೂ ತಿಳಿಸುತ್ತ ನಮ್ಮ ದೇಹದ ಯಾವ ಯಾವ ಭಾಗಗಳ ಸಹಾಯದಿಂದ ಯಾವ ಯಾವ ಶಬ್ದ (ಅಕ್ಷರಗಳು) ಹುಟ್ಟುತ್ತದೆ ಎಂಬುದನ್ನು ಸೋದಾಹರಣವಾಗಿ ಕೇಶಿರಾಜನು ಕಟ್ಟಿಕೊಟ್ಟಿರುವ ಸೂತ್ರಗಳೊಂದಿಗೆ ವಿವರಿಸುತ್ತಾರೆ. ಈ ಶಬ್ದೋತ್ಪತ್ತಿಯ ಪ್ರಕ್ರಿಯೆಯನ್ನೂ ಇನ್ನೂ ಹೆಚ್ಚು ನಿಷ್ಕೃಷ್ಟವಾಗಿ ಸಂಸ್ಕೃತದ ಸಿದ್ಧಾಂತ ಕೌಮುದಿಯ ಸೂತ್ರಗಳೊಂದಿಗೆ ಪ್ರತಿಪಾದಿಸುತ್ತಾರೆ. ಒಂದು ಓದಿಗೆ ದಕ್ಕದ ಆದರೆ ನಿಧಾನವಾಗಿ ಅರ್ಥಮಾಡಿಕೊಳ್ಳಬೇಕಾದ ಬಹು ಉಪಯುಕ್ತ ವಿದ್ವತ್ಪೂರ್ಣ ಲೇಖನ ಕೊಡುತ್ತಿರುವ ಗಣಪತಿ ಹೆಗಡೆಯವರಿಗೆ ಅಭಿನಂದನೆಗಳು'.

ಗಣಪತಿ ಹೆಗಡೆಯವರೇ, ನಿಮ್ಮ ಕಾರ್ಯ ಅದ್ಭುತ. ನಿಮ್ಮ ಪ್ರಸ್ತುತಿ ಪ್ರತಿ ದಾಸೋಹಕ್ಕೂ ಅಗತ್ಯ.

18. ಸುವರ್ಣಲಕ್ಷ್ಮಿ – ತೊರೆದು ಜೀವಿಸಬಹುದೇ (ಕವನ – ಪೇರಡಿ/ಅಣಕವಾಡು)

ಸುವರ್ಣಲಕ್ಷ್ಮಿಯವರು ಪೇರಡಿ ಎಂದು ಕನಕದಾಸರ ಕ್ಷಮೆ ಕೋರಿ ಸುಶ್ರಾವ್ಯವಾಗಿ ಹಾಡಿದ ವಾಟ್ಸಪ್ಪ್‌ನ ಮಹಿಮೆಯ ಹಾಡು. ಇಂದು ಮತ್ತೆ ಹಿಂದೆಯೂ ಬಹಳ ಜನ ಈ ಪರೋಡಿ ಎಂದು ಅಥವಾ ಮೆಡ್ಲಿ ಎಂದು ಶಬ್ದವನ್ನು ರಾಗದ ಅಸ್ಥಿಪಂಜರಕ್ಕೆ ತೊಡಿಸಿ ಚೆಂದ ಕಾಣಿಸುತ್ತಾರೆ. ಇತ್ತೀಚಿಗೆ ಯಾರೋ ರಾಘವೇಂದ್ರ ಸ್ವಾಮಿಯ ಭಜನೆ 'ಹಾಲಲ್ಲಾದರೂ ಹಾಕು, ನೀರಲ್ಲಾದರೂ ಹಾಕು ರಾಘವೇಂದ್ರಾ' ವನ್ನು ಕರೋಕೆಯೊಂದಿಗೆ 'ಪುಟ್ ಮೀ ಇನ್ ಮಿಲ್ಕ್ ಪುಟ್ ಮೀ ಇನ್ ವಾಟರ್' ಎಂದು ಹಾಡಿ, ಹೇಗಿದೆ ಹೇಳಿ ಅಂದಾಗ ನಾನು 'ನನಗೆ ಒಪ್ಪದ ಕನ್ನಡ ಇಂಗ್ಲಿಷ್ ಶಬ್ದಗಳನ್ನು ಮುರಿದು ಹಾಡುವುದು ಹಿಡಿಸೋದಿಲ್ಲಾ, ಬೇಕಾದರೆ ಕೃಷ್ಣಾ ನೀ ಬೇಗನೆ ಬಾರೋ ಹರಿಹರನ್ ಕೊಲೊನಿಯಲ್ ಕಸಿನ್ ಇಂಗ್ಲಿಷ್ ಕನ್ನಡದಲ್ಲಿ ಹಾಡಿದಂತೆ ಹಾಡಿ. ಅದರಲ್ಲಿ ಇಂಗ್ಲಿಷ್ ಹಾಗು ಕನ್ನಡ ಎರಡು ಹೇಗಿರಬೇಕೋ ಹಾಗೆ ಇವೆ' ಅಂದೆ. ಸುವರ್ಣಲಕ್ಷ್ಮಿಯವರ ಕಂಠ ಸುಂದರವಾಗಿದೆ. ಚೆಂದವಾಗಿ ಹಾಡಬಹುದು. ವಾಟ್ಸಪ್ ಇಲ್ಲದೆ ಇಂದಿನ ದಿನಗಳು ಕಠಿಣವೆನಿಸುವುದಂತೂ ಸತ್ಯ.

19. ರಾಧಿಕಾ ವಿ ಗುಜ್ಜರ್ – ಶ್ರೇಷ್ಠ ಹೂವುಗಳು

ಇಲ್ಲಿ ಹೂದೋಟದ ಹೂಗಳು ಮತ್ತು ಹೂ ಮನಸ್ಸಿನ ಪುಟ್ಟ ಪುಟ್ಟ ಮಕ್ಕಳ ಮುಗ್ಧ ಭಾವನೆಗಳ ಸುಂದರ ಚಿತ್ರಣವಿದೆ. ಚೆಂದ ಕಂಡ ಹೂಗಳನ್ನು ಅನುಮತಿ ಇಲ್ಲದೆ ಕೀಳಬಾರದಿತ್ತು ಎಂದು ತಪ್ಪೊಪ್ಪಿ ಕ್ಷಮಾಪಣೆ ಕೇಳುವ ಮುಗ್ಧ ಬಾಲಕನ

ಅಳಕು ಇದು ಅಷ್ಟೊಂದು ದೊಡ್ಡ ತಪ್ಪೇನು ಎನ್ನುವಂತೆ, ಹಾಗೆಯೇ ಶಿಸ್ತಿನ ಕಲಿಕೆ ಮತ್ತು ಮನ ನೋಯಿಸದೆ ಸಮಾಧಾನ. ರಾಧಿಕಾ ಅವರ ಮನೆಗೆ ಹೋಗಿ ನನ್ನ ಪಾಲಿನ ಬಾಕರವಡಿ ತಿನ್ನಲು ಮನಸ್ಸಾಯಿತು. ರಾಧಿಕಾರವರೆ, ಸುಂದರವಾಗಿ ಬರೆಯುತ್ತಿರಿ. ನಿಮ್ಮ ಪ್ರಸ್ತುತಿಯನ್ನು 8-10 ನಿಮಿಷದ ಕಿರುಚಿತ್ರವಾಗಿ ತೆಗೆದರೆ ಸುಂದರ ಹೂದೋಟ ಸುಂದರ ಹೂಗಳು ಪುಟಾಣಿ ಮಕ್ಕಳೊಂದಿಗೆ ಬಹಳ ಸುಂದರವಾಗಿ ಮೂಡಿಬರುತ್ತದೆ, ಪ್ರಯತ್ನಿಸಿ.

20. ಪೂರ್ಣಿಮ ಭಗವಾನ್ – ಮಣಿ ಮನೆ ಕತೆ

ನಾನು ಈಗಾಗಲೇ ಹಲವು ಸಲ ಹೇಳಿರುವಂತೆ ಕೆಲವೊಂದು ಕಥೆಗಳು ನಮ್ಮ ಜೀವನದ ನೆನಪುಗಳ ಕನ್ನಡಿ. ಪೂರ್ಣಿಮಾರ ಬರಹ ಕಹಿ ನೆನಪುಗಳ ಸುಂದರ ಚಿತ್ರಣ. ನನ್ನ ತಾಯಿಯವರ ಕುಟುಂಬದಲ್ಲೂ ಹೆತ್ತು ಸತ್ತು ಹಾಗೂ ಹೀಗೂ ಉಳಿದವರು 8 ಜನ. ಅದರಲ್ಲಿ ನಾಲ್ವರು ಅಕ್ಕತಂಗಿಯರು ನಾಲ್ವರು ಅಣ್ಣತಮ್ಮಂದಿರು. ಒತ್ತು ಶಾವಿಗೆ ನಮ್ಮೆಲ್ಲರ ಮೆಚ್ಚಿನ ಮುಂಜಾನೆಯ ಉಪಾಹಾರ. ಇದರ ಫೋಟೋ ಫೇಸ್ಬುಕ್‌ನಲ್ಲಿ ಹಾಕಿದಾಗ ಬರುವ ಲೈಕ್ ಮತ್ತು ಕಾಮೆಂಟ್ಸ್ ಬಹಳ.

ನಾನು ಹೇಳುತ್ತಿರುವುದು 1962-63ರ ಮಾತು. ಹಳೆ ಕಾಲದ ಬಡತನ, ದುಡಿಯುವ ಮನುಷ್ಯ ಒಬ್ಬನಾದರೆ ಕುಳಿತು ತಿನ್ನುವವರು 8-10. ಸ್ವಾತಂತ್ರ್ಯ ಸಿಕ್ಕಿ 15 ವರುಷಗಳಾಗಿದ್ದವು. ಆಗ ನಾವು ವಾಸಿಸುತ್ತಿದ್ದುದು ಶಿವಾಜಿ ಥಿಯೇಟರ್ ಹಾಗು ಭಾರತ್ ಥಿಯೇಟರ್ ನಡುವೆ ಬರುವ ಕಲಾಸಿಪಾಳ್ಯಂ ಬಡಾವಣೆ. ಈಗ ಅಲ್ಲಿ ಲೋರಿ ಆಫೀಸ್‌ಗಳು ಬಂದು ಮನೆಗಳೆಲ್ಲಾ ಇಲ್ಲವಾಗಿವೆ. ಇಲ್ಲಿ ನಮ್ಮ ಬಾಲ್ಯದ ಒಂದು ಸವಿನೆನಪೆಂದರೆ ವರುಷಕ್ಕೊಮ್ಮೆ ಬರುತ್ತಿದ್ದ ಅಂಬಾಸೆಡರ್ ಕಾರು, ಅದರಿಂದ ಝುಗಝುಗಿಸುವ ಸೀರೆ ಉಟ್ಟು ಕೈಗಳಲ್ಲಿ ಮೊರದ ಬಾಗಿನ ಹಿಡಿದು ಬರುತ್ತಿದ್ದ ಜಿ.ವಿ. ಅರುಣ ಅವರ ತಾಯಿ ಲಕ್ಷ್ಮಮ್ಮ ಅಂದರೆ ಜೀವಿಯವರ ಧರ್ಮಪತ್ನಿ. ಲಕ್ಷ್ಮಮ್ಮನವರು ಬಾಗಿನದಲ್ಲಿ ಎಳ್ಳು ಬೆಲ್ಲ ಸಕ್ಕರೆ ಅಚ್ಚುಗಳು, ಪುಟ್ಟ ಆಟಿಗೆಗಳು. ನಮಗೆ ಅತೀವ ಸಂತಸ ಕೊಡುತ್ತಿದ್ದುದು ಅದೊಂದೇ.

ಹಳೆಕಾಲದ ಕಷ್ಟಗಳು, ಸಾಲಗಳು, ಸತ್ತವರು ಬಿಟ್ಟು ಹೋಗುವ ಜವಾಬ್ದಾರಿಗಳು, ಸಿಟ್ಟು ಬಂದಾಗ ಹೇಳುವ 'ಅವ್ರನ್ನೆ ಹೋಗಿ ಕೇಳ' ಎಂಬ ನುಡಿಮುತ್ತು.

ಪೂರ್ಣಿಮಾರವರೆ, ಚೆನ್ನಾಗಿ ಬರೆದಿರುವಿರಿ. ನಾನು ಬರೆಯುವುದು ಹೀಗೆಯೇ ಇರಲೆಂದು ನನ್ನ ಆಶಯ. ಇನ್ನೂ ಹೆಚ್ಚಿಗೆ ಒಂದು ಕಿರುಕಾದಂಬರಿ ಬರೆಯಿರಿ.

ಇಲ್ಲಿ 220ನೇ ದಾಸೋಹದಲ್ಲಿ ಪ್ರಸ್ತುತಪಡಿಸಿದ ಎಲ್ಲಾ 20 ಬರಹಗಾರರ ಪ್ರಸ್ತುತಿಗಳ ಬಗ್ಗೆ ನನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದೇನೆ. ದಾಸೋಹದ ಅಧ್ಯಕ್ಷತೆ ವಹಿಸುವುದರ ಜೊತೆಗೇ ನನ್ನ ಕೆಲವಾರು ಸ್ವರಚಿತ ಕವನಗಳನ್ನು ವಾಚಿಸಲು ಅವಕಾಶ ಮಾಡಿಕೊಟ್ಟ ಸಂಚಾಲಕರಿಗೆ ಹಾಗೂ ನನ್ನ ಅನಿಸಿಕೆಗಳಿಗೆ ಸ್ಪಂದಿಸಿದ ಎಲ್ಲಾ ದಾಸೋಹಿಗಳಿಗೂ ವಂದನೆಗಳು.

***